ಪ್ರಚಾರ ಪುಸ್ತಕ ಮಾಲೆ

238

ದುರ್ಗಸಿಂಹ

ರಾಮೇಗೌಡ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ–೨೩೮

ದುರ್ಗಸಿಂಹ

ರಾಮೇಗೌಡ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

1983

ಮೊದಲನೆಯ ಮುದ್ರಣ : ೧೯೭೩
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು
ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ "ಸೆನೆಟ್" ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರಿಕೃತವಾಗದೆ ನಾಡಿನ ಮೂಲೆಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಪ್ರಸಾರಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು,

ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವ ವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋ ದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲಭಾವನೆ ಮೂಡು ವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ಇನ್ನೂರಮೂವತ್ತೈದು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ರಾಮೇಗೌಡ (ರಾಗೌ) ಅವರ 'ದುರ್ಗಸಿಂಹ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು

ಕೆ. ಎಸ್. ಹೆಗ್ಡೆ
ಕುಲಪತಿ

ನನ್ನ ಮಾತು

ದುರ್ಗಸಿಂಹ ಕನ್ನಡದ ಒಬ್ಬ ಜನಪ್ರಿಯ ಕವಿ. ಅವನ 'ಪಂಚತಂತ್ರ' ಅನೇಕ ಕಾರಣಗಳಿಂದ ಗಮನ ಸೆಳೆದಿರುವ ಕೃತಿ. ಪ್ರಚಲಿತ ವಿಷ್ಣುಶರ್ಮನ ಪಂಚತಂತ್ರವನ್ನು ಬಿಟ್ಟು, ಉಪಲಬ್ಧವಿರದ ವಸುಭಾಗ ಭಟ್ಟನ ಕೃತಿಯನ್ನು ಅನುಸರಿಸಿದ್ದರಿಂದ ರಾಷ್ಟ್ರೀಯ ವ್ಯಾಪ್ತಿಯೊಂದು ಇದಕ್ಕಿದೆ. ಇಂತಹ ಕೃತಿಯನ್ನು ಕುರಿತು ಈಗಾಗಲೆ ಅನೇಕ ಅಧ್ಯಯನಗಳು ನಡೆದಿವೆ. ಪ್ರಸ್ತುತ 'ದುರ್ಗಸಿಂಹ' ಇದಕ್ಕೊಂದು ಹೊಸ ಸೇರ್ಪಡೆ. ಶಾಸ್ತ್ರವೂ ಅದೇ ಸಮಯದಲ್ಲಿ ಕಾವ್ಯವೂ ಆಗಿರುವ 'ಪಂಚತಂತ್ರ'ದ ನಾನಾ ಮುಖಗಳ ಪರಿಶೀಲನೆ ಇಲ್ಲಿದೆ. ಈ ಪುಸ್ತಿಕೆ ಸಹೃದಯರಿಗೆ ಪ್ರಿಯವಾಗುತ್ತದೆಂದು ನಂಬಿದ್ದೇನೆ.

ಇದನ್ನು ಪ್ರಸಾರಾಂಗದ 'ಪ್ರಚಾರ ಪುಸ್ತಕ ಮಾಲೆ'ಯಲ್ಲಿ ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ. ಇದಕ್ಕಾಗಿ ನಿರ್ದೇಶಕರಾದ ಶ್ರೀ ಕೆ. ಟಿ. ವೀರಪ್ಪನವರಿಗೆ ಕೃತಜ್ಞನಾಗಿದ್ದೇನೆ. ತ್ವರಿತವಾಗಿ ಮುದ್ರಿಸಿದ ವಿಶ್ವವಿದ್ಯಾನಿಲಯದ ಮುದ್ರಣಾಲಯದವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ ರಾಗೌ
ಮಾನಸಗಂಗೋತ್ರಿ, ಮೈಸೂರು-೬

ಪರಿವಿಡಿ

೧.	ಕವಿಪರಿಚಯ	೧
೨.	ಪಂಚತಂತ್ರಂ	೮
೩.	ಆಕರ	೨೨
೪.	ಉಪಕಥೆಗಳು	೨೯
೫.	ನೀತಿ	೪೬
೬.	ವಸ್ತುವಿಮರ್ಶೆ	೫೭
೭.	ಭಾಷೆ, ಶೈಲಿ	೬೯
೮.	ಮುಕ್ತಾಯ	೭೩
	ಗ್ರಂಥಋಣ	೭೬

೧. ಕವಿಪರಿಚಯ

ಕನ್ನಡ ಸಾಹಿತ್ಯ ಹತ್ತನೆಯ ಶತಮಾನದ ತರುವಾಯ ಇಳಿಮುಖವಾದಂತೆ ತೋರಿ, ಮತ್ತೆ ಹನ್ನೆರಡನೆಯ ಶತಮಾನದ ಹೊತ್ತಿಗೆ ಪ್ರಜ್ವಲಿಸಿತು. ಈ ಎರಡು ಭಿನ್ನ ಸಾಹಿತ್ಯಿಕ ಯುಗಗಳ ನಡುವೆ ಕೊಂಡಿಯಾಗಿ ಕಾಣಿಸಿಕೊಂಡ ದುರ್ಗಸಿಂಹ ಕ್ರಾಂತಿ ಪೂರ್ವಸ್ಥಿತಿಯನ್ನು ಪ್ರತಿನಿಧಿಸುವಂತೆ ತೋರುತ್ತಾನೆ. ಪಂಪ ರನ್ನಾದಿಗಳ ಭಾರತ ಪುರಾಣಾದಿ ವಸ್ತುರಚನೆಯ ಸಂಪ್ರದಾಯವನ್ನು ಒಂದನೆಯ ನಾಗವರ್ಮನೇ ಸಡಿಲಿಸಿದಂತೆ ತೋರಿದರೂ, ಅವರ ಮಾರ್ಗೀಯ ಬಂಧದಿಂದ ಸಂಪೂರ್ಣ ಕಳಚಿಕೊಂಡನೆಂದು ಹೇಳುವಂತಿಲ್ಲ. ಈ ದೃಷ್ಟಿಯಿಂದ ನೋಡಿದರೆ ದುರ್ಗಸಿಂಹನೂ ಅವನನ್ನೇ ಹೋಲುತ್ತಾನೆಂಬುದು ನಿಜ. ಆದರೆ ಸಂಸ್ಕೃತದ ಜನಪ್ರಿಯ ಕೃತಿಯೊಂದನ್ನು ಕನ್ನಡಕ್ಕೆ ತಂದುಕೊಡುವುದರ ಮೂಲಕ ತನ್ನ ಹಿಂದಿನ ಪರಂಪರೆಯನ್ನು ಮುರಿದನು, ಮುಂದಿನ ಪರಿವರ್ತನೆಗೆ ಹತ್ತಿರವಾದನು. ರಚನೆಯಲ್ಲಿ ಪಂಪಸಂಪ್ರದಾಯದ ಮಾರ್ಗೀಯ ಶೈಲಿಯೇ ಇದ್ದರೂ, ಮೃಗ ಪಕ್ಷಿಗಳ ಕಥೆಗಳನ್ನು ಹೇಳುವುದರ ಮೂಲಕ ಸಾಮಾನ್ಯನ ಪ್ರಜ್ಞೆಗೆ ಸಮೀಪವಾಗಲು ದುರ್ಗಸಿಂಹ ಹವಣಿಸಿದಂತೆ ತೋರುತ್ತದೆ.

ದುರ್ಗಸಿಂಹ ಹನ್ನೊಂದನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಒಬ್ಬ ಜನಪ್ರಿಯ ಕವಿ. ಇವನ ಕೃತಿ ಹೆಸರಾಂತ 'ಪಂಚತಂತ್ರಂ'. ಕವಿಯೇ ತನ್ನ ಕಾವ್ಯದ ಪ್ರತಿ ಪ್ರಕರಣದ ಕೊನೆಯಲ್ಲಿ "ಶ್ರೀಮನ್ಮಹಾ ಸಂಧಿವಿಗ್ರಹಿ ದುರ್ಗಸಿಂಹ ವಿರಚಿತಮಪ್ಪ ಪಂಚತಂತ್ರದೊಳ್" ಎಂದು ಹೇಳಿಕೊಂಡಿದ್ದಾನೆ. ಇವನ ಕಾಲದ ಬಗ್ಗೆ ನಿಶ್ಚಿತ ಆಧಾರಗಳಿವೆ. ಪಂಚತಂತ್ರದ ಪದ್ಯಗಳನ್ನು

ಮಲ್ಲಿಕಾರ್ಜುನ ತನ್ನ 'ಸೂಕ್ತಿ ಸುಧಾರ್ಣವ'ದಲ್ಲಿ ಉಲ್ಲೇಖಿಸಿರುವುದರಿಂದ ಅವನ ಪೂರ್ವದಲ್ಲಿದ್ದ ಕವಿಯೆಂಬುದು ಸ್ಪಷ್ಟವಾಗುವುದು. ಆಶ್ರಯದಾತ ರಾಜ ಇನ್ನೊಂದು ಗಟ್ಟಿ ಆಧಾರ. ಕೃತಿಯ ರಚನಾ ಕಾಲವನ್ನು ಗ್ರಂಥಾಂತ್ಯದಲ್ಲಿ ಹೀಗೆ ಹೇಳಿದೆ:

ಅತಿ ಸಂಪನ್ನತೆವೆತ್ತ ಸದ್ಗೃಹನಿವಾಸ ಸ್ಥಾನಮಾದ ಪ್ರಜಾ
ಪತಿ ಸಂವತ್ಸರ ಚೈತ್ರಮಾಸ [1]ಸಿತಪಕ್ಷ ದ್ವಾದಶೀ[2]ತಾರಕಾ
ಪತಿವಾರಂ ಬರೆ ಪಂಚತಂತ್ರಮೆಸೆದತ್ತೀ ಧಾತ್ರಿಯೊಳ್ ದುರ್ಗನಿ
ರ್ಮಿತಮುದ್ಯತ್ಕವಿ ಶೇಖರ ಪ್ರಮದಲೀಲಾ [3]ಪುಷ್ಪಿತಾಮ್ರ
ದ್ರುಮಂ

ಈ ಪದ್ಯದಲ್ಲಿ ಹೇಳಿರುವ ಶಾ.ಶ. ೯೫೩ನೆಯ ಪ್ರಜಾಪತಿ ಸಂವತ್ಸರ ಚೈತ್ರಶುಕ್ಲ ೧೨ ಸೋಮವಾರ, ಕ್ರಿ.ಶ. ೧೦೩೧ನೆಯ ಮಾರ್ಚಿ ೮ನೆಯ ತಾರೀಖು ಆಗುತ್ತದೆ–ಎಂದು ಗೋವಿಂದ ಪೈ ಅವರು ಸೂಚಿಸಿದ್ದಾರೆ. 'ಪಂಚತಂತ್ರ'ದ ಆರಾ ಪ್ರತಿಯಲ್ಲಿ ಉಕ್ತವಾಗಿದ್ದ ಈ ಕೃತಿ ರಚನಾ ಕಾಲವನ್ನು ಮೊದಲು ಗುರುತಿಸಿದವರೂ ಅವರೇ. ಈ ಮೊದಲು ಕವಿಚರಿತೆಕಾರರು ಈತನ ಕಾಲವನ್ನು ಸು. ೧೧೪೫ ಎಂದೂ, ಎ. ವೆಂಕಟಸುಬ್ಬಯ್ಯನವರ ಆಕ್ಷೇಪವನ್ನು ಪರಾಮರ್ಶಿಸಿದ ಮೇಲೆ ಸು. ೧೦೨೫ ಎಂದೂ ಗ್ರಹಿಸಿದ್ದರು. ಈಗ ಕೃತಿ ರಚನಾ ಕಾಲ ಮೇಲಿನ ಪದ್ಯದಿಂದ ನಿಶ್ಚಯವಾಗಿರುವುದರಿಂದ ದುರ್ಗಸಿಂಹನ ಕಾಲವನ್ನು ೧೦೩೧ ಎಂದು ಹೇಳಬಹುದು.

---

[1] ಸಿತಪಕ್ಷ–ಶುಕ್ಲಪಕ್ಷ; [2] ತಾರಕಾಪತಿವಾರಂ–ಸೋಮವಾರ;
[3] ಪುಷ್ಪಿತಾಮ್ರ ದ್ರುಮಂ–ಹೂ ಬಿಟ್ಟ ಮಾವಿನಮರ.

ದುರ್ಗಸಿಂಹ ತನ್ನ ದೇಶ, ಮತ, ಆಶ್ರಯಗಳನ್ನು ಕುರಿತಾದ ಜೀವನ ಚರಿತ್ರೆಗೆ ಸಂಬಂಧಿಸಿದ ಕೆಲವು ವಿವರಗಳನ್ನು ಕೊಟ್ಟಿದ್ದಾನೆ. ಕರ್ಣಾಟಕದಲ್ಲಿ ತಿಲಕ ಪ್ರಾಯವಾಗಿರುವ 'ಕಿಸುಗಾಡನಾಡಿ'ನಲ್ಲಿ 'ಸಯ್ಯಡಿ' ಎಂಬುದು ಒಂದು ಅಗ್ರಹಾರ. ಇದು ಯಜ ಯಾಗಾದಿಗಳಿಂದ, ಮುನಿಶ್ರೇಷ್ಠರಿಂದ, ಕವಿ ವಿದ್ವಾಂಸರುಗಳಿಂದ ಮನೋಹರವಾಗಿತ್ತೆಂದು ವರ್ಣನೆ; "ಸೈಯಡಿ[1]ಕರಂ[2]ರಯ್ಯಂ" ಎಂಬುದು ಅವನ ಉಕ್ತಿ. ಇದು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿರುವ 'ಸವಡಿ' ಗ್ರಾಮವೇ ಸರಿ ಎಂಬುದಾಗಿ ರಾಜಪುರೋಹಿತರು ತೋರಿಸಿ ಕೊಟ್ಟಿದ್ದಾರೆ. ಇಲ್ಲಿ ತರ್ಕ ವ್ಯಾಕರಣ ವಾತ್ಸ್ಯಾಯನಕಾಮಶಾಸ್ತ್ರ ಮುಂತಾದವುಗಳಲ್ಲಿ ಪ್ರವೀಣನಾದ ದುರ್ಗಸಿಂಹನೆಂಬ ಬ್ರಾಹ್ಮಣನಿದ್ದನು. ಇವನ ಪತ್ನಿ ರೇವಕಬ್ಬೆ. ಇವರ ಪುತ್ರ ದುರ್ಗಮಯ್ಯ. ಇವನೂ ಕಾವ್ಯನಾಟಕ ಶಾಸ್ತ್ರಗಳಲ್ಲಿ ವಿದ್ವಾಂಸನಾಗಿದ್ದವನು. ಇವನ ಮಗ ಈಶ್ವರಾರ್ಯ. ಶೌರ್ಯ ಔದಾರ್ಯಗಳಿಂದ ಶೋಭಿಸಿದ ಈತನ ಪತ್ನಿ ರೇವಕಬ್ಬೆ ಅಥವಾ ರೇವಾಂಬಿಕೆ. ಇವರ ಮಗನೇ ನಮ್ಮ ದುರ್ಗಸಿಂಹ ಕವಿ. ಈತನ ವಂಶಜರು ಕಮ್ಮೆ ಕುಲದವರು, ಗೌತಮ ಗೋತ್ರದವರು. ಇವರು ಯಜ್ಞ ಯಾಗಾದಿಗಳಲ್ಲಿ, ವೇದಾಧ್ಯಯನಗಳಲ್ಲಿ ಆಸಕ್ತರಾಗಿದ್ದು, ಧಾರ್ಮಿಕ ಪರಿಸರದಲ್ಲಿ ಬೆಳೆದವರು. ದುರ್ಗಸಿಂಹನ ವ್ಯಕ್ತಿತ್ವವನ್ನು ಕುರಿತು ಹಲವಾರು ಪದ್ಯಗಳಿವೆ. ಅವನು ದಾನಶೂರನೂ, ಜ್ಞಾನಸ್ವರೂಪನೂ, ಸಮಸ್ತ ಜನರಿಗೆ ಪ್ರೀತಿಪಾತ್ರನಾದವನೂ, ಗೌರವಾನ್ವಿತ ಗುಣಗಳುಳ್ಳವನೂ, ಶ್ರೇಷ್ಠನೂ ಆಗಿದ್ದನೆಂದು ಇವು

---

1 ಕರಂ–ಅತಿಶಯವಾಗಿ; 2 ರಯ್ಯಂ–ರಮ್ಯ.

ಹೇಳುತ್ತವೆ. ಹೀಗೆ ತನ್ನ ಮೇಲ್ಮೆಯನ್ನು ಚಿತ್ರಿಸಿಕೊಳ್ಳುವುದರಲ್ಲಿ ಕವಿ ಎಲ್ಲೆ ಮೀರಿರುವಂತಿದೆ. ದುರ್ಗಸಿಂಹ ತನ್ನ ಆರಾಧ್ಯ ದೈವ, ಗುರು ಮತ್ತು ಆಶ್ರಯದಾತನನ್ನು ಹೇಳಿಕೊಂಡಿದ್ದಾನೆ:

> ಪರಮಾತ್ಮಂ ಪರಮೇಶ್ವರಂ[1] ಮುರಹರಂ ದೈವಂ ಮಹಾಯೋಗಿಗಳ್
> ಗುರುಗಳ್ ಶಂಕರಭಟ್ಟ[2]ರೈದೆ ಪೊರೆದಂ ಶ್ರೀಚೋಳ ಕಾಳಾನಲಂ
> ಧರಣೀಶಾಗ್ರಣಿ ಚಕ್ರವರ್ತಿ ತಿಲಕಂ [3]ಪ್ರೋನ್ಮತ್ತವೈರೀಭಕೇ
> ಸರಿಸಿಂಗಂ ಪತಿಯೆಂದೊಡುನ್ನತಿಯನಿನ್ನೇ ವರ್ಣಿಪೆಂ ದುರ್ಗನಾ

ಇದರಲ್ಲಿ "ಪರಮಾತ್ಮಂ ಪರಮೇಶ್ವರಂ ಮುರಹರಂ ದೈವಂ" ಎಂಬ ಮಾತು ಮುಖ್ಯವಾದುದು. ಹರಿಹರರಲ್ಲಿ ಭೇದ ಕಲ್ಪಿಸದ ಭಾಗವತ ಸಂಪ್ರದಾಯಕ್ಕೆ ಕವಿ ಸೇರಿದವನೆಂದು ಹೇಳಲು ಇದರಿಂದ ಸಾಧ್ಯವಾಗುವುದು. ಇವನು ಕಾಣ್ವಶಾಖೆಗೆ ಸೇರಿದವನೆಂದು ಕೆಲವರೂ, ಅದು ಸರಿಯಲ್ಲವೆಂದು ಮತ್ತೆ ಕೆಲವರೂ ವಾದಿಸಿದ್ದಾರೆ. ಇನ್ನು ಕವಿಯ ಗುರುಗಳು ಮಹಾಯೋಗಿಯಾದ ಶಂಕರಭಟ್ಟರು. ಇಲ್ಲಿನ 'ಶ್ರೀ ಚೋಳಕಾಳಾನಲಂ' ಆಶ್ರಯದಾತನಾದ ಜಯಸಿಂಹನಿಗೆ ಸಂಬಂಧಿಸಿದುದು. ಜಯಸಿಂಹ ರಾಜ್ಯವನ್ನು ವಹಿಸಿಕೊಂಡಾಗ ರಾಜೇಂದ್ರಚೋಳನಿಂದ ಪ್ರತಿಭಟನೆಯನ್ನು ಎದುರಿಸಬೇಕಾಗಿ ಬಂದಿತು. ಆಗ ಅವನನ್ನು ಸೋಲಿಸಿ 'ಚೋಳ

---

1 ಮುರಹರಂ–ಮುರ ಎಂಬ ರಾಕ್ಷಸನನ್ನು ಸಂಹರಿಸಿದವನು, ಶ್ರೀಕೃಷ್ಣ;

2 ಐದೆ ಪೊರೆದಂ–ಚೆನ್ನಾಗಿ ಕಾಪಾಡಿದವನು;

3 ಪ್ರೋನ್ಮತ್ತವೈರೀಭ ಕೇಸರಿ–ಮದಿಸಿದ ಶತ್ರುಗಳೆಂಬ ಆನೆಗಳಿಗೆ ಸಿಂಹದಂತಿರುವವನು.

ಕಾಳಾನಲ' ಎಂಬ ಬಿರುದನ್ನು ಪಡೆದಿರಬೇಕೆನಿಸುತ್ತದೆ. ಜಯಸಿಂಹನಿಗೆ ಕಳಚುರಿ ಗಾಂಗೇಯದೇವ, ಪರಮಾರ ಭೋಜ ಮತ್ತು ರಾಜೇಂದ್ರಚೋಳ–ಇವರು ಬಾಹ್ಯ ಶತ್ರುಗಳಾಗಿದ್ದರು ; ಇವರನ್ನು ಗೆದ್ದು ವಿಖ್ಯಾತನಾದವನು ತನ್ನ ಒಡೆಯ ಎಂಬುದು ಕವಿಯ ಹೆಮ್ಮೆ. ದುರ್ಗಸಿಂಹನು ಚಕ್ರವರ್ತಿಯ ಆಜ್ಞೆಯ ಪ್ರಕಾರ ಸಯ್ಯಡಿಯಲ್ಲಿ ಹರಿಹರ ಭವನಗಳನ್ನು ಕಟ್ಟಿಸಿದ ವಿಚಾರ ಪದ್ಯವೊಂದರಲ್ಲಿದೆ:

ಧರೆ ಬಣ್ಣಿಸೆ ಸಯ್ಯಡಿಯೊಳ್
ಪೊರೆದಾಳ್ದ ಸಕಲಚಕ್ರವರ್ತಿಯ ಬೆಸದಿಂ
ಹರಿಹರ ಭವನಂಗಳನ
ಚ್ಚರಿಯೆನೆ ಮಾಡಿಸಿದೆನೇಂ ಕೃತಾರ್ಥನೊ ಸಿಂಹಂ

ಈ ವಿಷಯ ಕವಿ ಭಾಗವತ ಸಂಪ್ರದಾಯದವನೆಂಬ ಪೂರ್ವೋಕ್ತ ವಿಚಾರವನ್ನು ಮತ್ತಷ್ಟು ಸಮರ್ಥಿಸುತ್ತದೆ.

ದುರ್ಗಸಿಂಹ ಆರಂಭದ ಪದ್ಯದಲ್ಲಿಯೇ ತನ್ನನ್ನು 'ದುರ್ಗವಿಭು' ಎಂದು ಕರೆದುಕೊಂಡಿದ್ದಾನೆ. ಇದರಿಂದ ಅವನು ರಾಜನ ಆಸ್ಥಾನದಲ್ಲಿ ಗೌರವಾನ್ವಿತ ಹುದ್ದೆಯಲ್ಲಿದ್ದುದು ಸ್ಪಷ್ಟವಾಗುತ್ತದೆ. ಪಂಪನ ಹಾಗೆ ಇವನೂ ಕವಿಯೂ ಕಲಿಯೂ ಆಗಿದ್ದವನು. ದುರ್ಗಸಿಂಹ ತನ್ನ ಆಶ್ರಯದಾತನಾದ ಚಾಲುಕ್ಯ ಚಕ್ರವರ್ತಿ ಜಯಸಿಂಹನಲ್ಲಿ ಸಂಧಿವಿಗ್ರಹಿಯೂ ದಂಡನಾಯಕನೂ ಆಗಿದ್ದಂತೆ ಕಾವ್ಯದಲ್ಲಿ ಉಲ್ಲೇಖವಿದೆ. ಈತನು ಇಮ್ಮಡಿ ಜಯಸಿಂಹನಾಗಿದ್ದು, ತನ್ನ ಬಹುತೇಕ ಶಾಸನಗಳಲ್ಲಿ ತನ್ನನ್ನು 'ಜಗದೇಕಮಲ್ಲ'ನೆಂದು ಕರೆದುಕೊಂಡಿರುವ ವಿಷಯ ತಿಳಿದು ಬರುತ್ತದೆ. ಇವನ ಶಾಸನಗಳು ೧೦೧೫ ರಿಂದ ೧೦೪೨ರವರೆಗೆ ದೊರೆಯುತ್ತವೆಂದು ಅಭಿಪ್ರಾಯವಿರುವುದರಿಂದ, ಈ ಅವಧಿ

ಯಲ್ಲಿ ಕವಿಯಿದ್ದನೆಂದು ಹೇಳಬಹುದು. ಕವಿ ತನ್ನ ಆಶ್ರಯ ದಾತನ ಶೌರ್ಯ, ಉದಾತ್ತತೆ, ಕ್ಷಮಾಗುಣ, ಚಾರಿತ್ರ್ಯಗಳನ್ನು ಪ್ರಶಂಸಿಸಿದ್ದಾನೆ. ಆತನು ಚಾಲುಕ್ಯ ಕುಲದೀಪಕನಾಗಿ, ಮರೆ ಹೊಕ್ಕರಾಜರ ರಕ್ಷಕನಾಗಿ ದಿಲೀಪ, ಭರತ, ನಹುಷರಂತೆ ದಶ ದಿಕ್ಕುಗಳಲ್ಲಿ ಕೀರ್ತಿಯನ್ನು ಹರಡಿ ವಿರಾಜಿಸುತ್ತಿದ್ದನಂತೆ. ಚಕ್ರವರ್ತಿ ದಂಡಾಧೀಶನೂ ಕೋದಂಡರಾಮಾಧಿಪ ಎಂಬ ಬಿರುದಾಂಕಿತನೂ ಆದ ಕುಮಾರಸ್ವಾಮಿ ಎಂಬುವನು ದುರ್ಗ ಸಿಂಹನಿಗೆ ಚಕ್ರವರ್ತಿಯಲ್ಲಿ 'ಸಂಧಿವಿಗ್ರಹಿ' ಪದವಿಯನ್ನು ಕೊಡಿಸಿದನಂತೆ. ದುರ್ಗಸಿಂಹ ತನ್ನ ಕಾವ್ಯವನ್ನು ರಾಜಾಶ್ರಯ ಪಡೆದು ಬರೆದನೆಂಬುದು ಸ್ಪಷ್ಟವೇ ಇದೆ.

ದುರ್ಗಸಿಂಹ ತನ್ನ ಹಿಂದಿನ ಅನೇಕ ಕವಿಗಳನ್ನು ಸ್ತುತಿಸಿ ದ್ದಾನೆ. ಈ ಕವಿಸ್ಮರಣೆಯಿಂದ ಆಯಾ ಕವಿಗಳ ವಿಷಯಕ್ಕೆ ದುರ್ಗ ಸಿಂಹ ಆಧಾರವಾಗುತ್ತಾನೆ. ಅನ್ಯದುರ್ಲಭವಾದ ಕೆಲವು ವಿಚಾರ ಗಳು ಇಲ್ಲಿ ದೊರೆಯುತ್ತವೆ. ಸಿಕ್ಕಿರುವ ಆಧಾರಗಳಿಗೆ ಇವು ಹೆಚ್ಚಿನ ಸಮರ್ಥನೆಯಾಗುತ್ತವೆ. ಈ ದೃಷ್ಟಿಯಿಂದ ಪೂರ್ವ ಕವಿಸ್ಮರಣೆ ಭಾಗ ಇಲ್ಲಿ ಮುಖ್ಯವಾಗುತ್ತದೆ. ಸಾಂಪ್ರದಾಯಿಕ ದೇವತಾ ಪ್ರಾರ್ಥನೆಯ ತರುವಾಯ ದುರ್ಗಸಿಂಹ ತನ್ನ ಪೂರ್ವದ ಸಂಸ್ಕೃತ ಕನ್ನಡ ಕವಿಶಾಸ್ತ್ರಕಾರರನ್ನು ಸ್ಮರಿಸಿದ್ದಾನೆ. ಸಂಸ್ಕೃತ ಗ್ರಂಥಕಾರರಲ್ಲಿ ವಾಲ್ಮೀಕಿ, ವ್ಯಾಸ, ಕೌಟಿಲ್ಯ, ಗುಣಾಢ್ಯ, ವರರುಚಿ, ಕಾಳಿದಾಸ, ಬಾಣ, ನಾರಾಯಣ, ಭಾರವಿ, ಭಟ್ಟಿ, ಮಾಘ, ರಾಜಶೇಖರ, ಕಾಮಂದಕ, ದಂಡಿ–ಇವರಿದ್ದಾರೆ. ಗುಣಾಢ್ಯನ "ಮೃದುಮಧುರ ಗಂಭೀರತರ ಪ್ರಸನ್ನ" ಕವಿತಾ ಗುಣವನ್ನು ಕೀರ್ತಿಸಿದ್ದಾನೆ. ಆದರೆ ಗುಣಾಢ್ಯನ 'ಬೃಹತ್ಕಥೆ' ದೊರೆಯುವುದಿಲ್ಲ. ಹೀಗಿರುವಾಗ ದುರ್ಗಸಿಂಹ ಮೂಲಕೃತಿ

ಯನ್ನು ನೋಡಿ ಹೇಳುತ್ತಿದ್ದಾನೆಯೊ ಅಥವಾ ಈ ಕಥೆಯನ್ನು ಸಂಸ್ಕೃತದಲ್ಲಿ ತಂದ ಯಾರಾದರೊಬ್ಬರ ಕೃತಿಯನ್ನು ನೋಡಿ ಹೇಳುತ್ತಿದ್ದಾನೆಯೊ ತಿಳಿಯದು. ಚಕ್ರವರ್ತಿ ಹರ್ಷನು ಬಾಣನಿಗೆ 'ಕವಿಚಕ್ರವರ್ತಿ' ಹೆಸರನ್ನು ಕೊಟ್ಟ ಉಲ್ಲೇಖವಿದೆ. ಇಲ್ಲಿನ ನಾರಾಯಣನನ್ನು 'ಲೋಕೋಪಕಾರ'ದ ಚಾವುಂಡರಾಯನೂ ಹೇಳಿದ್ದಾನೆ; ಆದರೆ ಇವನ ಕೃತಿಗಳಾವುವೂ ದೊರೆಯವು. ಕನ್ನಡ ಕವಿಗಳಲ್ಲಿ ಶ್ರೀವಿಜಯ, ಕನ್ನಮಯ್ಯ, ಅಸಗ, ಮನಸಿಜ, ಚಂದ್ರಭಟ್ಟ, ಪೊನ್ನ, ಪಂಪ, ಗಜಾಂಕುಶ, ಕವಿತಾವಿಳಾಸ– ಇವರಿದ್ದಾರೆ. ದುರ್ಗಸಿಂಹ ಹೇಳುವ 'ಶ್ರೀವಿಜಯರ ಕವಿಮಾರ್ಗಂ' ಎಂಬ ಮಾತು ಮುಖ್ಯವಾದುದು. ಕವಿರಾಜಮಾರ್ಗದ ಕರ್ತೃ ಶ್ರೀವಿಜಯನೆಂಬುದಕ್ಕೆ ಇದು ಆಧಾರ; 'ಕವಿಮಾರ್ಗ' ಎಂಬುದು 'ಕವಿ ರಾಜಮಾರ್ಗ'ದ ಸಂಕ್ಷಿಪ್ತರೂಪ. 'ಮಾಳವೀ ಮಾಧವ'ದ ಕನ್ನಮಯ್ಯ 'ನೇಮಿನಾಥ ಪುರಾಣ'ದ ಕರ್ಣಪಾರ್ಯನೊ ಅಥವಾ ಬೇರೆಯವನೊ ತಿಳಿಯದು. ಪೊನ್ನನು ಮುಮ್ಮಡಿಕೃಷ್ಣನಿಂದ 'ಕವಿ ಚಕ್ರವರ್ತಿ' ಬಿರುದು ಪಡೆದ ವಿಷಯ ಐತಿಹಾಸಿಕ ಉಲ್ಲೇಖದ ಒಂದು ಸಮರ್ಥನೆ. ಪಂಪನನ್ನು "ಮಾರ್ಗದ್ವಯ ಪರಿಣತ" ಎಂದು ಹೇಳುವುದರಲ್ಲಿ ಲೌಕಿಕ–ಆಗಮಿಕ ಕಾವ್ಯ ಸಂಪ್ರದಾಯಗಳ ವಿಷಯವಿದೆ. 'ಕವಿತಾ ವಿಳಾಸ' 'ಲೋಕೋಪಕಾರ'ದ ಚಾವುಂಡರಾಯನ ತಂದೆಯಿರಬೇಕು. ತನ್ನ ಗ್ರಂಥವನ್ನು ಕವಿ, ಗಮಕಿ, ವಾದಿ ಮತ್ತು ವಾಗ್ಮಿ ಶ್ರೇಷ್ಠರಾದ ಮಾದಿರಾಜಮುನಿಗಳು ತಿದ್ದಿದರೆಂದು ಹೇಳಿಕೊಂಡಿದ್ದಾನೆ. ಇದರ ಮುಂದಿನ ಪದ್ಯದಲ್ಲಿ "[1]ಉದ್ದಾಮ

---

[1] ಉದ್ದಾಮ–ಉತ್ತಮ, ಶ್ರೇಷ್ಠ.

[1]ವಾಕ್ಶ್ರೀಪತಿ ಕಯ್ಕೊಂಡ [2]ಱ್ತಿಯಿಂ ಶೋಧಿಸಿ ಬರೆದನಿದಂ [3]ಸಂದ ಗೋವಿಂದನ್" ಎಂಬ ಮಾತು ಕೂಡ ಬರುತ್ತದೆ. ಆದರೆ ಈ ಗೋವಿಂದ ಯಾರೋ ತಿಳಿಯದಾಗಿದೆ.

೨. ‘ಪಂಚತಂತ್ರಂ’

ಸಾಮಾನ್ಯವಾಗಿ ಪ್ರಾಚೀನ ಕಾವ್ಯಗಳಲ್ಲೆಲ್ಲ ಕಂಡುಬರುವ ಪರಂಪರಾಗತವಾದ ಪ್ರಾರ್ಥನಾ ರೀತಿಯಲ್ಲಿಯೇ ಪ್ರಸ್ತುತ ‘ಪಂಚತಂತ್ರ’ವೂ ಆರಂಭವಾಗುತ್ತದೆ. ಕಾವ್ಯದ ಆರಂಭದಲ್ಲಿ ವಿಷ್ಣು, ಈಶ್ವರ ಮತ್ತು ಬ್ರಹ್ಮರನ್ನು ಕ್ರಮವಾಗಿ ಸ್ತುತಿಸುವ ಪದ್ಯಗಳಿವೆ. ಆಮೇಲೆ ಸರಸ್ವತಿ, ಚಂದ್ರ, ಮನ್ಮಥ, ಸೂರ್ಯ, ವಿನಾಯಕ ಮತ್ತು ದುರ್ಗೆಯರನ್ನು ಕುರಿತ ಪದ್ಯಗಳು ಬರುತ್ತವೆ. ಇವರು ತನಗೆ ಬುದ್ಧಿಯನ್ನೂ ತನ್ನ ಕಾವ್ಯಕ್ಕೆ ಸೌಭಾಗ್ಯವನ್ನೂ ತರಲೆಂದು ಕವಿ ಹಾರೈಸಿದ್ದಾನೆ. ವಿದ್ವಾಂಸರ ಸಮೂಹ ಇವನ ಶಕ್ತಿಯನ್ನು ಬಗೆದು ಈ ಕಾವ್ಯವನ್ನು ಬರೆಯಲೆಂದು ಒತ್ತಾಯ ಪಡಿಸಿದ್ದರ ಫಲವಾಗಿ ಇದು ಉದಯಿಸಿತಂತೆ.

ದುರ್ಗಸಿಂಹನ ‘ಪಂಚತಂತ್ರ’ ಪೀಠಿಕಾ ಪ್ರಕರಣದಿಂದ ಆರಂಭವಾಗುತ್ತದೆ. ‘ಪಂಚತಂತ್ರ’ದ ಕಥೆಗಳನ್ನು ಯಾವ ಉದ್ದೇಶಕ್ಕಾಗಿ ಹೇಳಲಾಯಿತೆಂಬುದರ ಪ್ರಸ್ತಾಪ ಇದರಲ್ಲಿ ಬರುತ್ತದೆ.

---

1 ವಾಕ್ಶ್ರೀಪತಿ–ಬ್ರಹ್ಮ, ವಾಗ್ಮಿ; 2 ಅಱ್ತಿಯಿಂ–ಪ್ರೀತಿಯಿಂದ;
3 ಸಂದ–ಕೀರ್ತಿಪಡೆದ.

ಸೌರೂಪ್ಯಪುರದ ಅಮರಶಕ್ತಿ ಎಂಬ ರಾಜನಿಗೆ ಬುದ್ಧಿಹೀನರೂ ಮೂರ್ಖರೂ ಅಖಿಲ ವಿಷಯ ಕ್ರೀಡಾಸಕ್ತರೂ ಆದ ಏಕಶಕ್ತಿ, ವಸುಶಕ್ತಿ ಮತ್ತು ರುದ್ರಶಕ್ತಿ ಎಂಬ ಮೂವರು ಮಕ್ಕಳು. ಇವರಿಗೆ ಬಾಲ್ಯದಿಂದ ಸರಿಯಾದ ವಿದ್ಯಾಭ್ಯಾಸ ಮಾಡಿಸದೇ ಇದ್ದುದರಿಂದ ಸ್ವೇಚ್ಛಾಚಾರಿಗಳಾಗಲು ಸಾಧ್ಯವಾಯಿತು. ಇವರನ್ನು ಹೀಗೆಯೇ ಬಿಟ್ಟರೆ ಹಗೆಗಳಿಗೆ ವಶವಾಗುವರೆಂದು ಅರಿತ ರಾಜನು, ನಯಶಾಸ್ತ್ರ, ರಾಜ್ಯಶಾಸ್ತ್ರ, ನೀತಿಶಾಸ್ತ್ರಗಳಿಂದ ಗುಣಸಂಪನ್ನರಾಗುವಂತೆ ಮಾಡಲು ಪಂಡಿತ ಸಭೆಗೆ ಕೋರುವನು. ಅವರಲ್ಲೊಬ್ಬ ಪಂಡಿತ "ಇವರಂ ನೀತಿವಿದರಪ್ಪಂತು ತಿಳಿಪುವಂದಂ ಮುದುಗುದುರೆಯಂ ತಿದ್ದುವಂತಕ್ಕುಮ್" ಎಂಬುದಾಗಿ ನುಡಿಯುವನು. ಇದನ್ನು ವಿರೋಧಿಸಿದ ಶಾಸ್ತ್ರವಿದನಾದ ವಸುಭಾಗಭಟ್ಟ "ಶುಕಶಾರಿಕಾದಿ ಪಕ್ಷಿ ಸಮೂಹವೆಲ್ಲ ಶಿಕ್ಷಣ ಕೈಗೊಳ್ಳುವುದಿರುವಾಗ ಮಾನವ ಸಮೂಹ ಕೈಗೊಳ್ಳದೆಂಬುದು ಸರಿಯಲ್ಲ"ವೆಂದು ಹೇಳಿ ಸವಾಲನ್ನು ಸ್ವೀಕರಿಸಿದ. ಮಕ್ಕಳನ್ನು ಆರು ತಿಂಗಳಲ್ಲಿ ವಿದ್ಯಾವಂತರನ್ನಾಗಿ ಮಾಡುವೆನೆಂದು ಕೂಡ ಪ್ರತಿಜ್ಞೆ ಕೈಗೊಂಡ. ಯಾವ ರೀತಿಯಲ್ಲಿ ವಿದ್ಯೆ ಹೇಳಿದರೂ ಶೂನ್ಯಮನಸ್ಕರಾದ ಅವರನ್ನು ಕಂಡು ಚಿಂತಾಕ್ರಾಂತನಾದ ವಸುಭಾಗಭಟ್ಟ ಕೊನೆಗೆ, "ಹಾಸ್ಯರಸ ಮೊಸರ್ವಂತುಮೊಂದು ಕತೆಯಂ ಪೇಟಿಯವರ ಮನೋಧರ್ಮಮಂ ನೋಡುವೆನೆಂದು" ನಿರ್ಧರಿಸಿ ನರಿಯ ಕಥೆಯೊಂದನ್ನು ಹೇಳುವನು. ಕಥೆಯನ್ನು ಕೇಳಿದ ಬಾಲಕರು ಉತ್ಸುಕರಾಗಿ ಇನ್ನೊಂದು ಕಥೆ ಹೇಳುವಂತೆ ಒತ್ತಾಯ ಮಾಡುವರು. ಬಾಲಕರ ಈ ಕ್ರೀಡಾಶೀಲ ಮನೋಭಾವವನ್ನು ಅರಿತ ವಸುಭಾಗಭಟ್ಟ ತಾನು ಹೇಳಿದ ಕಥೆಯನ್ನು ಮತ್ತೆ ಕಲಿತು

ಹೇಳುವುದಾದರೆ ಅವರ ಇಷ್ಟವನ್ನು ನೆರವೇರಿಸುವೆನೆಂದು ಹೇಳಲು, ಅವರು ಹಾಗೆ ಮಾಡುವರು. ವಸುಭಾಗಭಟ್ಟ ತನ್ನ ಅಭೀಷ್ಟ ನೆರವೇರಿತೆಂದು ಭಾವಿಸಿ, "ಅರ್ಥಶಾಸ್ತ್ರಾಭಿಪ್ರಾಯೋಪಾಯಂಗಳಪ್ಪ" ಐದು ಕಥೆಗಳನ್ನು ಹೇಳಿ ಅವರನ್ನು ತಿದ್ದಿದನು.

ಹೀಗೆ ಹೇಳಿದ ಐದು ಕಥೆಗಳೇ 'ಪಂಚತಂತ್ರ'ಗಳಾಗಿ ಹೆಸರಾಗಿವೆ. ಭೇದ, ಪರೀಕ್ಷಾ, ವಿಶ್ವಾಸ, ವಂಚನಾ ಮತ್ತು ಮಿತ್ರಕಾರ್ಯಗಳೇ ಆ ಪಂಚತಂತ್ರಗಳು. ಅವುಗಳ ವಿವರಣೆಯನ್ನು ಕವಿಯೇ ಕೊಟ್ಟಿದ್ದಾನೆ. ಅನೇಕ ರೀತಿಯ ಕಪಟೋಪಾಯಗಳಿಂದ ಅತಿ ಸ್ನೇಹಿತರಾದವರಲ್ಲಿ ಭೇದಭಾವವನ್ನು ತರುವುದೇ ಭೇದ ; ಯಾವ ಕಾರ್ಯವನ್ನೂ ವಿಚಾರಿಸದೆ ಮಾಡಲಾಗದು ಎಂಬುದನ್ನು ತಿಳಿಸುವುದೇ ಪರೀಕ್ಷೆ ; ನಂಬದವರನ್ನು ನಂಬುವಂತೆ ಒಡಂಬಡಿಸುವುದೇ ವಿಶ್ವಾಸ; ಬೇರೆಯವರ ಮನಸ್ಸನ್ನು ತಿಳಿದು ಸಂಧಾನಮಾಡಿ ವಂಚಿಸುವುದೇ ವಂಚನೆ; ಅತಿ ಸ್ನೇಹದಿಂದ ಎಲ್ಲರನ್ನೂ ತನ್ನವರಂತೆ ಮಾಡಿಕೊಳ್ಳುವುದೇ ಮಿತ್ರಕಾರ್ಯ. ಈ ಐದು ತಂತ್ರಗಳನ್ನೂ ಒಂದೊಂದು ಪ್ರಕರಣವಾಗಿ ತೆಗೆದುಕೊಂಡು, ಒಂದೊಂದು ಮುಖ್ಯ ಕಥೆಯಿಂದ ಅವುಗಳನ್ನು ನಿರೂಪಿಸಲಾಗುತ್ತದೆ. ಕೃತಿಯ ಒಟ್ಟು ಸ್ವರೂಪವನ್ನು ಇವು ತಿಳಿಸುವುದರಿಂದ, ಕೃತಿಯ ಪ್ರಧಾನ ವಸ್ತುವೂ ಇದೇ ಆಗಿದೆ.

ಪ್ರಸ್ತುತ ಕಾವ್ಯದಲ್ಲಿ ಪ್ರಥಮ ತಂತ್ರವಾದ 'ಭೇದ ಪ್ರಕರಣ'ವೇ ಅತ್ಯಂತ ದೀರ್ಘವಾದುದು, ಸ್ವಾರಸ್ಯವಾದುದು. ಸೊಗಸಾದ ಪೀಠಿಕೆಯೊಡನೆ, ಅನೇಕ ರಸವತ್ತಾದ ಉಪಕಥೆಗಳಿಂದ

ನೆಯುತ್ತ ಕೊಂಡಿರುವ ಇದು, ಉಳಿದ ತಂತ್ರಗಳ ಪ್ರಕರಣಗಳಿಗಿಂತ ಮಹತ್ತ್ವದ್ದೆನಿಸುತ್ತದೆ. ಸಿಂಹ ಮತ್ತು ವೃಷಭಗಳಿಗೆ ಉಂಟಾಗಿದ್ದ ಸ್ನೇಹವನ್ನು ಚಾಡಿಕೋರನೂ ಕುತಂತ್ರಿಯೂ ಆದ ನರಿಯೊಂದು ಭೇದಿಸಿ ಕೆಡಿಸುವುದೇ ಈ ತಂತ್ರದ ಮೂಲಕಥೆ. ವರ್ಧಮಾನನೆಂಬ ವೈಶ್ಯನು ವ್ಯಾಪಾರಕ್ಕಾಗಿ ಹೋಗುತ್ತಿರುವಾಗ ಕಾಡಿನ ಮಧ್ಯದಲ್ಲಿ ಸಂಜೀವಕ ಎಂಬ ಎತ್ತಿಗೆ ಕಾಲು ಮುರಿಯಲು, ಅದನ್ನು ಉಪಚರಿಸಲು ಪರಿಚಾರಕರಿಗೆ ಹೇಳಿ ಪಯಣಿಸುವನು. ಆ ಕಾವಲಿನವರು ಕ್ರೂರಮೃಗಗಳಿಗೆ ಹೆದರಿ ಸಂಜೀವಕನನ್ನು ಅಲ್ಲಿಯೇ ಬಿಟ್ಟು ಹೊರಟುಹೋಗುವರು. ಈಕಡೆ ಆ ಎತ್ತು ಯಮುನಾ ತೀರವನ್ನು ಸೇರಿ ಅಲ್ಲಿನ ಎಳಗರಿಕೆಯನ್ನು ತಿಂದು, ಸವಿಯಾದ ನೀರನ್ನು ಕುಡಿದು ಸ್ವಲ್ಪದರಲ್ಲಿಯೇ ಈಶ್ವರನ ವಾಹನದಂತಾಯಿತು. ಅದೇ ಸಮಯಕ್ಕೆ ಕಾಡಿನ ಮೃಗಾಧಿಪತಿ ಪಿಂಗಳಕನೆಂಬ ಸಿಂಹ ಯಮುನೆಗೆ ನೀರು ಕುಡಿಯಲು ಬರಲು, ಸಂಜೀವಕನ ಗುಟುರು ಧ್ವನಿಯನ್ನು ಕೇಳಿ ಭಯಭರಿತವಾಗಿ ಹಿಂದಿರುಗುವುದು. ತನಗಿಂತಲೂ ಮಹಾ ಪರಾಕ್ರಮಿಯೂ ಶತ್ರುವೂ ಆಗಿರಬೇಕೆಂದು ಪಿಂಗಳಕ ಆ ಶಬ್ದದ ಹಿನ್ನೆಲೆಯನ್ನು ಕಲ್ಪಿಸುವುದು. ನಿಜಸ್ಥಿತಿಯನ್ನು ಅರಿತು ಬರಲು ಹೊರಟ ದಮನಕನೆಂಬ ನರಿ ಅದು ಎತ್ತೆಂಬುದನ್ನು ತಿಳಿದು, ಪರಿಸ್ಥಿತಿಯನ್ನು ತನಗೆ ಅನುಕೂಲವಾಗುವಂತೆ ಬಳಸಿಕೊಳ್ಳುವುದು. ಆಗ ನರಿ ಪಿಂಗಳಕ ಸಂಜೀವಕಗಳ ನಡುವೆ ದೌತ್ಯ ವಹಿಸಿ, ಅವೆರಡೂ ಸ್ನೇಹಿತರಾಗುವಂತೆ ಮಾಡುವುದು ; ಆ ಮೂಲಕ ತನ್ನ ಪ್ರಾಧಾನ್ಯತೆಯನ್ನು ಸ್ಥಾಪಿಸಿಕೊಳ್ಳುವುದು.

ಸಿಂಹ ಮತ್ತು ಎತ್ತುಗಳು ಪರಸ್ಪರ ಸ್ನೇಹಿತರಾದ ಮೇಲೆ, ಪಿಂಗಳಕನು ಪ್ರಾಣಿ ವಧೆಯನ್ನು ನಿಲ್ಲಿಸುವಂತೆ ಸಂಜೀವಕ

ಉಪದೇಶಿಸಿತು. ತನಗೆ ಪ್ರಾಣಿಗಳನ್ನು ಕೊಂದು ತಿನ್ನುವುದೇ ಧರ್ಮ ಎಂದ ಪಿಂಗಳಕನಿಗೆ, ಸಕಲಪ್ರಾಣಿ ಹಿತವೇ ಧರ್ಮವೆಂದು ಸಂಜೀವಕನ ಮಾತು. ಈ ಕುರಿತು ಅದು ನುಡಿಯುವ ಈ ಮಾತು ಹೃದಯಸ್ಪರ್ಶಿಯಾದುದು :

> ಅನಿಮಿಷ ಚಾಪದಂತೆ ಸಿರಿ ಶಾರದ ನೀರದ ಕಾಂತಿಯಂತೆ ಯೌ
> ವನದೆಸಕಂ ತೃಣಾಗ್ರಗತ ವಾಃಕಣಿಕಾಗಣದಂತೆ ಸಂದ ಜೀ
> ವನಮುದಬಿಂಬ ಭವ ಪ್ರಭವ ಜೀವಿಗೆ ನಿರ್ಮಲ ಧರ್ಮ ಮಾರ್ಗದೊಳ್
> ಮನಮೊಸೆದಾಗಳುಂ ನಡೆಯವೇಳ್ಪುದು ವಿಶ್ವಮೃಗೇಂದ್ರವಲ್ಲಭಾ

ಕಾಮನ ಬಿಲ್ಲಿನಂತೆ ಸಂಪತ್ತು, ಶರತ್ಕಾಲದ ಮೋಡದಂತೆ ಯೌವನ, ಹುಲ್ಲಿನ ತುದಿಯಲ್ಲಿರುವ ನೀರಿನ ಹನಿಯಂತೆ ಜೀವನ ನಶ್ವರವಿರುವಾಗ, ಯಾವಾಗಲೂ ನಿರ್ಮಲ ಧರ್ಮಮಾರ್ಗದಲ್ಲಿ ನಡೆಯಬೇಕೆನ್ನುವುದೇ ಇಲ್ಲಿನ ಅರ್ಥ. ಸಂಜೀವಕನ ಈ ಪ್ರವಚನದಿಂದ ಪಿಂಗಳಕ ಅಹಿಂಸಾಧರ್ಮವನ್ನು ಹಿಡಿಯಲು, ಆಹಾರವಿಲ್ಲದೆ ಉಪವಾಸಕ್ಕೆ ಬಿದ್ದ ಮೃಗಗಳು ಮುಮ್ಮಲ ಮರುಗುವುವು. ಇದು ಸಂಜೀವಕನ ಸಹವಾಸದಿಂದಾದುದೆಂದೇ ಅರಿತ ದಮನಕ ವೃಷಭ ಮತ್ತು ಸಿಂಹಗಳ ನಡುವೆ ವೈರವನ್ನು ತಂದಿಟ್ಟು ಅವುಗಳ ಸ್ನೇಹವನ್ನು ಭೇದಿಸುವುದು. ತನ್ನಿಂದಾದ ಸ್ನೇಹವನ್ನು ತಾನೇ ಕೆಡಿಸಲು ನರಿ ನಿರ್ಧರಿಸಿತು. ಪಿಂಗಳಕನ ಹತ್ತಿರ ಹೋಗಿ ಸಂಜೀವಕನು "ನಿನ್ನ ರಾಜ್ಯಕ್ಕೆ ಆಸೆಪಟ್ಟು ನಿನ್ನನ್ನು ಕೊಲ್ಲಲು ಹೊಂಚು ಹಾಕುತ್ತಿರುವ"ನೆಂದು ಹೇಳುವುದು ; ಹಾಗೆಯೇ, ಸಂಜೀವಕನಲ್ಲಿಗೆ ಹೋಗಿ ಪಿಂಗಳಕನು "ನಿನ್ನನ್ನು ಕೊಂದಲ್ಲದೆ ಬಿಡುವುದಿಲ್ಲ"ವೆಂದು ತಿಳಿಸುವುದು. ಹೀಗೆ

ದಮನಕ ಪರಸ್ಪರ ಎತ್ತಿಕಟ್ಟುವುದರ ಮೂಲಕ ಸಿಂಹ ವೃಷಭವನ್ನು ಕೊಲ್ಲುವಂತೆ ಮಾಡುವುದು.

ಮುಂದಿನದು ‘ಪರೀಕ್ಷ್ಯಾವ್ಯಾವರ್ಣನಂ’ ಪ್ರಕರಣ. ‘ಪಂಚತಂತ್ರ’ದಲ್ಲಿ ವಂಚನಾ ಪ್ರಕರಣವನ್ನು ಬಿಟ್ಟರೆ ಇದೇ ತುಂಬ ಚಿಕ್ಕದು. ಯಾವ ಕೆಲಸವನ್ನು ಮಾಡಬೇಕಾದರೂ ಪರೀಕ್ಷಿಸಿ ಮಾಡಬೇಕೆಂಬುದೇ ಇಲ್ಲಿನ ಉದ್ದೇಶ. ಇದನ್ನು ‘ಬ್ರಾಹ್ಮಣ ಮುಂಗುಸಿಯನ್ನು ಕೊಂದ ಕಥೆ’ಯ ಮೂಲಕ ವಿವರಿಸಲಾಗಿದೆ. ದೇವಶರ್ಮನಿಗೆ ಮಗುವನ್ನು ನೋಡಿಕೊಳ್ಳಲು ಹೇಳಿ ಯಜ್ಞದತ್ತೆ ಬಟ್ಟೆ ಒಗೆಯಲು ಹೋಗುವಳು. ಅದೇ ಸಮಯಕ್ಕೆ ದೇವಶರ್ಮನಿಗೆ ದಾನಕೊಡಲು ಅರಸನು ಹೇಳಿಕಳಿಸಿದ್ದರಿಂದ, ಮುಂಗುಸಿಯನ್ನು ಕಾವಲುಹಾಕಿ ಹೊರಟುಹೋಗುವನು. ಸರ್ಪವೊಂದು ಮಗುವಿನ ಕಡೆಗೆ ಬರಲು, ಮುಂಗುಸಿ ಅದನ್ನು ಕೊಂದು ಮಗುವನ್ನು ಕಾಪಾಡುವುದು. ಆ ವೇಳೆಗೆ ಬಂದ ದೇವಶರ್ಮ ಪರಿಸ್ಥಿತಿಯನ್ನು ಪರೀಕ್ಷಿಸದೆ ಸಮೀಪಿಸಿದ ಮುಂಗುಸಿಯೇ ಮಗುವನ್ನು ಕೊಂದಿರಬೇಕೆಂದು ತಿಳಿದು ಅದನ್ನು ಕೊಂದುಬಿಡುವನು. ನಿಜಸ್ಥಿತಿ ತಿಳಿದು ಪರಿತಪಿಸುತ್ತಿದ್ದ ದೇವಶರ್ಮನನ್ನು ಯಜ್ಞದತ್ತೆ ಸಂತೈಸುತ್ತ ಹೀಗೆ ಹೇಳುವಳು:

> ದಶರಥನೆಂಬ ನರೇಂದ್ರಂ
> ವಿಶದಯಶಂ [1]ಗಜಮೆಗೆತ್ತು ಋಷಿಪುತ್ರನುಮಂ
> ತ್ರಿಭುವನಪರೀಕ್ಷಿತಂ ಕೊಂ
> ದು ಶಾಪಮಂ ಭೂಪನಾಗಳಲ್ಲಿಯೇ ಪಡೆದಂ

ದಶರಥ ಆನೆಯೆಂದು ಭ್ರಮಿಸಿ ಋಷಿಪುತ್ರನನ್ನು ಕೊಂದು ಶಾಪ

---

1 ಗಜಮೆಗೆತ್ತು–ಆನೆಯೆಂದು ಭ್ರಮಿಸಿ.

ವನ್ನು ಪಡೆದ ವಿಚಾರ ಈ ಪದ್ಯದಲ್ಲಿ ಪ್ರಸ್ತಾಪಿತವಾಗಿದೆ. ಪರೀಕ್ಷಿಸದೆ ಮಾಡಿದ ಕೆಲಸ ಎಂಥ ಅನಾಹುತಕ್ಕೆ ಕಾರಣ ವಾಗುತ್ತದೆ ಎಂಬುದನ್ನು ಸುಂದರ ಪೌರಾಣಿಕ ದೃಷ್ಟಾಂತ ವೊಂದರಿಂದ ಇಲ್ಲಿ ವಿವರಿಸಲಾಗಿದೆ.

'ಪಂಚತಂತ್ರ'ದಲ್ಲಿ ಭೇದ ಪ್ರಕರಣವನ್ನು ಬಿಟ್ಟರೆ ವಿಶ್ವಾಸ ಪ್ರಕರಣವೇ ಎರಡನೆಯ ದೊಡ್ಡ ಪ್ರಕರಣ. ನಂಬದವರನ್ನು ನಂಬುವಂತೆಮಾಡಿ ಕಾರ್ಯಸಾಧನೆ ಮಾಡುವುದೇ ಇದರ ವಿಷಯ. ಇದನ್ನು 'ಗೂಗೆಗಳು ತುಂಬಿದ್ದ ಗುಹೆಯನ್ನು ಕಾಗೆ ಗಳು ಸುಟ್ಟಕಥೆ'ಯಿಂದ ವಿಶದಪಡಿಸಲಾಗಿದೆ. ಗೂಗೆ ಮತ್ತು ಕಾಗೆಗಳಲ್ಲಿ ಉಂಟಾದ ಸಣ್ಣ ದ್ವೇಷವೊಂದು ಇಂಥ ಸಮರಕ್ಕೆ ಕಾರಣವಾಗುತ್ತದೆ. ಗೂಗೆಗಳಿಗೆ ಪಕ್ಷಿಸಮೂಹದ ರಾಜಪಟ್ಟ ವನ್ನು ಕಟ್ಟಲು ಸಿದ್ಧತೆ ನಡೆದಿರುವ ಸಮಯಕ್ಕೆ ಕಾಗೆಯೊಂದು ಅಪಸ್ವರ ನುಡಿದಿದ್ದರಿಂದ ಪಟ್ಟ ತಪ್ಪಿಹೋಗುತ್ತದೆ. ಇದು ಮೂಲವಾಗಿ ಮುಂದೊಂದು ಇರುಳಿನಲ್ಲಿ ಗೂಗೆಗಳು ಕಾಗೆ ಗಳನ್ನು ಕೊಂದು ವೈರ ಸಾಧಿಸುತ್ತವೆ. ಇದರಿಂದ ಕುಪಿತನಾದ [1]ಕಾಕರಾಜ ಮೇಘವರ್ಣ ಮಂತ್ರಿಗಳನ್ನು ಬರಿಸಿ ಮುಂದಿನ ಉಪಾಯವನ್ನು ಚಿಂತಿಸುವನು. ಮಂತ್ರಿಗಳು ಬಗೆ ಬಗೆಯ ಅಭಿಪ್ರಾಯಗಳನ್ನು ಮುಂದಿಡುವರು. ಸಮಸ್ತ ಕಾಕ ಸಮೂಹ ವನ್ನು ಸೇರಿಸಿ ದಿವಸಾಂಧರಾದ ಗೂಗೆಗಳ ಮೇಲೆ ದಾಳಿ ಮಾಡು ವುದೆ ಸೂಕ್ತವೆಂದು ಒಂದರ ಅಭಿಪ್ರಾಯ. ಯಾವುದಾದರೂ ಉಪಾಯದಲ್ಲಿ ಶತ್ರುಗಳೊಡನೆ ಸಂಧಾನಮಾಡಿ ಕಾಲವನ್ನೂ ಕಾರ್ಯವನ್ನೂ ಯೋಚಿಸಿ ಬಳಿಕ ಉದ್ಯೋಗವನ್ನು ಕೈಗೊಳ್ಳುವು

---

1 ಕಾಕರಾಜ—ಕಾಗೆಗಳ ರಾಜ.

ದೆಂಬುದು ಮತ್ತೊಂದರ ಹಿತವಾದ. ಇದನ್ನು ಕೇಳಿದ ಕಾಕ ರಾಜ "ಕ್ಷತ್ರಿಯಂ ಕದನಕ್ಕಳ್ಳಲಾಗದು" ಎಂಬ ರಾಜನೀತಿಯನ್ನು ಪ್ರತಿಪಾದಿಸುವನು. ಆಗ ಚಿರಂಜೀವಿ ಎಂಬ ಮಂತ್ರಿ ಹೀಗೆ ಹೇಳುವುದು: "ನೀವು ಶತ್ರುವಿನೊಡನೆ ಕಾದಿ ಗೆಲ್ಲುವುದು ಸಂಶಯವಿಲ್ಲ. ಆದರೆ ಆ ಗೂಗೆಗಳು ಹಗಲಿನಲ್ಲಿ ಕುರುಡರಾಗಿಯೂ ನಮ್ಮಲ್ಲಿ ಹಗೆಗಳಾಗಿಯೂ ಇರುವುದರಿಂದ ಘೋರಾಂಧಕಾರದ ಸಂಕೀರ್ಣ ಗುಹಾಗಹ್ವರಗಳಲ್ಲಿ ಹೊಕ್ಕಿರುತ್ತವೆ. ಅದು ಕಾರಣ ಯಾವ ಕಾಲದಲ್ಲಿಯೂ ಉಪಾಯವಿಲ್ಲದೆ ಕಾದಿ ಕೊಲ್ಲಲೂ ಗೆಲ್ಲಲೂ ಬಾರದು." ಆದಕಾರಣ ಉಪಾಯದಿಂದ ಶತ್ರು ಬೀಡನ್ನು ಪ್ರವೇಶಿಸಿ ಸಮಸ್ತವನ್ನೂ ತಿಳಿದು ಆಮೇಲೆ ತಕ್ಕುದನ್ನು ಕೈಗೊಳ್ಳುವುದೆಂದು ತಿಳಿಸಲು, ಅದಕ್ಕೆ ಕಾಕರಾಜ ಒಪ್ಪಿಕೊಂಡಿತು. ಆ ಪ್ರಕಾರ ಉಪಾಯದಿಂದ ವೈರಿಯನ್ನು ಮುರಿಯಲು ಚಿರಂಜೀವಿ ಎಂಬ ಕಾಕ ಮಂತ್ರಿಯನ್ನು ನಿಯಮಿಸಲಾಗುವುದು. ಅವನು ತನ್ನವರಿಂದ ನಿರಾಕರಿಸಲ್ಪಟ್ಟವನೆಂದು ಶತ್ರುಗಳಲ್ಲಿ ವಿಶ್ವಾಸಮೂಡಿಸಲು ಯತ್ನಿಸುವನು.

ಇತ್ತಕಡೆ ಗೂಗೆಗಳು ಕಾಗೆಗಳನ್ನು ನಿಶ್ಶೇಷಮಾಡಿ ಬರಲು ಮತ್ತೊಮ್ಮೆ ದಾಳಿ ಕೈಗೊಳ್ಳುವುವು. ಹಾಗೆ ಬಂದಾಗ [1]ವಾಯಸನಿವಾಸದಲ್ಲಿ ಒಂದು ವಾಯಸವನ್ನೂ ಕಾಣದೆ ಹಿಂದಿರುಗುವ ಸಂದರ್ಭದಲ್ಲಿ ರಕ್ತಸಿಕ್ತ ಶರೀರನಾಗಿ ಮುಕ್ತ ಜೀವನನಾಗಿದ್ದ ಚಿರಂಜೀವಿಯನ್ನು ಕಾಣುವರು. ತಾನು ಕಾಕಮಂತ್ರಿಯೆಂದೂ [2]ಘೂಕ ಸಮೂಹದೊಡನ ಸ್ನೇಹದಿಂದಿರಿ ಎಂದುದಕ್ಕೆ

---

1 ವಾಯಸ–ಕಾಗೆ; 2 ಘೂಕ–ಗೂಗೆ.

ತಮ್ಮವರಿಂದ ತನಗೀ ಸ್ಥಿತಿ ಬಂದುದೆಂದೂ ತಿಳಿಸುವನು. ಭೀತನೂ ಅಪಮಾನಿಯೂ ಆಗಿರುವ ಚಿರಂಜೀವಿಯನ್ನು ಕಾಯುವುದೆ ನೀತಿಯೆಂದು ಕೆಲವರೂ, ಇದರಲ್ಲೇನೊ ರಹಸ್ಯವಿದೆ ಎಂದು ಮತ್ತೆ ಕೆಲವರೂ ವಾದಿಸುವರು. ಈ ವಾದ ವಿವಾದದ ತರುವಾಯ ಘೂಕರಾಜ ಚಿರಂಜೀವಿಗೆ ಆಶ್ರಯ ಕೊಡುವುದರ ಕಡೆಗೆ ಒಲಿಯುವನು. ಶರಣಾಗತರನ್ನು ರಕ್ಷಿಸುವ ತನ್ನ ಕರ್ತವ್ಯವನ್ನೂ ಇದಕ್ಕೆ ಸಮರ್ಥನೆಯಾಗಿ ನೀಡುವನು :

ಶರಣೆನೆ ಕಾವುದು ಬೇಡಿದೊ
ಡಿರದೀ[1]ವುದು [2]ತೊಡರೆ [3]ಸೆಡೆಯದಿ[4]ಱಿ[5]ವುದು ಪುಸಿಯೊಳ್
ಪೊರೆಯದೆ ನಡೆವುದದಲ್ಲದೊ
ಡರಸು [5]ಕಡಲ್ವೆರಸು [6]ಪೊಡವಿಗರಸಾದಪನೇ

ಇಲ್ಲಿ ರಾಜನ ಸಾಮಾನ್ಯ ಲಕ್ಷಣಗಳನ್ನೆ ವಿವರಿಸಲಾಗಿದೆ. ಇದಕ್ಕನುಸಾರವಾಗಿಯೇ ಚಿರಂಜೀವಿಗೆ ಆಶ್ರಯ ನೀಡಲಾಯಿತು. ಕಾಕ ಮಂತ್ರಿಯನ್ನು ತಮ್ಮ ನಿವಾಸಕ್ಕೆ ನೋವಾಗದಂತೆ ಕೊಂಡೊಯ್ಯಲಾಯಿತು. ಆದರೆ ಮಾರಿಯನ್ನು ತಂದವೆಂದು ಗೂಗೆಗಳು ಅರಿಯದಾದವು.

ಹೀಗೆ ಸ್ನೇಹಹಸ್ತವನ್ನು ಸ್ವೀಕರಿಸಿದ ಚಿರಂಜೀವಿ ಕ್ರಮೇಣ ಘೂಕರಾಜನ ನಿವಾಸಸ್ಥಾನವನ್ನೂ [7]ಉಳೂಕ ಸಮೂಹದ ಸಂಕೇತ ಸ್ಥಾನವನ್ನೂ ತಿಳಿದುಕೊಂಡಿತು. ಮುಂದೊಂದು ಹಗಲು ಚಿರಂಜೀವಿ ಮೇಘವರ್ಣನಿದ್ದಲ್ಲಿಗೆ ಬಂದು ಶತ್ರುರಾಜ

---

[1] ಈವುದು–ಕೊಡುವುದು; [2] ತೊಡರೆ–ಪ್ರತಿಭಟಿಸಿದರೆ ;
[3] ಸೆಡೆಯದೆ–ಹೆದರದೆ ; [4] ಇಱಿವುದು–ಕೊಲ್ಲುವುದು ;
[5] ಕಡಲ್ವೆರಸು–ಸಮುದ್ರಸಹಿತ; [6] ಪೊಡವಿ–ಭೂಮಿ;
[7] ಉಳೂಕ–ಗೂಗೆ.

ನನ್ನೂ ಅವನ ಪರಿವಾರವನ್ನೂ ಸುಡುವ ಉಪಾಯವನ್ನು ತಿಳಿಸುವನು. ಆ ಪ್ರಕಾರ ವಾಯಸಸಮೂಹ ಗೂಗೆಗಳ ನಿವಾಸವನ್ನು ಮುತ್ತಿದವು. ಗೂಗೆಗಳು ವಾಸವಾಗಿದ್ದ ಗಿರಿಗುಹಾ ದ್ವಾರಗಳನ್ನೂ ಮರದ ಪೊಟರೆ ಗೂಡುಗಳನ್ನೂ ಹುಲ್ಲುಪುಳ್ಳೆಗಳಿಂದ ತುಂಬಿದವು. ಬಳಿಕ ಕೊಳ್ಳಿಗಳಿಂದ ಬೆಂಕಿ ಹೊತ್ತಿಸಿದವು. ಫಲವಾಗಿ ಘೂಕ ಸಮಸ್ತವೂ ಸುಟ್ಟುಹೋಯಿತು. ಹೀಗೆ ಶತ್ರುವಿಗೆ ವಿಶ್ವಾಸ ಹುಟ್ಟುವಂತೆಮಾಡಿ ಚಿರಂಜೀವಿ ಶತ್ರುಗಳನ್ನು ಕೊಂದಿತು.

'ಪಂಚತಂತ್ರ'ದಲ್ಲಿ ಅತ್ಯಂತ ಚಿಕ್ಕ ಪ್ರಕರಣವೆಂದರೆ, 'ವಂಚನಾಪ್ರಕರಣಂ'. ಪೆಜಿರ ಬಗೆಯುಜಿದು ಸಂಧಾನಂಗೆಯ್ದು ವಂಚಿಸುವುದು" ಇದರ ಮುಖ್ಯತತ್ತ್ವ. ಇದನ್ನು 'ಮೊಸಳೆಯನ್ನು ಕಪಿ ವಂಚಿಸಿದ ಕಥೆ'ಯಿಂದ ವಿವರಿಸಲಾಗಿದೆ. ನಾನಾ ಫಲವೃಕ್ಷಗಳಿಂದ ಕಂಗೊಳಿಸಿದ್ದ ರಮ್ಯವನದಲ್ಲಿ ಕೃಷ್ಣವದನನೆಂಬ ಕಪಿ ಇತ್ತು. ಆ ಬನದ ಉತ್ತರಭಾಗದಲ್ಲಿದ್ದ ವನದಲ್ಲಿ 'ಕಕುದ್ಬಲಿ ಎಂಬ ಮತ್ತೊಂದು ಕಪಿ ಇತ್ತು. ಏಕದ್ರವ್ಯಾಭಿಲಾಷೆಯಿಂದ ಇವುಗಳೆರಡರ ನಡುವೆ ಬೆಳೆದ ವೈರದಲ್ಲಿ ಕಕುದ್ಬಲಿ ಮೇಲೆ ಬರಲು, ಕದನಕ್ಕೆ ಹೆದರಿದ ಕೃಷ್ಣವದನ ಆ ವನವನ್ನು ತ್ಯಜಿಸಿ ಸಾಗರ ಪರಿಯಂತ ಹೋಗಿ ಅಲ್ಲಿನ ಫಲಭರಿತ ಅತ್ತಿಯ ಮರವನ್ನು ಆಶ್ರಯಿಸಿತು. ಅದರ ಅಮೃತ ಸಮಾನ ಫಲಗಳಿಂದ ಕೆಲವುಕಾಲ ಸುಖವಾಗಿತ್ತು. ಒಂದುದಿವಸ ಹಣ್ಣೊಂದು ಜಾರಿ ಬಿದ್ದು ಗಂಭೀರ ಶಬ್ದವನ್ನುಂಟುಮಾಡಲು, ಕಪಿ ಅದನ್ನು ವಿನೋದವಾಗಿ ತೆಗೆದುಕೊಂಡು ಹಣ್ಣುಗಳನ್ನು ಮತ್ತೆ ಮತ್ತೆ ಈಡಾಡುತ್ತಿದ್ದಿತು. ಈ ಹಣ್ಣುಗಳನ್ನು ಕ್ರಕಚನೆಂಬ

ಮೊಸಳೆ ಪ್ರತಿದಿನವೂ ತಿನ್ನುತ್ತಿತ್ತು. ಇದು ಕಾರಣ ಎರಡಕ್ಕೂ ಸ್ನೇಹ ಬೆಳೆದು, ಮೊಸಳೆ ತನ್ನ ಮನೆಯನ್ನು ಮರೆಯಿತು.

ಇದನ್ನರಿತ ಮೊಸಳೆಯ ಹೆಂಡತಿ ಸುಕಥೆಯೆಂಬುವಳು ತನಗೆ ವಾನರ ವ್ಯಾಧಿಯಾಗಿರುವುದರಿಂದ ಕೋಡಗನ ಎದೆಯನ್ನು ತಂದುಕೊಡುವಂತೆ ಹೇಳಿದಳು. ಆಗ "ಪೆಂಡಿರ್ಗಾಸಕ್ತರಾದ ರೇನಂ ಮಾಡರ್" ಎಂದು ಕೊಂಡ ಮೊಸಳೆ ಕರ್ತವ್ಯ ನೆರವೇರಿ ಸಲು ಕಪಿಯ ಬಳಿ ಬರುವುದು. ಸಮುದ್ರ ಮಧ್ಯೆ ದ್ವೀಪದಲ್ಲಿ ರೂಪವತಿಯರಾದ ವಾನರ ನಾರಿಯರಿರುವುದನ್ನೂ, ಅವರು ಪುರುಷರನ್ನು ಪಡೆಯಲು ಕಾತರರಾಗಿರುವುದನ್ನೂ ತಿಳಿಸಿತು. ಅಲ್ಲದೆ ಆ ದ್ವೀಪದ ಫಲಗಳನ್ನು ತಿಂದುದಾದರೆ ನವಯೌವನ ಬರುವುದೆಂದೂ ಪ್ರಚೋದಿಸಿತು. ಇದರಿಂದ ಆ ಮುದಿ ಕಪಿ ಮನಸ್ಸಿನಲ್ಲಿ ಮಂಡಗೆ ತಿಂದಿತು :

ಪಲಿ ಪಕ್ವ ಫಲ [1]ಪ್ರಕರಂ
[2]ಜರೆಯಂ ಕಿಡಿಸುವುದು ವಾನರೀ [3]ಸಂದೋಹಂ
ಪುರುಷರನೆ ಬಯಸುವುದು [4]ಗಡ
ಸರಾಗದಿಂ ಬಗೆವೊಡಿನ್ನವೇಂ [5]ಸೈಪೊಳವೇ

ಎಂದು ಕಾಮಾತುರನಾಗಿ ಅಪಾಯವನ್ನು ಲೆಕ್ಕಿಸದೆ ಒಪ್ಪಿ ಕೊಳ್ಳುವುದು. ಹೀಗೆ ವಾನರಿಯರ ಆಸೆ ತೋರಿಸಿ ವಾನರನನ್ನು ಕೂರಿಸಿಕೊಂಡು ಮೊಸಳೆ ಹೊರಟಿತು. ಮೊಸಳೆಯ ವಂಚನೆ ಯನ್ನು ವಾನರ ಅರಿಯದು.

---

1 ಪ್ರಕರ–ಸಮೂಹ; 2 ಜರೆ–ನರೆ, ಮುಪ್ಪು;
3 ಸಂದೋಹಂ–ಸಮೂಹ; 4 ಗಡ–ಅಲ್ಲವೆ; 5 ಸೈಪು–ಪುಣ್ಯ.

ಹೋಗುತ್ತಿರುವಾಗ ತನ್ನ ಹೆಂಡತಿಗೆ ವಾನರ ವ್ಯಾಧಿಯಾಗಿದ್ದು ಮರ್ಕಟಗಳ ಎದೆ ಮದ್ದೆಂದಿರುವುದರಿಂದ ಆರೈದು ಹೋಗೋಣ ವೆಂದು ತಿಳಿಸುವುದು. ಮೊಸಳೆಯ ಮೋಸವರಿತ ವಂಚ ನೋಪಾಯ ಕುಶಲನಾದ ಕಪಿ ಮರು ಉಪಾಯವನ್ನು ಯೋಚಿ ಸಿತು. ವಾನರಗಳು ವಿಹರಿಸಲು ಹೋಗುವಾಗ ತಮ್ಮೆದೆ ಗಳನ್ನು ರೆಂಬೆಯ ಮೇಲಿಟ್ಟು ಹೋಗುವುವೆಂದೂ, ಅದ ಕ್ಕಾಗಿಯೇ "[1]ಕೋಡಗದೆರ್ದೆ [2]ಕೊಂಬಿನ ಮೇಲೆ" ಎಂಬ ಮಾತಿದೆಯೆಂದೂ, ಅದನ್ನು ತರುವುದಕ್ಕಾಗಿ ಹಿಂದಿರುಗ ಬೇಕೆಂದೂ ಹೇಳಿತು. ಇದನ್ನು ನಂಬಿದ ಮೊಸಳೆ ಮಾರುತವೇಗ ದಿಂದ ಅತ್ತಿಯ ಮರದ ಹತ್ತಿರಕ್ಕೆ ಬರಲು, ಆ ಕಪಿ ಕೊಂಬೆಗೆ ಜಿಗಿದು ಬದುಕಿಕೊಳ್ಳುವುದು.

'ಪಂಚತಂತ್ರ'ದಲ್ಲಿ ಭೇದ ಮತ್ತು ವಿಶ್ವಾಸ ಪ್ರಕರಣಗಳನ್ನು ಬಿಟ್ಟರೆ 'ಮಿತ್ರಕಾರ್ಯ ಪ್ರಕರಣ'ವೇ ದೀರ್ಘವಾದುದು. ಸ್ನೇಹ ದಿಂದ ಎಲ್ಲರನ್ನೂ ತನ್ನವರನ್ನಾಗಿ ಮಾಡಿಕೊಳ್ಳುವ ಕಾರ್ಯ ಸಾಧುತ್ವವನ್ನು ಇಲ್ಲಿ ಹೇಳಲಾಗಿದೆ. ಇದನ್ನು 'ಕಾಗೆ, ಆಮೆ, ಸಾರಂಗ ಮತ್ತು ಇಲಿಯ ಕಥೆ'ಯಿಂದ ವಿವರಿಸಲಾಗಿದೆ. ಈ ನಾಲ್ಕು ಪ್ರಾಣಿಗಳಲ್ಲಿ ನಡೆಯುವ ಮಿತ್ರಕಾರ್ಯ ತತ್ಪರತೆ ಇಲ್ಲಿನ ಮುಖ್ಯ ಉದ್ದೇಶವಾಗಿದೆ. ಕಾಡಿನಲ್ಲಿದ್ದ ಹಿರಣ್ಯರೋಮನೆಂಬ ಮೂಷಿಕರಾಜನಿಗೆ ಚಿತ್ರಗ್ರೀವನೆಂಬ ಕಪೋತರಾಜ ಮಿತ್ರ ನಾಗಿದ್ದನು. ಈ ಕಪೋತರಾಜ ತನ್ನ ಪರಿವಾರದ ಸಮೇತ ಇಲಿಯ ಬಿಲದ ಸಮೀಪಕ್ಕೆ ಬಂದು ಅದರೊಡನೆ ಮಾತ ನಾಡಿಯೂ ಆ ಪ್ರದೇಶದಲ್ಲಿ ಆಡಿಯೂ ಹೋಗುತ್ತಿತ್ತು.

---

[1] ಕೋಡಗ—ಕಪಿ; [2] ಕೊಂಬು—ಮರದ ರೆಂಬೆ.

ಇದನ್ನು ನೋಡುತ್ತಿದ್ದ ಬೇಡನೊಬ್ಬನು ಕಪೋತಗಳನ್ನು ಹಿಡಿಯಲು ಬಲೆಯೊಡ್ಡುವನು. ಆದರೆ ಆ ಕಪೋತಗಳು ಬಲೆಸಹಿತ ಹಾರಿಹೋಗುವುವು. ಚಕಿತನಾದ ಬೇಡ ಹೀಗೆ ಚಿಂತಿಸುವನು:

ಪಡೆಯೆ ಪೋದ ಜಡಸೂಳೆ ತನ್ನ ಕ
ನ್ನಡಿಯುಮಂ ಕಿಡಿಸಿ ಬಂದಳೆಂಬ ನಾ
ಣ್ನುಡಿಯುಮಾಯ್ತೆನಗೆ ಪೋಯ್ತು [1]ಪಾಶಮಾ
ವೆಡೆಯೊಳೆಯ್ದಿದಪೆಸೇ [2]ಖಗಂಗಳಂ

ಹೊಸದಾಗಿ ಸಂಪಾದಿಸಲು ಹೋದ ಸೂಳೆ ತನ್ನಲ್ಲಿದ್ದ ಕನ್ನಡಿಯನ್ನು ಕಳೆದು ಕೊಂಡ ರೀತಿಯಲ್ಲಿ ಬೇಡನ ಸ್ಥಿತಿಯೂ ಆಯಿತು ಎನ್ನುವಲ್ಲಿ, ಆ ಸಂದರ್ಭವನ್ನು ಅರ್ಥಪೂರ್ಣವಾಗಿ ಚಿತ್ರಿಸುವುದನ್ನು ಕಾಣುತ್ತೇವೆ. ಬೇಡ ಬೇಸತ್ತು ವಿಧಿವಂಚಿತನಾಗಿ ಹೊರಟು ಹೋಗುವನು. ಕಪೋತಗಳ ಪಾಶ ಬಂಧನವನ್ನು ಮೂಷಿಕರಾಜ ಕಡಿದು ಬಿಡಿಸುವುದು. ಹೀಗೆ ಮೂಷಿಕರಾಜ ಕಪೋತ ಸಮೂಹಕ್ಕೆ ತೋರಿದ ಉಪಕಾರವನ್ನು ಕಂಡ ಲಘುಪತಕನೆಂಬ ವಾಯಸವೊಂದು ಅದರ ಸ್ನೇಹಕ್ಕೆ ಅಪೇಕ್ಷೆ ಪಡುವುದು. ಈ ಸಂದರ್ಭದಲ್ಲಿ ಅದರ ವಿನಯ ಪೂರ್ಣ ಬೇಡಿಕೆ ಹೀಗಿದೆ:

ಮಿತ್ರ [3]ವ್ಯಸನ ತ್ರಾಣ ಪ
ವಿತ್ರೀಕೃತ [4]ಗಾತ್ರನಪ್ಪ ನಿನ್ನಂ ಕಂಡಾ
ಮಿತ್ರ ವಿಹೀನನೀಗಳ್
ಮಿತ್ರತ್ವಕ್ಕಾಸೆವಟ್ಟು ಬಂದೆಂ ನಿನ್ನೊಳ್

ಮಿತ್ರರ ಕಷ್ಟವನ್ನು ಪಾರುಮಾಡುವ ಮೂಷಿಕನಲ್ಲಿ ಮಿತ್ರರಿಲ್ಲದ

---

[1] ಪಾಶ–ಬಲೆ; [2] ಖಗ–ಪಕ್ಷಿ;

[3] ವ್ಯಸನತ್ರಾಣ–ಕಷ್ಟದಿಂದರಕ್ಷಿಸುವುದು; [4] ಗಾತ್ರ–ಶರೀರ.

ನಾಲ್ಕು ಮಿತ್ರತ್ವಕ್ಕಾಗಿ ಆಸೆಪಟ್ಟು ಬಂದುದರ ಚಿತ್ರವಿದು. ಸ್ನೇಹ ಎನ್ನುವುದು ಅಪರೂಪದ ವಸ್ತು. ಅದಕ್ಕಾಗಿ ಹಂಬಲಿಸುವವರೂ ವಿರಳ. ಇಂಥ ವಿರಳ ಜೋಡಿಯನ್ನು ಮೇಲಿನ ಪದ್ಯ ವರ್ಣಿಸುತ್ತದೆ. ಕಾಗೆಯ ಅಪೇಕ್ಷೆಗೆ ಪುರಸ್ಕಾರ ಸಿಕ್ಕಿ ಎರಡೂ ಮಿತ್ರತ್ವಕ್ಕೆ ಒಳಪಡುವುವು. ಬೇಡನ ತೊಂದರೆಯಿಂದ ತಪ್ಪಿಸುವುದಕ್ಕಾಗಿ ಕಾಗೆ ಇಲಿಯನ್ನು ಮಂಥರಕನೆಂಬ ಆಮೆಯ ಹತ್ತಿರಕ್ಕೆ ಕರೆದು ತಂದು ಸ್ನೇಹ ಬೆಳಸುವುದು. ಇಲಿ, ಕಾಗೆ ಮತ್ತು ಆಮೆ ಪ್ರೀತಿಯನ್ನು ಪರಸ್ಪರ ಹಂಚಿಕೊಳ್ಳುವುವು.

ಹೀಗೆ ಮೂರೂ ಒಂದಾಗಿರಲು, ಒಮ್ಮೆ ಬೇಡ ಬೆನ್ನಟ್ಟಿ ಬಂದ ಚಿತ್ರಾಂಗನೆಂಬ ಸಾರಂಗಕ್ಕೂ ರಕ್ಷಣೆ ನೀಡುವುವು. ಆಶ್ರಿತವಾದುದರಿಂದ ಸಾರಂಗ ಮಿತ್ರತ್ವಕ್ಕೆ ಅರ್ಹವಾಗುವುದು. ಮಿತ್ರ ಚತುಷ್ಟಯ ಕೆಲವು ಕಾಲ ಸುಖದೊಳಿದ್ದುವು. ಒಂದು ದಿವಸ ಸಾರಂಗ ಆಹಾರಾರ್ಥ ಅಡವಿಗೆ ಹೋಗಿ ಬೇಡನ ಬಲೆಗೆ ಸಿಕ್ಕಿಕೊಳ್ಳುವುದು. ಉಳಿದ ಮೂರೂ ಅದನ್ನು ಬಿಡಿಸಲು ಬಂದವು. ಇಲಿ ಬಲೆಯನ್ನು ಕಡಿಯುವ ಸಮಯಕ್ಕೆ ಸರಿಯಾಗಿ ಬೇಡ ಬಂದುಬಿಡುವನು. ಆಗ ಕಾಗೆ ಮರದ ಮೇಲಕ್ಕೆ ಹಾರುವುದು; ಇಲಿ ನೆಲದಲ್ಲಿದ್ದ ಬಿಲಕ್ಕೆ ಹೋಗುವುದು; ಸಾರಂಗ ಓಡಿಹೋಗುವುದು; ಆದರೆ ಆಮೆ ಹೋಗಲಾರದೆ ವ್ಯಾಧನಿಗೆ ಸಿಕ್ಕಿಕೊಳ್ಳುವುದು. ಆಮೆಯನ್ನು ಬಿಡಿಸಲು ಉಳಿದ ಮೂರೂ ಹೂಡಿದ ತಂತ್ರ ಅತ್ಯಂತ ಸ್ವಾರಸ್ಯವಾದುದಾಗಿದೆ. ತೊರೆಯ ತಡಿಯಲ್ಲಿ ಸಾರಂಗ ಸತ್ತಂತೆ ಮಲಗಿ, ಅದರ ಮೇಲೆ ಕಾಗೆ ಹಾರಾಡುತ್ತಿರುವುದು. ಇದನ್ನು ನೋಡಿದ ಬೇಡನು ಮೃಗದ ಆಸೆಯಿಂದ ಬಲೆಯನ್ನೂ ಆಮೆಯನ್ನೂ ನೆಲಕ್ಕಿಡುವನು. ಕೂಡಲೆ ಕಾಗೆ

ಆನೆಯಿದ್ದಲ್ಲಿಗೆ ಬಂದು ತ್ವರಿತವಾಗಿ ಮಡುವಿಗೆ ಹೊಗಿಸುವುದು. ಇತ್ತ ಚಿತ್ರಾಂಗ ಕೂಡ ಎದ್ದು ಓಡಿಹೋಗುವುದು. ಇದು ಉತ್ಪಾತದ ಸೂಚನೆಯೆಂದು ಭೀತನಾದ ಬೇಡ ಓಡುವನು. ಬಿಡುಗಡೆ ಪಡೆದ ಮಿತ್ರ ಚತುಷ್ಟಯ ಒಂದರ ಕಾಲ ಮೇಲೆ ಒಂದು ಬಿದ್ದು ಆನಂದಾಶ್ರುವನ್ನು ಪಡೆಯುವುವು. ಸ್ನೇಹದ ಒಂದು ಅಪೂರ್ವ ಮಾದರಿಯನ್ನು ಇವುಗಳಲ್ಲಿ ಕಾಣುತ್ತೇವೆ.

ಈವರೆಗೆ 'ಪಂಚತಂತ್ರಂ' ಕೃತಿಯ ಐದೂ ಪ್ರಕರಣಗಳ ಮೂಲ ಕಥೆಗಳ ವಿವರವನ್ನು ಪರಿಶೀಲಿಸಿದೆವು. ಈ ಕೃತಿಗೆ ಮೊದಲಿನಿಂದ ಕೊನೆಯವರೆಗೆ ಏಕಪ್ರಕಾರವಾಗಿ ಸಾಗುವ ಒಂದೈ ಒಂದು ವಸ್ತುವಿಲ್ಲ; ಆದರೆ, ಒಂದೇ ಒಂದು ಉದ್ದೇಶವಿದೆ. ಆ ಉದ್ದೇಶಕ್ಕೆ ಇವು ಮೂಲಭೂತವಾಗಿ ದುಡಿಯುತ್ತವೆ. ಇವು ಗಳೊಡನೆ ಸಂದರ್ಭಾನುಸಾರ ಉಪಕಥೆಗಳು ಬರುವುದಿದೆ. ಕಾವ್ಯಕ್ಕೆ ಏಕಸೂತ್ರತೆಯನ್ನು ತರುವುದು ಕಥೆಗಳಲ್ಲ; ಈ ಉದ್ದೇಶ ಮಾತ್ರ. ರಾಜನೀತಿಶಾಸ್ತ್ರವನ್ನು ಪ್ರತಿಪಾದಿಸು ವುದಕ್ಕೆ ಉಪಯೋಗವಾಗಿರುವ ಪಂಚತಂತ್ರಗಳ ಪಂಚ ಪ್ರಣಾಳಿಕಾ ಕಥೆಗಳಾಗಿ ಮೇಲಿನವು ಕಾಣಿಸಿಕೊಳ್ಳುತ್ತವೆ.

೩. ಆಕರ

ದುರ್ಗಸಿಂಹ ತನ್ನ ಕೃತಿ ರಚನೆಯ ಕಾರಣವನ್ನು ಹೇಳಿ ಕೊಳ್ಳುವ ಸಂದರ್ಭದಲ್ಲಿಯೇ 'ಪಂಚತಂತ್ರ' ಕಥೆ ಹುಟ್ಟಿದ ಹಿನ್ನೆಲೆಯನ್ನೂ ಸೂಚಿಸಿದ್ದಾನೆ. ಮೊದಲಿಗೆ ಪರಮೇಶ್ವರ ಪಾರ್ವತಿಗೆ ಅಪೂರ್ವವಾದ ಈ ಕಥೆಗಳನ್ನು ಹೇಳಿದನು. ಇದನ್ನು

ಕೇಳಿಸಿಕೊಂಡ ಪುಷ್ಪದಂತನೆಂಬ ಗಣಧರನು ಗುಣಾಢ್ಯನೆಂಬ ಹೆಸರಿನಲ್ಲಿ ಹುಟ್ಟಿ 'ಪೈಶಾಚಿ' ಭಾಷೆಯಲ್ಲಿ 'ಬೃಹತ್ಕಥೆ'ಯಾಗಿ ಇವುಗಳನ್ನು ಬರೆದನು. ಈ ಕಥಾಸಮುದ್ರದಲ್ಲಿ ಪಂಚರತ್ನ ಗಳಂತೆ ಐದು ಕಥೆಗಳನ್ನು ಆರಿಸಿಕೊಂಡು 'ಪಂಚತಂತ್ರ' ಎಂದು ಹೆಸರಿಟ್ಟು ವಸುಭಾಗಭಟ್ಟನು ಹೇಳಿದನಂತೆ. ಈ ವಸುಭಾಗ ಭಟ್ಟನ ಕೃತಿಯೇ ತನಗೆ ಮೂಲ ಆಕರವೆಂದು ದುರ್ಗಸಿಂಹ ನಿರ್ದೇಶಿಸಿದ್ದಾನೆ:

> ವಸುಭಾಗ ಭಟ್ಟ ಕೃತಿಯಂ
> [1]ವಸುಧಾಧಿಪ ಹಿತಮನಖಿಲ [2]ವಿಬುಧ ಸ್ತುತಮಂ
> ಪೊಸತಾಗಿರೆ ವಿರಚಿಸುವೆಂ
> [3]ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ

ಇದರಿಂದ ದುರ್ಗಸಿಂಹನ 'ಪಂಚತಂತ್ರ' ವಸುಭಾಗಭಟ್ಟನ ಸಂಪ್ರದಾಯದ್ದೆಂಬುದು ಸ್ಪಷ್ಟವಾಗುತ್ತದೆ. ಪ್ರಾಯಶಃ ಈ ದೃಷ್ಟಿಯಲ್ಲಿಯೇ "ಪೊಸತಾಗಿರೆ ವಿರಚಿಸುವೆಂ" ಎಂಬ ಮಾತನ್ನು ಕವಿ ಹೇಳಿರಬಹುದು. ಆದರೆ ವಸುಭಾಗಭಟ್ಟನ ಮೂಲಕೃತಿ ದೊರೆಯದಿದ್ದು, ಕೆಲವೊಂದು ತೊಡಕುಗಳನ್ನು ಎದುರಿಸಬೇಕಾಗಿರುವುದರಿಂದ ಈ ಕುರಿತ ಕೆಲವು ವಿವರಗಳನ್ನು ಗಮನಿಸಬೇಕಾಗುತ್ತದೆ.

'ಪಂಚತಂತ್ರ'ದ ಕಥೆಗಳು ಬಹಳ ಪ್ರಾಚೀನವಾದವು. ಅದರ ರಚನೆಯ ಇತಿಹಾಸ ಅಸ್ಪಷ್ಟವಾದುದು. ಮೂಲಕೃತಿ ಬಹುಶಃ

---

1 ವಸುಧಾಧಿಪ–ರಾಜ; 2 ವಿಬುಧಸ್ತುತ–ವಿದ್ವಾಂಸರಿಂದ ಹೊಗಳಿಸಿಕೊಂಡ; 3 ವಸುಮತಿಯೊಳ್–ಭೂಮಿಯಲ್ಲಿ.

ಕಾಶ್ಮೀರದಲ್ಲಿ ಕ್ರಿ.ಪೂ. ೨೦೦ ರ ಸುಮಾರಿನಲ್ಲಿ ರಚಿತವಾಗಿರಬೇಕೆಂದು ಹರ್ಟೆಲ್ ಅಭಿಪ್ರಾಯಪಡುತ್ತಾರೆ. ಇನ್ನು ಕೆಲವರ ಪ್ರಕಾರ ಮಗಧ ಇದರ ಉಗಮ ಸ್ಥಾನ. 'ಪಂಚತಂತ್ರ' ಕುರಿತು ಕೆಲಸಮಾಡಿದವರಲ್ಲಿ ಒಬ್ಬನಾದ ಥಿಯೊಡೊರ್ ಬೆನ್ಫೆ ಎಂಬುವನು ಇದುಮೂಲದಲ್ಲಿ ಬೌದ್ಧಗ್ರಂಥವಾಗಿರಬೇಕೆಂದು ಹೇಳುತ್ತಾನೆ. 'ಪಂಚತಂತ್ರ'ದ ಕಥೆಗಳ ಸಮಾನಾಂತರಗಳನ್ನು ಬೌದ್ಧಗ್ರಂಥಗಳಲ್ಲಿ ಮಾತ್ರ ಕಾಣುತ್ತಿದ್ದ ಆ ಕಾಲದಲ್ಲಿ ಇದು ಸ್ವಾಭಾವಿಕವಾದುದಾಗಿತ್ತು. ಆದರೆ 'ಪಂಚತಂತ್ರ'ದ ಮೂಲವನ್ನು ಬೇರೆದೃಷ್ಟಿಗಳಿಂದಲೂ ಶೋಧಿಸಬೇಕಾಗಿದೆ.

'ಪಂಚತಂತ್ರ'ದ ಕಥೆಗಳು ಮೂಲತಃ ಜನಪದ ಕಥೆಗಳ ಮಾದರಿಯ ಮೇಲೆ ರಚಿತವಾದವು. ಮೊದಲಿಗೆ ಇವು ಗುಣಾಢ್ಯನ 'ಬೃಹತ್ಕಥೆ'ಯಲ್ಲಿ ಉಲ್ಲೇಖವಾಗಿರುವುದರಿಂದ,[1] ಅವನೇ ಮೊದಲು ಇವುಗಳನ್ನು ಜನಪದ ಮೂಲದಿಂದ ಸಂಗ್ರಹಿಸಿರಬೇಕು. ಆಮೇಲೆ ಇವು ಕ್ರಮೇಣ ಭರತ ಖಂಡದಲ್ಲಿ ವಸುಭಾಗಭಟ್ಟ ಮತ್ತು ವಿಷ್ಣುಶರ್ಮರ ಮೂಲಕ ಎರಡು ಸಂಪ್ರದಾಯಗಳಾಗಿ ಕವಲೊಡೆದಿರಬೇಕು. ವಸುಭಾಗಭಟ್ಟ 'ಬೃಹತ್ಕಥೆ'ಯಿಂದ ಐದು ಕಥೆಗಳನ್ನು ಆಯ್ದು 'ಪಂಚತಂತ್ರ'ವಾಗಿ ಮಾಡಿದನೆಂದು ದುರ್ಗಸಿಂಹನೇನೊ ಹೇಳಿದ್ದಾನೆ. ಆದರೆ ಇದು ವಸುಭಾಗಭಟ್ಟನ ಕೃತಿಯೇ ದೊರೆತು ದೃಢಪಡುವ ತನಕ

---

1 'ಕಥಾ ಸರಿತ್ಸಾಗರ'ದಲ್ಲಿ ಪಂಚತಂತ್ರದ ಕಥೆಯಿದ್ದು, ಅದಕ್ಕೆ ಮೂಲವಾಗಿರುವ 'ಬೃಹತ್ಕಥೆ'ಯಲ್ಲಿಯೂ ಇದ್ದಿರಬೇಕೆನ್ನುವುದು ಒಂದು ಅಭಿಪ್ರಾಯ; ಆದರೆ ಅದು ಆಮೇಲೆ ಸೇರಿಕೊಂಡುದ್ದೆಂಬುದು ಇನ್ನೊಂದು ಅಭಿಪ್ರಾಯ.

ಸಂದಿಗ್ಧವಾದ ವಿಷಯ. ಪ್ರಾಯಶಃ ವಸುಭಾಗಭಟ್ಟ ಮತ್ತು ವಿಷ್ಣುಶರ್ಮ ಇಬ್ಬರಿಗೂ ಮೂಲ ಕೃತಿಯೊಂದು ಇದ್ದಿರಬೇಕು, ಅದು ಗುಣಾಢ್ಯನಿಂದ ನೇರವಾಗಿ ನಿಷ್ಪನ್ನ ವಾದುದಾಗಿರಬೇಕೆಂದು ಊಹಿಸಬಹುದಾಗಿದೆ. 'ಪಂಚತಂತ್ರ' ದಲ್ಲಿ ದಾಕ್ಷಿಣಾತ್ಯ ಮತ್ತು ಔತ್ತರೇಯ ಎಂಬೆರಡು ಪಾಠ ಸಂಪ್ರದಾಯಗಳೂ ಇವೆ. ಇವುಗಳಲ್ಲಿ ದುರ್ಗಸಿಂಹ ವಸುಭಾಗ ಭಟ್ಟನ 'ದಾಕ್ಷಿಣಾತ್ಯ' ಪಾಠ ಸಂಪ್ರದಾಯವನ್ನು ಅನುಸರಿಸಿರ ಬಹುದು. ಆದರೆ ಅದನ್ನು ನಿರ್ಧರಿಸಲು ಈಗ ಸಾಧ್ಯ ವಿಲ್ಲವಾಗಿದೆ.

'ಪಂಚತಂತ್ರ'ದ ಬಹುತೇಕ ರೂಪಾಂತರಗಳು ವಿಷ್ಣು ಶರ್ಮನ 'ಪಂಚತಂತ್ರ' ಸಂಪ್ರದಾಯದಿಂದ ಬಂದವಾಗಿವೆ. ವಸುಭಾಗಭಟ್ಟನ ಸಂಪ್ರದಾಯಕ್ಕೆ ಸೇರಿದವುಗಳೆಂದು ಹೇಳಲಾ ಗಿರುವ ಪರಿಷ್ಕರಣಗಳಲ್ಲಿ ಕೆಲವು ಮಾತ್ರ ದೊರೆತಿವೆ. ವಸುಭಾಗ ಭಟ್ಟನ ಕೃತಿಕೂಡ ವಿಷ್ಣುಶರ್ಮನ 'ಪಂಚತಂತ್ರ'ದ ಗದ್ಯಪದ್ಯ ಗಳ ಪುನಃಸಂಯೋಜನೆ, ಸಂಪಾದನೆ ಎಂದು ಆರ್ಟೋಲಾ ಅವರು ಹೇಳಿದ್ದಾರೆ. ಆದರೆ ಈ ಮಾತನ್ನು ಒಪ್ಪುವುದು ಕಷ್ಟ; ಏಕೆಂ ದರೆ, ಎರಡಕ್ಕೂ ವ್ಯತ್ಯಾಸಗಳಿವೆ.

ದುರ್ಗಸಿಂಹ ಮತ್ತು ವಿಷ್ಣುಶರ್ಮರ 'ಪಂಚತಂತ್ರ'ಗಳಲ್ಲಿ ಕೆಲವು ಸಮಾನ ಅಂಶಗಳು ಕಂಡು ಬರುತ್ತವೆ. ಕಥಾಪ್ರವೇಶದ ವಿವರ ಮತ್ತು ಉದ್ದೇಶ ಒಂದೇ ರೀತಿಯಾಗಿವೆ. 'ದಾಕ್ಷಿಣಾತ್ಯ ಜನಪದ' ಎಂಬ ಮಾತು ಎರಡರಲ್ಲೂ ಬಂದಿದೆ. ರಾಜ ಆಳು ತಿದ್ದ ನಗರದ ಹೆಸರು ದುರ್ಗಸಿಂಹನಲ್ಲಿ ಸೌರೂಪ್ಯಪುರ, ವಿಷ್ಣು ಶರ್ಮನಲ್ಲಿ ಮಹಿಳಾರೋಪ್ಯನಗರ; ಆದರೆ ರಾಜನ ಹೆಸರು ಅಮರಶಕ್ತಿ ಎಂದು ಎರಡರಲ್ಲೂ ಇದೆ. ರಾಜನ ಮೂರ್ಖ

ಮಕ್ಕಳ ಹೆಸರು ದುರ್ಗಸಿಂಹನಲ್ಲಿ ಏಕಶಕ್ತಿ, ವಸುಶಕ್ತಿ, ರುದ್ರ ಶಕ್ತಿ ಎಂದಿದ್ದರೆ, ವಿಷ್ಣುಶರ್ಮನಲ್ಲಿ ಬಹುಶಕ್ತಿ, ಉಗ್ರಶಕ್ತಿ, ಅನಂತಶಕ್ತಿ ಎಂದಿದೆ. ವಿದ್ಯೆ ಕಲಿಸಿದವನು ಇಲ್ಲಿ ವಸುಭಾಗ ಭಟ್ಟನಾದರೆ, ಅಲ್ಲಿ ವಿಷ್ಣುಶರ್ಮ ಆಗುತ್ತಾನೆ. ಇಷ್ಟುಬಿಟ್ಟರೆ ಉಳಿದೆಲ್ಲ ವಿಚಾರಗಳಲ್ಲಿ ಕಥಾಮುಖ ಒಂದೇ.

ತಂತ್ರಗಳ ವಿಚಾರಕ್ಕೆ ಬಂದರೆ ಎರಡರಲ್ಲೂ ಐದು ತಂತ್ರ ಗಳೇ ಇವೆ. ದುರ್ಗಸಿಂಹನಲ್ಲಿ ಅವು ಭೇದ, ಪರೀಕ್ಷಾ, ವಿಶ್ವಾಸ, ವಂಚನಾ ಮತ್ತು ಮಿತ್ರಕಾರ್ಯ ಎಂಬ ಪ್ರಕರಣಗಳಾದರೆ, ವಿಷ್ಣುಶರ್ಮನಲ್ಲಿ ಇವು ಮಿತ್ರಭೇದ, ಮಿತ್ರ ಸಂಪ್ರಾಪ್ತಿ, ಕಾಕೋಲೂಕಿಯ, ಲಬ್ಧ ಪ್ರಣಾಶ ಮತ್ತು ಅಪರೀಕ್ಷಿತ ಕಾರ ಕತ್ವಗಳಾಗುತ್ತವೆ. ಪ್ರಥಮ ತಂತ್ರ ಎರಡರಲ್ಲೂ ಒಂದೇ ರೀತಿ ಯದಾಗಿದ್ದು, ಉಳಿದವು ಅವು ಬರುವ ಕ್ರಮಗಳಲ್ಲಿ ಮಾತ್ರ ಬದಲಾಗುತ್ತವೆ. ಪ್ರಾಣಿ ಮತ್ತು ಮಾನವಪಾತ್ರಗಳ ಹಲವಾರು ಹೆಸರುಗಳಲ್ಲಿ ಸಾಮ್ಯವಿದೆ. ಪ್ರಥಮ ತಂತ್ರದ ವರ್ಧಮಾನ, ಸಂಜೀವಕ, ಪಿಂಗಳಕ, ಕರಟಕ, ದಮನಕ–ಇವು ಕೆಲವು ನಿದರ್ಶನಗಳು. ಕಥೋಪಕಥೆಗಳಲ್ಲಿ ಕೆಲವು ವ್ಯತ್ಯಾಸಗಳಿರುವು ದಾದರೂ, ಸಾಮ್ಯವನ್ನೂ ಗುರುತಿಸುತ್ತೇವೆ. ಕೀಲನೆತ್ತಲು ಹೋದ ಕೋತಿಯ ಕಥೆ, ನರಿ ಮತ್ತು ನಗಾರಿಯ ಕಥೆ. ಕಾಗೆ ಕೃಷ್ಣ ಸರ್ಪವನ್ನು ಕೊಂದ ಕಥೆ, ಮೊಲ ಸಿಂಹವನ್ನು ಕೊಂದ ಕಥೆ, ತಗಣೆಗೆ ಆಶ್ರಯಕೊಟ್ಟು ಸತ್ತ ಹೇನಿನಕಥೆ, ಇತ್ಯಾದಿ ಗಳನ್ನು ಉದಾಹರಿಸಬಹುದಾಗಿದೆ.

ಸಾಮಾನ್ಯವಾಗಿ ರಾಜಕುಮಾರರು ಕಥೆ ಕೇಳುತ್ತಿದ್ದಂತೆ ಎಲ್ಲಿಯೂ ಮಧ್ಯದಲ್ಲಿ ಪ್ರಶ್ನಿಸುವುದಾಗಲಿ, ಅದಕ್ಕೆ ಉತ್ತರರೂಪ ದಲ್ಲಿ ಕಥೆಗಾರ ಕಥೆಯನ್ನು ಸಾಗಿಸುವುದಾಗಲಿ ಕಂಡು ಬರುವು

ದಿಲ್ಲ. ಏನಿದ್ದರೂ ಈ ಸಂವಾದ ಕಥಾ ಪ್ರವೇಶದಲ್ಲಿ ಕಾಣಿಸಿಕೊಂಡು ಆಮೇಲೆ ಹಿನ್ನೆಲೆಯಾಗಿ ಬಿಡುವುದೇ ಸಾಮಾನ್ಯ. ಆದರೆ ಇದಕ್ಕೆ ಅಪವಾದವೆನ್ನುವಂತೆ ವಿಷ್ಣುಶರ್ಮನ 'ಪಂಚತಂತ್ರ'ದ 'ಲಬ್ಧ ಪ್ರಣಾಶ'ದ ಪ್ರಾರಂಭದಲ್ಲಿ ಮಾತ್ರ ಇದು ಕಾಣಿಸಿ ಕೊಳ್ಳುವುದು ಸ್ವಾರಸ್ಯದ ಸಂಗತಿಯಾಗಿದೆ. ಆದರೆ ದುರ್ಗಸಿಂಹನಲ್ಲಿ ಇಂಥ ಯಾವುದೇ ಉಲ್ಲೇಖ ಸಿಗುವುದಿಲ್ಲ.

ಇಂಥ ಸದೃಶ ಮತ್ತು ಸದೃಶವಲ್ಲದ ಅಂಶಗಳನ್ನು ನೋಡಿದಾಗ, ದುರ್ಗಸಿಂಹ ಸದೃಶ ಅಂಶಗಳನ್ನು ವಿಷ್ಣು ಶರ್ಮನಿಂದ, ಸದೃಶವಲ್ಲದ ಅಂಶಗಳನ್ನು ವಸುಭಾಗ ಭಟ್ಟ ನಿಂದ ಪಡೆದಿರಬೇಕೆಂಬ ಭಾವನೆ ಬರಬಹುದು. ಆದರೆ ಹೀಗೆ ತಿಳಿಯಲು ದುರ್ಗಸಿಂಹನ 'ಪಂಚತಂತ್ರ'ದಲ್ಲಿ ಯಾವುದೇ ಸಮರ್ಥನೆಯಿಲ್ಲ. ಇದಕ್ಕೆ ಬದಲಾಗಿ ವಸುಭಾಗಭಟ್ಟ ಮತ್ತು ವಿಷ್ಣು ಶರ್ಮರ ಕೃತಿಗಳಿಗೆ ಸಮಾನ ಮೂಲವೊಂದು ಇದ್ದಿರ ಬೇಕೆಂದು ಹೇಳುವುದೇ ಸರಿಯೆಂದು ತೋರುತ್ತದೆ.

ಇಷ್ಟೆಲ್ಲ ತೊಡಕುಗಳು ಉದ್ಭವಿಸುವುದಕ್ಕೆ ಕಾರಣ ವಸು ಭಾಗ ಭಟ್ಟನ ಸಂಪ್ರದಾಯದ ಮೂಲ ಮಾತೃಕೆ ಉಪಲಬ್ಧ ವಿಲ್ಲದಿರುವುದು. ವಸುಭಾಗಭಟ್ಟನ ಕೃತಿ ಯಾವ ಭಾಷೆಯ ಲ್ಲಿತ್ತೆಂಬುದು ನಮಗೆ ತಿಳಿಯದು. ಆದರೆ ದುರ್ಗಸಿಂಹ ಉದಾಹ ರಿಸಿರುವ ಶ್ಲೋಕಗಳು ಸಂಸ್ಕೃತದವಾಗಿರುವುದರಿಂದ, ಅವನಿಗೆ ಮೂಲವಾಗಿರುವ ವಸುಭಾಗ ಭಟ್ಟನ ಕೃತಿ ಸಂಸ್ಕೃತದಲ್ಲಿದ್ದಿರ ಬೇಕೆಂಬ ಊಹೆಗೆ ಬರಬಹುದು. ಆದರೆ ಈ ಸಂದರ್ಭದಲ್ಲಿ ದುರ್ಗ ಸಿಂಹ ಅನ್ಯ ಮೂಲಗಳಿಂದಲೂ ಶ್ಲೋಕಗಳನ್ನು ಆಯ್ದು ಕೊಂಡಿರುವುದನ್ನು ಗಮನಿಸಬೇಕಾಗಿದೆ. ವಸುಭಾಗಭಟ್ಟನ

‘ಪಂಚತಂತ್ರ’ ಸಂಪ್ರದಾಯವೊಂದು ದಕ್ಷಿಣ ಭಾರತದಲ್ಲಿದ್ದು, ಅಲ್ಲಿಂದ ಜಾವ, ಬರ್ಮ, ಮಲಯಾದಿ ದ್ವೀಪಗಳಿಗೆ ಹೋಗಿರಬೇಕೆಂದು ವಿದ್ವಾಂಸರ ಅಭಿಮತ. ವಸುಭಾಗ ಭಟ್ಟನ ಹೆಸರನ್ನು ಸೂಚಿಸುವ ಗ್ರಂಥಗಳು ಐದು: ಯವನ ದ್ವೀಪದಲ್ಲಿನ ‘ತಂತ್ರಿ’ ಹೆಸರಿನ ಪಂಚತಂತ್ರ, ಲೇವಾಸ್ ದೇಶದ ಪಂಚತಂತ್ರ, ಸಂಸ್ಕೃತದ ‘ತಂತ್ರೋಪಾಖ್ಯಾನ’, ತಮಿಳಿನ ‘ಪಂಚತಂತ್ರ ವಚನ’ ದುರ್ಗಸಿಂಹನ ‘ಪಂಚತಂತ್ರ’. ಇವುಗಳಲ್ಲಿ ತಮಿಳಿನ ‘ಪಂಚತಂತ್ರವಚನ’ ಸಂಸ್ಕೃತದ ‘ತಂತ್ರೋಪಾಖ್ಯಾನ’ದ ಭಾಷಾಂತರವಿರಬಹುದು. ಆದರೆ ದುರ್ಗಸಿಂಹನ ‘ಪಂಚತಂತ್ರ’ಕ್ಕೂ ಉಳಿದ ‘ಪಂಚತಂತ್ರ’ಗಳಿಗೂ ಯಾವ ಬಗೆಯ ಸಂಬಂಧವಿದೆ ಮತ್ತು ದುರ್ಗಸಿಂಹನಿಗಿದ್ದ ಮೂಲಪಾಠ ಯಾವುದು ಎಂಬುದನ್ನು ನಿರ್ಧರಿಸಲು ಸದ್ಯಕ್ಕೆ ಸಾಧ್ಯವಿಲ್ಲ. ದುರ್ಗಸಿಂಹನ ‘ಪಂಚತಂತ್ರ’ಕ್ಕೆ ಸಂಸ್ಕೃತದ ‘ತಂತ್ರೋಪಾಖ್ಯಾನ’ ಮೂಲವಾಗಿರಬೇಕೆಂದೇನೊ ಹೇಳಲಾಗಿದೆ. ಆದರೆ ‘ತಂತ್ರೋಪಾಖ್ಯಾನ’ದಲ್ಲಿ ಮೂರೇ ಪ್ರಕರಣಗಳು ಇರುವುದು; ಕಥಾಪೀಠಿಕೆ ಕೂಡ ಇಲ್ಲಿ ಕಂಡುಬರುವುದಿಲ್ಲ. ಮೊದಲನೆಯ ನಂದಕ ಪ್ರಕರಣದ ಚೌಕಟ್ಟು ದುರ್ಗಸಿಂಹನ ‘ಪಂಚತಂತ್ರ’ದ ಭೇದ ಪ್ರಕರಣದಂತೆಯೇ ಇರುವುದು ಮಾತ್ರ ಗಮನಾರ್ಹ.

ದುರ್ಗಸಿಂಹ, ವಸುಭಾಗ ಭಟ್ಟನ ‘ಪಂಚತಂತ್ರ’ವನ್ನು ಅನುಸರಿಸಿದ್ದೇನೆ ಎನ್ನುವಾಗ ಅದರದೇ ಅನುವಾದವೆಂದು ಭಾವಿಸಲು ಸಾಧ್ಯವಾಗುವುದಿಲ್ಲ. ಪ್ರಾಯಶಃ ವಸುಭಾಗಭಟ್ಟನ ಸಂಪ್ರದಾಯವನ್ನು ಅನುಸರಿಸಿದ್ದೇನೆಂದು ಆತನ ಅಭಿಪ್ರಾಯವಿರಬಹುದು. ಬಹುಶಃ ದಕ್ಷಿಣ ದೇಶದವನೇ ಇರಬಹುದಾದ ವಸುಭಾಗ ಭಟ್ಟನ ದಾಕ್ಷಿಣಾತ್ಯ ‘ಪಂಚತಂತ್ರ’ ಸಂಪ್ರದಾಯವನ್ನು

ಆತ ಅನುಸರಿಸುವುದು ಸಹಜವೇ ಆಗಿದೆ. ಹಾಗೆ ಮಾಡುವಾಗ ಬೇರೆ ಬೇರೆ ಮೂಲಗಳಿಂದ ಕಥೆಗಳನ್ನೂ ಕಥಾಂಶಗಳನ್ನೂ ಹೋಲಿಕೆ ದೃಷ್ಟಾಂತ ವಿಚಾರಗಳನ್ನೂ ಸಂಗ್ರಹಿಸಿ ತಂದು ಕೊಂಡಿರಬೇಕೆಂದು ಕಾಣುತ್ತದೆ; ಸ್ವಕೀಯವಾದವೂ ಸೇರಿರ ಬಹುದು.

೪. ಉಪಕಥೆಗಳು

'ಪಂಚತಂತ್ರ'ದ ಐದೂ ತಂತ್ರಗಳನ್ನು ಹೇಳಲು ಐದು ಪ್ರಧಾನಕಥೆಗಳು ಬಂದಿದ್ದು, ಇವುಗಳ ವಿವರವನ್ನು ಹಿಂದೆ ನೋಡಲಾಗಿದೆ. ಈ ಪ್ರಧಾನಕಥೆಗಳ ನಡು ನಡುವೆ ಉಪಕಥೆ ಗಳು ಬರುತ್ತವೆ, ಈ ಉಪಕಥೆಗಳಲ್ಲಿ ಕೆಲವೊಮ್ಮೆ ಒಳಕಥೆಗಳೂ ಇವೆ. ಪ್ರಧಾನ ಕಥೆಗಳ ಯಾವುದಾದರೊಂದು ಪಾತ್ರ ಇನ್ನೊಂದು ಪಾತ್ರಕ್ಕೆ ಹೇಳಿದ ರೀತಿಯಲ್ಲಿ ಇವುಗಳ ಚಿತ್ರಣವಿದೆ. ಇವು ಮೂಲಕಥೆಯ ಒಟ್ಟು ಉದ್ದೇಶವನ್ನೆ ಪೋಷಿಸಿದರೂ, ಆಯಾಸನ್ನಿವೇಶ ಸಂದರ್ಭಗಳ ಉದ್ಧೃತಗಳಾಗಿಯೊ ಪರಾಮರ್ಶೆ ಗಳಾಗಿಯೊ ಬಂದಿರುವಂತೆ ಕಾಣುತ್ತವೆ. ಏನೇ ಇದ್ದರೂ, ಇವು ಕೃತಿಯ ಗಮನಾರ್ಹ ಭಾಗವನ್ನು ಆವರಿಸಿಕೊಂಡಿವೆ; ಸ್ವಾರಸ್ಯದ ಕೇಂದ್ರಗಳಾಗಿವೆ. ಈ ಕಥೆಗಳ ವಸ್ತುವಿನಲ್ಲಿ ವೈವಿಧ್ಯ ವಿರುವುದಾದರೂ, ರಚನೆಯಲ್ಲಿ ಒಂದೇ ಮಾದರಿಯವು. ಈ ವಿಷಯದಲ್ಲಿ ಇವು ಜನಪದ ಕಥೆಗಳ ಜಾಯಮಾನದವು. ಅವು ಗಳ ತಿಳಿಯಾದ ಹಾಸ್ಯ, ಪಾತ್ರಗಳ ವಿಲಕ್ಷಣವರ್ತನೆ ಹಾಗೂ ನಿರೂಪಣಾ ಸ್ವಾರಸ್ಯಗಳು ಇಲ್ಲೂ ಇವೆ. ಹೀಗಾಗಿ ಇವು

ಕೃತಿಯ ಜೀವಾಳವೆನಿಸಿವೆ. ಈ ಕಾರಣಕ್ಕಾಗಿ ಕೆಲವು ಉಪ ಕಥೆಗಳ ಸ್ವಾರಸ್ಯವನ್ನು ನೋಡುವುದು ಅವಶ್ಯವೆನಿಸುತ್ತದೆ.

ಮೊದಲಿಗೆ 'ನರಿಯುಂ ಬಿಲನುಂ' ಕಥೆಯನ್ನೆ ತೆಗೆದುಕೊಳ್ಳ ಬಹುದು. ಇದು ಭೇದ ಪ್ರಕರಣದಲ್ಲಿ ಬರುವಂಥದು. ಸಂಜೀವ ಕನ ಕಾರಣದಿಂದಾದ ಭೀತಿಯನ್ನು ಕುರಿತು ಪಿಂಗಳಕ ಮತ್ತು ದಮನಕ ಚರ್ಚಿಸುವ ಸಂದರ್ಭದಲ್ಲಿ ಪಿಂಗಳಕ ಈ ಕಥೆಯನ್ನು ಹೇಳುತ್ತದೆ. ಸಂಜೀವಕನ ಭೀತಿಯಿಂದ ಕಾಡನ್ನು ತೊರೆಯು ಬೇಕೆ ಬೇಡವೆ ಎಂಬುದರ ಸಂಬಂಧವಾಗಿ ಪಿಂಗಳಕ ತೆಗೆದು ಕೊಳ್ಳಬೇಕೆನ್ನುವ ನಿಲುವಿನ ಪ್ರತಿಪಾದನೆಗೆ ದೃಷ್ಟಾಂತವಾಗಿ ಇದು ಬಂದಿರುವಂತಿದೆ. ಹುಲಿಯೊಂದು ಬೇಟೆಯಾಡಿ ತಂದ ಮಾಂಸವನ್ನು ಗುಹೆಯೊಳಗಿರಿಸಿ ಹೋಗುವುದು. ಇದನ್ನು ನೋಡಿದ ನರಿಯೊಂದು ಗುಹೆಯನ್ನುಹೊಕ್ಕು ಆ ಮಾಂಸವನ್ನು ತಿನ್ನುವುದು. ಬಹಳದಿವಸ ಹೀಗೆಯೇ ನಡೆಯಿತು. ಒಂದು ದಿನ ಕಳ್ಳನನ್ನು ಕಂಡುಹಿಡಿಯಲು ಹುಲಿ ಅಡಗಿಕೊಂಡಿತು. ಯಥಾ ಪ್ರಕಾರ ನರಿ ಮಾಂಸತಿಂದು ಹೋಗುವುದನ್ನು ನೋಡಿದ ಹುಲಿ, ಅದನ್ನಲ್ಲಿಯೇ ಕೊಲ್ಲದೆ ಅದರ ಹಿಂದೆಯೇ ಹೋಗಿ ಅದರ ಮನೆ ಯನ್ನು ಕಂಡಿತು. ಮಾರನೆಯದಿವಸ ನರಿಬರುವುದಕ್ಕಿಂತ ಮುಂಚೆ ಹುಲಿಹಿಂದುಮುಂದಾಗಿ ಹೋಗಿ ಬಿಲದಲ್ಲಿ ಅವಿತುಕೊಂಡಿತು. ಹುಲಿಯ ಹೆಜ್ಜೆಯನ್ನು ಗಮನಿಸಿದ ನರಿ ಉಪಾಯವನ್ನು ನೆನೆ ಯಿತು. ಬಿಲವನ್ನು ಹೆಸರು ಹಿಡಿದು ಹಲವು ಸಾರಿ ಕರೆಯಿತು, ಸಹಜವಾಗಿಯೇ ಅದು ಮಾತಾಡಲಿಲ್ಲ. ಆಗ ಬೇಕೆಂತಲೆ ನರಿ ಈ ತಂತ್ರವನ್ನು ಹೂಡಿತು: "ಇಷ್ಟು ದಿವಸಗಳವರೆಗೆ ನಾನು ಬಂದಾಗ ಎದುರುಗೊಳ್ಳುತ್ತಿದ್ದೆ, ಈಗ ದನಿ ತೋರುತ್ತಿಲ್ಲ; ಇನ್ನೊಬ್ಬನಲ್ಲಿ ಪ್ರೀತಿಯಿರಬೇಕು; ಅವರೂ ಇನ್ನೊಮ್ಮೆ ಕರೆಸಿ,

ಉಸಿರಿದ್ದರೆ ಹೋಗುವೆ, ದನಿ ತೋರಿದರೆ ಬರುವೆ". ನಿಜವೆಂದೇ ಭಾವಿಸಿದ ಹುಲಿ ದನಿ ತೋರಿ ನರಿಯನ್ನು ಒರಿಸಿ ತಿನ್ನುವೆನೆಂದುಕೊಂಡು ಹೂಂಕಾರಮಾಡಿತು. ಹುಲಿಯಿರುವೆಯೆಂದು ತಿಳಿದ ನರಿ ಅಲ್ಲಿಂದ ಓಡಿ ಹೋಗಿ ಬದುಕಿಕೊಂಡಿತು.

ಈ ಕಥೆಯ ರಚನೆಯಲ್ಲಿ ತಂತ್ರಕ್ಕೆ ಪ್ರತಿತಂತ್ರ ಉಪಯೋಗಗೊಂಡಿದೆ. ಹುಲಿಯು ಹಿಂದು ಮುಂದಾಗಿ ಹೋಗುವ ಉಪಾಯಕ್ಕೆ ಬಿಲದ ನೆಪದಲ್ಲಿ ಹುಲಿಯನ್ನು ಗುರುತಿಸುವ ನರಿಯ ಪ್ರತಿ ಉಪಾಯವಿದೆ. ಇದರಲ್ಲಿ ನರಿಯೇ ಗೆಲ್ಲುವುದು, ಇಂಥ ಎಲ್ಲ ಕಥೆಗಳಲ್ಲಿಯೂ ಕಾಣುವ ರೀತಿಯೇ ಇದು. ನರಿ ಸಾಮಾನ್ಯವಾಗಿ ಕಪಟಪರಿಣತಿಗೆ, ಉಪಾಯ ನಿಪುಣತೆಗೆ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದು. ನರಿ ತನ್ನ ಕುತಂತ್ರದಿಂದ ಪಾರಾಗುವ ಕ್ರಿಯೆ ಜನಪದ ಕಥೆಗಳಲ್ಲಿ ಕಾಣಸಿಗುವಂಥದು. ಈ ಕಥೆಯನ್ನು ಪಿಂಗಳಕ ದೃಷ್ಟಾಂತವಾಗಿ ಬಳಸಿ ಕೊಳ್ಳುವುದರಲ್ಲಿ ಒಂದು ಉದ್ದೇಶವಿದೆ. ವೈರಿ ಬಲಶಾಲಿಯಾಗಿದ್ದಾಗ ಬಲವನ್ನು ಬಿಟ್ಟು ಉಪಾಯ ತಂತ್ರದ ಮೂಲಕ ಗೆಲ್ಲಬೇಕೆಂಬುದೇ ಇಲ್ಲಿಯ ತಿಳಿವಳಿಕೆ. ಆದ್ದರಿಂದ ಸಂಜೀವಕನ ವಿರುದ್ಧ ಸೆಣಸುವುದಕ್ಕಿಂತ ಸ್ಥಾನ ತೆರವು ಮಾಡುವುದೇ ಒಳ್ಳೆಯದೆಂದು ಪಿಂಗಳಕನ ಆಲೋಚನೆ. ಆತ್ಮರಕ್ಷಣೆಯೇ ಪರಮ ಪುರುಷಾರ್ಥವೂ ಸರ್ವಜನ ಸಮ್ಮತವೂ ಆಗಿರುವುದರಿಂದ ಈ ಸಿದ್ಧಾಂತ ಎಂಬುದು ಪಿಂಗಳಕನ ವಾದ. ಇದರ ಸಮರ್ಥನೆಗಾಗಿ ಈ ಕಥೆ. ಆದ್ದರಿಂದಲೇ ಇದರಲ್ಲಿ ಭೇದ ತಂತ್ರದ ಉದ್ದೇಶವಾಗಲಿ ನಿರೂಪಣೆಯಾಗಲಿ ಇಲ್ಲ. ಇಲ್ಲಿ ಹುಲಿ ಮತ್ತು ನರಿಗಳು ಅನುಸರಿಸಿದ ತಂತ್ರಗಳು 'ಕವಿ ಸಮಯ'ಗಳಂತಿರದೆ, ಜನಪದ ಮಾತ್ರ ರೂಪಿಸಿಕೊಳ್ಳಬಹುದಾದ ಹೊಸಕಲ್ಪನೆಗಳಾಗಿವೆ.

ಈ ಕಾರಣದಿಂದಾಗಿ ಯಾವಾಗಲೂ ಇಂಥ ಕಥೆಗಳು ಮನಸ್ಸನ್ನು ರಂಜಿಸುತ್ತವೆ.

ತಂತ್ರ ಪ್ರಧಾನವಾದ ಇಂಥದೇ ಇನ್ನೊಂದು ಕಥೆ 'ಕಾಗೆ ಕೃಷ್ಣ ಸರ್ಪನಂ ಕೊಂದಕಥೆ'. ಇದನ್ನು ದಮನಕ ಕರಟಕನಿಗೆ ಹೇಳಿದ್ದು. ಸಂಜೀವಕ ಮತ್ತು ಪಿಂಗಳಕರ ಸ್ನೇಹವನ್ನು ಒಡೆಯುವುದು ಹೇಗೆ ಕಾರ್ಯಸಾಧ್ಯ ಎಂಬುದನ್ನು ತೋರಿಸಿ ಕೊಡಲು ಈ ದೃಷ್ಟಾಂತಕಥೆ. ಒಬ್ಬನಿಗೆ ಪರಾಕ್ರಮ ಶಕ್ತಿಯಿಲ್ಲದಿದ್ದಾಗ ಇನ್ನೊಬ್ಬನ ಪರಾಕ್ರಮದಿಂದ ಕಾರ್ಯವನ್ನು ಸಾಧಿಸಿ ಕೊಳ್ಳ ಬೇಕೆಂಬುದೇ ಇದರ ಆಶಯ. ದಮನಕ ಸ್ನೇಹಿತರನ್ನು ಭೇದೋಪಾಯದಿಂದ ಬೇರೆಮಾಡಿದ್ದು ಈ ರೀತಿಯಲ್ಲಿಯೇ. ಇದರಿಂದ ತನ್ನ ಸಾಮರ್ಥ್ಯವನ್ನು ತೋರಿಸಿಕೊಳ್ಳಲು ದಮನಕ ಈ ಕಥೆಯನ್ನು ಹೇಳಿದೆ. ಮರದ ಪೊಟರೆಯಲ್ಲಿ ಕಾಕಮಿಥುನ ಗಳಿದ್ದುವು. ಅವುಗಳ ಮೊಟ್ಟೆಗಳನ್ನು ಮರದ ಕೆಳಗಿನ ಹುತ್ತದ ಹಾವೊಂದು ತಿಂದು ಹಾಕ್ಕುತ್ತಿತ್ತು. ಬೇಸರಗೊಂಡ ಕಾಗೆ ಇದಕ್ಕೆ ಉಪಾಯವನ್ನು ಕಾಣಲು ಜಂಬುಕನನ್ನು ಆಶ್ರಯಿಸಿತು. ಎಲ್ಲಿಯಾದರೂ ಕನಕ ಸೂತ್ರವನ್ನು ತಂದು ಹುತ್ತದಲ್ಲಿ ಹಾಕಿ ದರೆ, ಒಡವೆಯ ಕಾರಣವಾಗಿ ಆದರೊಡೆಯರು ಹುತ್ತವನ್ನು ಅಗೆದು ಹಾವನ್ನು ಕೊಲ್ಲುವರು ಎಂದು ನರಿ ಹೇಳಿಕೊಟ್ಟಿತು. ಅದೇ ಪ್ರಕಾರ ಆ ವಾಯಸ ತೀರ್ಥಸ್ನಾನಮಾಡುತ್ತಿದ್ದ ನೃಪ ವಿಲಾಸಿನಿಯರ ಚಿನ್ನದ ಸರವನ್ನು ಎತ್ತಿ ತಂದು ಹುತ್ತದಲ್ಲಿ ಹಾಕಲು, ಕಾವಲಿನವರು ಹುತ್ತವನ್ನು ಅಗೆದು ಹಾವನ್ನು ಕೊಂದರು. ಇದು ಬಹಳ ಜನಪ್ರಿಯವಾದ ಕಥೆ. ನರಿಯ ಪಾತ್ರವೂ ಇಲ್ಲಿ ಗಮನಾರ್ಹವೇ. ಪ್ರಾಣಿಕಥೆಗಳಲ್ಲಿ ನರಿ ಬಹಳ ಸಾರಿ ಇಂಥ ಪಾತ್ರವನ್ನು ವಹಿಸುತ್ತದೆ. ನೃಪವಿಲಾಸಿನಿಯರ

ಕನಕ ಸೂತ್ರವನ್ನು ಬಳಸಿ ಕೊಂಡಿರುವುದು ಕಥನಕ್ರಿಯೆಗೆ ತರ್ಕ ಬದ್ಧತೆಯನ್ನು ಜೋಡಿಸಿದೆ. ಸ್ವತಃ ಸಾಮರ್ಥ್ಯವಿಲ್ಲದ ಕಾಗೆ ಅನ್ಯಶಕ್ತಿಯನ್ನು ಬಳಸಿಕೊಂಡು ಕಾರ್ಯ ಸಾಧನೆಮಾಡಿಕೊಳ್ಳು ವುದು ಇಲ್ಲಿದೆ. ಕಥೆ ಚಿಕ್ಕದಾದರೂ ಹೆಚ್ಚು ತಂತ್ರಪೂರ್ಣ ವಾಗಿದೆ. ಇದು ದಮನಕನ ಶಕ್ತಿ ನಿರೂಪಣೆಗೆ ಬಂದಿದ್ದರೂ, ಒಟ್ಟಂದದಲ್ಲಿ ಭೇದೋಪಾಯದ ನಿಲುವನ್ನ ಪರೋಕ್ಷವಾಗಿ ಯಾದರೂ ಪೋಷಿಸುವುದು. ಅದರಿಂದ, "ಉಪಾಯ ನಿಪುಣ ನಿಗೆ ಯಾವಕಾರ್ಯವೂ ಅಸಾಧ್ಯವಲ್ಲ"ವೆಂದು ಹೇಳುವುದೇ ಪ್ರಸ್ತುತ ಕಥೆಯ ಉದ್ದೇಶವೆನಿಸಿದೆ.

ಉಪಕಥೆಗಳಲ್ಲಿ ಒಳ ಕಥೆಗಳಿರುತ್ತವೆ ಎಂಬುದನ್ನು ಹಿಂದೆ ಹೇಳಲಾಗಿದೆ. ಇದಕ್ಕೆ ನಿದರ್ಶನವಾಗಿ 'ಕೊಕ್ಕರೆಯುಂ ಮೀಡಿಯುಂ' ಕಥೆಯಿದೆ. ಇದು ಮೇಲಿನ ಕಥೆಯ ಸಂದರ್ಭದಲ್ಲಿ ಬರುವುದು. ಸರ್ಪವನ್ನು ಕೊಲ್ಲಲು ಉಪಾಯವನ್ನು ಹೇಳುವಲ್ಲಿ ನರಿ ಕಾಗೆಗೆ ಈ ಕಥೆಯನ್ನು ಹೇಳುತ್ತದೆ. ಉಪಕಥೆಗಳಲ್ಲಿನ ಪಾತ್ರಗಳು ಹೇಳುವು ದನ್ನು ಬಿಟ್ಟರೆ, ಇವು ರಚನೆಯಲ್ಲಿ ಉಪಕಥೆಗಳಿಗಿಂತ ಭಿನ್ನವಾದ ವಲ್ಲ. ಈ ಕಥೆಯೂ ಶತ್ರುವಿನ ಮೋಸ, ಅದನ್ನು ಗೆಲ್ಲಲು ಹೂಡುವ ಉಪಾಯ ತಂತ್ರಗಳನ್ನೇ ಒಳಗೊಂಡಿದೆ. ಕೊಳ ದಲ್ಲಿದ್ದ ಮೀನುಗಳನ್ನು ತಿನ್ನಲು ಕೊಕ್ಕರೆಯು ತಪೋರೂಪ ವನ್ನು ಕೈಗೊಳ್ಳುವುದು. ಈ ನೆಪದಲ್ಲಿ ಕಿರು ಮೀನುಗಳೆಲ್ಲ ವನ್ನು ತಿಂದು ಹಿರಿಯ ಮೀನುಗಳನ್ನು ತಿನ್ನಲು ಯೋಚಿಸು ವುದು. ಹನ್ನೆರಡು ವರ್ಷ ಅನಾವೃಷ್ಟಿಯಾಗುವುದೆಂದೂ, ಕೊಳ ಬತ್ತಿ ಅಪಾಯ ಬರುವುದೆಂದೂ ಬಕ ತನ್ನದೇ ವಿಕಟ ಕಥೆ ಯನ್ನು ಹೇಳಿ ನಂಬಿಸುವುದು. ಈ ಅಪಾಯ ಸ್ಥಳದಿಂದ ಪಾರು ಮಾಡುವಂತೆ ಮೀನುಗಳು ಕೇಳಿಕೊಂಡಾಗ, ದೂರದಲ್ಲಿನ

ಮಹಾನದಿಗೆ ಒಯ್ಯುವೆನೆಂದು ಕಪಟ ಸಂನ್ಯಾಸಿ ಕೊಕ್ಕರೆಯ ಆಶ್ವಾಸನೆ. ಆ ಪ್ರಕಾರ ನಿತ್ಯವೂ ಒಂದೊಂದು ಮೀನನ್ನು ಕಚ್ಚಿಕೊಂಡು ಹೋಗಿ ಒಂದು ಬಂಡೆಯ ಮೇಲೆ ಕುಕ್ಕಿ ತಿನ್ನುವುದು, ಆಮೇಲೆ ಏನೂ ಅರಿಯದಂತೆ ಬಂದು ಇನ್ನೊಂದನ್ನು ಅದೇತೆರ ಕಚ್ಚಿಕೊಂಡು ಹೋಗುವುದು ತಿನ್ನುವುದು ಮಾಡುತ್ತಿತ್ತು. ಈ ಸಂದರ್ಭದಲ್ಲಿ ಬರುವ "ಬೆಣ್ಣೆಯುಂ ತಿಂದ ಬೆಕ್ಕಿನಂತೆ" ಎಂಬ ಮಾತು ಬಕನ ಕಪಟಸ್ವಭಾವವನ್ನು ಚೆನ್ನಾಗಿ ವಿವರಿಸುತ್ತದೆ. ಹೀಗೆ ಮೀನುಗಳು ಮುಗಿಯುತ್ತಿರಲು, ಒಂದು ಏಡಿಬರುವುದು. ಆಗ ಬಕ "ಮಗನೆ, ನೀಂ ಕರಂ ಗರ್ಭಸುಖಿ, ಬಿಸಿಲಾಗದನ್ನಂಬೇಗ ಬಾ, ನಿನ್ನನುಯ್ದುರಿಸಿ ಬೞಿಕ್ಕೀ ಮಿಾಂಗಳನುಯ್ವೆನ್" ಎಂದಿತು. ನಂಬಿದ ಏಡಿಯನ್ನು ಕತ್ತಿನ ಮೇಲೆ ಹತ್ತಿಸಿಕೊಂಡು ಹೊರಟಿತು. ಬಂಡೆಯ ಸಮೀಪಕ್ಕೆ ಬರುತ್ತಿರುವಾಗ ಸುತ್ತೆಲ್ಲೂ ನದಿ ಸರೋವರಗಳನ್ನು ಕಾಣದೆ ಮೀನಿನ ಮೂಳೆಗಳಿಂದ ಆವೃತವಾದ ಬಂಡೆಯನ್ನು ನೋಡಿದ ಏಡಿ ಪರಿಸ್ಥಿತಿಯ ಅಪಾಯವನ್ನು ಊಹಿಸುವುದು. ಈ ಅಪಾಯಕ್ಕೆ ಉಪಾಯವಿಲ್ಲದಿರಲು ಏಡಿ ನಿರ್ಧಾರವನ್ನು ಹೀಗೆ ನೆನೆಯುವುದು:

> ತನ್ನಂ ಕೊಲ್ವುದನಱಿದೊಡೆ
> ಮುನ್ನಂ ತಾ ಕೊಲ್ಗೆ ಪಗೆವನಂ ಶಂಕಿಸದು
> [1]ಉತ್ಪನ್ನಮತಿಯುಪ್ಪವಂ ಪೋ
> [2]ತನ್ನಪ್ಪುದಪಕ್ಕೆ ದೈವವಶದಿಂ ತುದಿಯೊಳ್

ತನ್ನನ್ನು ಕೊಲ್ಲುವುದಕ್ಕೆ ಮುಂಚಿತವಾಗಿಯೇ ಶತ್ರುವನ್ನು ಕೊಲ್ಲುವುದು ಸರಿಯೆಂದು ನಿರ್ಧರಿಸಿದ ಏಡಿ ಬಕನ ಕಂಠನಾಳ

---

1 ಉತ್ಪನ್ನಮತಿ–ಬುದ್ಧಿವಂತ; 2 ತನ್ನಪ್ಪುದು–ತಾನಾಗುವುದು.

ವನ್ನು ಕತ್ತರಿಸುವುದು. ಈ ಕಥೆ ತನಗೆ ತಾನು ಸುಂದರ ವಾದುದು, ಪರಿಪೂರ್ಣವಾದುದು. ಬಳಕೆಯಲ್ಲಿ ಇದು ಒಳಕಥೆ ಯಾದರೂ ಉಪಕಥೆಗಳಿಗಿರುವ ಸ್ವತಂತ್ರ ಅಸ್ತಿತ್ವವೇ ಇದಕ್ಕೂ ಇರುತ್ತದೆ. ಸಂಭಾಷಣಾ ಚತುರತೆ ಮತ್ತು ಬುದ್ಧಿಸೂಕ್ಷ್ಮತೆ ಗಳಿಂದ ಇದು ರಂಜಿಸುತ್ತದೆ. 'ಬಕಧ್ಯಾನ' ಎನ್ನುವುದು ಕಪಟ ವೃತ್ತಿಗೆ ಹೇಳುವ ಲೋಕ ರೂಢಿಯ ಮಾತು. ಈ ಆಶಯ ವನ್ನೂ ಪ್ರಸ್ತುತ ಕಥೆ ಎತ್ತಿ ಹಿಡಿಯುತ್ತದೆ. ಬಕನನ್ನು ಕೊಂದ ಭೀಮನ ಹೋಲಿಕೆಯನ್ನು ಈ ಕಥಾ ಸಂದರ್ಭದಲ್ಲಿ ದುಡಿಸಿ ಕೊಂಡಿರುವುದರಿಂದ ಕಥೆಗೆ ಮತ್ತಷ್ಟು ವ್ಯಾಪ್ತಿ ಸಿಕ್ಕಿದೆ. ಶತ್ರುವಿನ ನೇರಕ್ರಮಕ್ಕಿಂತ ಕಪಟ ಕ್ರಮದಿಂದ ಅಪಾಯ ಹೆಚ್ಚು. ಇಂಥಸ್ಥಿತಿಗೆ ಒಳಗಾದಾಗ ಸಮಯ ಪ್ರಜ್ಞೆ ಮತ್ತು ಪೂರ್ವಾಪರ ಆಲೋಚನೆಗಳಿಂದ ಸಂದರ್ಭವನ್ನು ನಿರ್ವಹಿಸ ಬೇಕಾಗುತ್ತದೆ ಎನ್ನುವುದು ಕಥೆ ಬಿಟ್ಟುಕೊಡುವ ಅಂಶವಾಗಿದೆ. ಮೂಲ ಕಥೆಗೆ ನೇರ ಸಂಬಂಧವಿಲ್ಲದಿದ್ದರೂ, ಈ ರಾಜನೀತಿಯ ವಿಷಯದಲ್ಲಿ ಮೂಲದ ಆಶಯವನ್ನೇ ಒಯ್ಯುವಂತಿದೆ.

ಹೀಗೆ ಶತ್ರುವಿನ ಅನ್ಯಾಯ ಕ್ರಮವನ್ನು ಎದುರಿಸಲು ಉಪಾಯವಿಧಾನಗಳನ್ನು ಆಲೋಚಿಸುವುದೇ ಈ ಕಥೆಗಳ ವಸ್ತುವೂ ಉದ್ದೇಶವೂ ಆಗಿರುವಂತೆ ಕಾಣುತ್ತದೆ. ಈ ವಿಧಾನ ಗಳು ಒಂದೇವಿಧವಾಗಿರುವುದಿಲ್ಲ; ಶತ್ರುವನ್ನು ಅವಲಂಬಿಸಿ ಬೇರೆ ಬೇರೆಯಾಗಿರಬಹುದು. ಇದಕ್ಕೆ ಒಂದು ಉದಾಹರಣೆ 'ಮೊಲಂ ಸಿಂಹಮಂ ಕೊಂದ ಕಥೆ'. ಸಾಮಾನ್ಯವಾಗಿ ಶಕ್ತಿ ಇದ್ದಲ್ಲಿ ಬುದ್ಧಿಯಿರುವುದಿಲ್ಲವೆಂದೂ, ಬುದ್ಧಿ ಇದ್ದಲ್ಲಿ ಶಕ್ತಿ ಇರುವು ದಿಲ್ಲವೆಂದೂ ವಾಡಿಕೆಯ ಮಾತು. ಪ್ರಸ್ತುತ ಕಥೆಯಲ್ಲಿ ಶಕ್ತಿ ಯಿದ್ದೂ ಬುದ್ಧಿಯಿಲ್ಲದಿದ್ದರೆ ಪ್ರಯೋಜನವಿಲ್ಲವೆಂಬುದನ್ನು ಚಿತ್ರಿ

ಸಲಾಗಿದೆ. ಇದನ್ನು ದಮನಕ ಕರಟಕನಿಗೆ ಹೇಳುತ್ತದೆ. ಮಹಾ ಪರಾಕ್ರಮಿಯಾದ ಪಿಂಗಳಕನ ಸ್ನೇಹವನ್ನು ಬುದ್ಧಿ ಕುಶಲತೆ ಯಿಂದ ಭೇದಿಸುತ್ತೇನೆಂದು ಹೇಳಲು ಈ ಕಥೆಯಿದೆ. ಸಿಂಹ ಗಜ ಸಮೂಹವನ್ನೆಲ್ಲ ತಿಂದು, ಬಳಿಕ ಆಹಾರವಿಲ್ಲದೆ ಮೃಗಗಳನ್ನು ತಿನ್ನುತ್ತಿರಲು, ಆ ಮೃಗಗಳೆಲ್ಲ ಕೂಡಿ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತವೆ. ಮುಂದೆ ಆನೆಗಳು ದೊರೆಯುವವರೆಗೆ ನಿತ್ಯ ವೂ ಒಂದೊಂದು ಮೃಗವನ್ನು ಕಳಿಸಿ ಕೊಡುವುವೇ ಇದರ ನಿರೂಪ. ಈ ಸರದಿ ಒಂದು ಮೊಲಕ್ಕೆ ಬರುವುದು. ಅದು ಮರಣ ಭೀತಿಯಿಂದ ಬರುತ್ತಿರುವಾಗ ನಡುವೆ ಒಂದು 'ಪುರಾಣ ಕೂಪ'ವನ್ನು ಕಾಣುವುದು. ಅದರ ತಿಳಿ ಜಲದಲ್ಲಿ ತನ್ನ ಪ್ರತಿ ಬಿಂಬವನ್ನು ಕಂಡು ಸಿಂಹವನ್ನು ಕೊಲ್ಲಲು ಇದು ಸಾಧನವೆಂದು ಉತ್ಸಾಹಗೊಳ್ಳುವುದು. ಒಂದು ಪಕ್ಷ ಕೊಲ್ಲಲಾರದೆ ಹೋದರೆ ತನಗಾಗುವ ಪರಿಣಾಮವನ್ನು ನೆನೆದು ಚಿಂತಿಸುವಲ್ಲಿ ಮೊಲದ ವಿಷಣ್ಣ ಚಿತ್ರ ರೂಪುಗೊಂಡಿದೆ. ಈ ಸಮಯದಲ್ಲಿ ಮೊಲ ಅಂದು ಕೊಳ್ಳುವ "ಸಾವಂಗೆ ಸಮುದ್ರಂ ಮೊಳಕಾಲುದ್ದಂ" ಮತ್ತು "ಕಿರ್ಚಿನೊಳ್ ಬಿಟ್ಟಿಂಗೆ ಸಾವು ತಪ್ಪದು" ಎಂಬ ಮಾತುಗಳಲ್ಲಿ ಅನುಭವವೇ ಇದೆ. ಇದಕ್ಕೂ ಮಿಗಿಲಾಗಿ "ಆವಂ ಮುನಿದು ಇರ್ಮುಡಿಸಿ ಕೊಂದಪನೋ ಭಯಮೇಕೆನಗಿಲ್ಲಿ" ಎಂಬುದರಲ್ಲಿ ಹತಾಶೆ ನಿರಾಶೆಗಳ ಅಂತಿಮ ನಿರ್ಧಾರವಿದೆ. ಯಾರು ಕೋಪಿಸಿ ಕೊಂಡರೂ ಎರಡು ಸಾರಿಯೇನೂ ಕೊಲ್ಲುವು ದಿಲ್ಲವಲ್ಲ–ಎಂಬುದರಲ್ಲಿ ಸಂದರ್ಭದ ಉತ್ಕಟತೆಯನ್ನೂ ಅನು ಭವದ ಉತ್ತಮ ಪರಿಶೀಲನೆಯನ್ನೂ ನೋಡುತ್ತೇವೆ. ಸಾವು ಸಮೀಪಿಸುತ್ತಿರುವಾಗಿನ ವ್ಯಕ್ತಿಯ ಹೊಯ್ದಾಟ ಹೋರಾಟ ಗಳನ್ನು ಈ ಮಾತುಗಳು ಅತ್ಯಂತ ಸಮರ್ಥವಾಗಿ ಚಿತ್ರಿಸುತ್ತವೆ.

ಮುಂದಿನ ಕಥೆ ನಿರೀಕ್ಷಿಸಿದ ರೀತಿಯಲ್ಲಿಯೇ ಸಾಗುತ್ತದೆ. ಭಯಾತುರದಿಂದ ಬಂದ ಮೊಲವನ್ನು ತಡವಾದುದಕ್ಕೆ ಸಿಂಹ ಗದರಿಸುವುದು. ತಾನು ಬೇಗನೆ ಬರುತ್ತಿದ್ದೆನೆಂದೂ, ಆದರೆ ಬರುವ ದಾರಿಯಲ್ಲಿ ಸಿಂಹವೊಂದು ಬರಲೀಯದಂತೆ ತಡೆದು ಹೀಗೆಂದಿತೆಂದೂ ತಿಳಿಸುವುದು :

[1]ತುಂಗಗಜಂಗ[2]ಳ್ಗಳ್ಕಿ ಮೃ
ಗಂಗಳನಾಯ್ದು ಅಸಿ ತಿಂಬುದಪ್ಪೊಡೆ ಪೆಱತೇಂ
ಸಿಂಗಮುದಲ್ಲದು ಪೋಗಾ
ಸಿಂಗಂ ತಾಂ[3]ಗಾವ ಸಿಂಗಮೆಂದುದು ನಿನ್ನಂ

ಬಲಿಶಾಲಿಗಳಾದ ಆನೆಗಳಿಗೆ ಹೆದರಿ ಮೃಗಗಳನ್ನು ತಿನ್ನುವುದರಲ್ಲೇನಿದೆ? ಹಾಗೆ ಮಾಡುವುದಾದರೆ ಅದು ಸಿಂಹವಲ್ಲ, ಕೇವಲ ಗ್ರಾಮ ಸಿಂಹ ಮಾತ್ರ. ಇದರಲ್ಲಿನ ನಿಚ್ಚಳ ವಿಡಂಬನೆ, ಸೂಕ್ಷ್ಮ ಹಾಸ್ಯಗಳು ಕವಿಯ ರಚನಾ ಕೌಶಲವನ್ನೂ ಸಾಹಿತ್ಯಿಕ ಸ್ವೋಪಜ್ಞತೆಯನ್ನೂ ತಿಳಿಸುತ್ತವೆ. ಇಲ್ಲಿ ಬಳಕೆಯಾಗಿರುವ 'ಗಾವಸಿಂಗ' ಎಂಬ ತಿರಸ್ಕಾರ ಪೂರ್ಣ ಪದ ಸಮುಚಿತವಾದುದು ಮಾತ್ರವಲ್ಲ, ಲೋಕರೂಢಿಯ ಧ್ವನಿಯನ್ನೂ ಇರಿಸಿಕೊಂಡಿದೆ. ಇದರಿಂದ ಬಲಶಾಲಿಯಾದ ಪ್ರಾಣಿಯೊಂದರ ದೃಷ್ಟಿಯನ್ನು ಮತ್ತೊಂದು ಬಲಶಾಲಿ ಪ್ರಾಣಿಯ ಮೇಲೆ ಕೇಂದ್ರೀಕರಿಸುವುದರ ಮೂಲಕ ತಾನು ತಪ್ಪಿಸಿಕೊಳ್ಳುವ ಮೊಲದ ತಂತ್ರ ಮೆಚ್ಚುವಂತಿದೆ. ಅಂದರೆ ಒಬ್ಬನಿಗೆ ಅವನಿಗಿಂತಲೂ ಪರಾಕ್ರಮಿಯ ಭಯವನ್ನು ತಂದು ಕಾರ್ಯ ಸಾಧಿಸಿಕೊಳ್ಳುವ ರೀತಿ.

---

1 ತುಂಗಗಜ–ಪರಾಕ್ರಮವುಳ್ಳ ಆನೆ; 2 ಅಳ್ಕಿ–ಹೆದರಿ;
3 ಗಾವಸಿಂಗ–ಗ್ರಾಮಸಿಂಹ, ನಾಯಿ.

ಹಾಗಾಗಿ ಸಿಂಹ ಮೊಲ ಹೇಳಿದ ರೀತಿ ಹಳೆಯ ಬಾವಿಯ ಹತ್ತಿರ ಬಂದು, ಅದರಲ್ಲಿ ಕಂಡ ತನ್ನ ಪ್ರತಿಬಿಂಬವನ್ನೆ ಶತ್ರುವೆಂದು ಭಾವಿಸಿ ಬಿದ್ದು ಸಾಯುವುದು. ಈ ಕಥೆಯಿಂದ ಎರಡು ವಿಷಯಗಳು ಹೊಮ್ಮುವುವು: ಬುದ್ಧಿ ಬಲವಿಲ್ಲದಿದ್ದರೆ ಕೇವಲ ಬಲವೇನೂ ಮಾಡುವುದಿಲ್ಲವೆಂಬುದು ಒಂದು; "[1]ಸಲೆ ಕೋಪಾತುರನಪ್ಪನಾವನುಂ [2]ಬಟ್ಟಿಪನೇ"–ಎಂಬುದು ಇನ್ನೊಂದು. ಇಲ್ಲಿ ಬಳಕೆಯಾಗಿರುವ 'ಪ್ರತಿಬಿಂಬ ತಂತ್ರ' ಪ್ರಾಣಿಗಳ ಸಂದರ್ಭದಲ್ಲಿ ಸರಿಹೋಗುವುದಾದರೂ, ಮನುಷ್ಯ ಪ್ರಪಂಚಕ್ಕೆ ಅನ್ವಯಿಸುವುದಾದರೂ ಹೇಗೆ ಎಂಬ ಪ್ರಶ್ನೆ ಕಾಡಬಹುದು. ಒಬ್ಬ ಶಕ್ತ ರಾಜನನ್ನು ಅಂಥವನೇ ಮತ್ತೊಬ್ಬ ರಾಜನೊಡನೆ ಎತ್ತಿಕಟ್ಟುವುದರ ಮೂಲಕ ತನ್ನ ಕೆಲಸವನ್ನು ಸಾಧಿಸಿಕೊಳ್ಳುವ ರಾಜ ತಾಂತ್ರಿಕ ನಿಪುಣತೆಯನ್ನು ಇದು ಹೇಳುತ್ತದೆ. ಶಕ್ತಿಗಿಂತ ಯುಕ್ತಿ ಮೇಲೆಂದೂ, ಆದರಿಂದ ಪಿಂಗಳಕನನ್ನು ಗೆಲ್ಲಬಹುದೆಂದೂ ದಮನಕನ ವಾದ.

ಹೀಗೆ ಇನ್ನೂ ಅನೇಕ ಸ್ವಾರಸ್ಯಯುಕ್ತ ಕಥೆಗಳು ಕೃತಿಯಲ್ಲಿವೆ. ಇವುಗಳೆಲ್ಲವನ್ನೂ ವಿವರಿಸಲು ಸಾಧ್ಯವಾಗದು. ಆದರೆ ಬೇರೆ ಬೇರೆ ಕಾರಣಗಳಿಂದ ಮುಖ್ಯವೆನಿಸುವ ಮೂರು ಕಥೆಗಳನ್ನು ಮಾತ್ರ ಇಲ್ಲಿ ಪರಿಭಾವಿಸಬಹುದು. ಇವುಗಳಲ್ಲಿ 'ಪರದನ ಕಥೆಯೂ ಒಂದು. ಇದು 'ಪರೀಕ್ಷಾ ವ್ಯಾವರ್ಣನಂ' ಪ್ರಕರಣದಲ್ಲಿ ಬಂದಿದ್ದು, ಯಜ್ಞದತ್ತೆ ತನ್ನ ಗಂಡ ದೇವಶರ್ಮನಿಗೆ ಹೇಳುತ್ತಾಳೆ. ಬ್ರಾಹ್ಮಣ ಮುಂಗುಸಿಯನ್ನು ಕೊಂದ

---

[1] ಸಲೆ–ಒಂದೇಸಮನೆ, ಏಕ ಪ್ರಕಾರವಾಗಿ;

[2] ಬಟ್ಟಿಪನೇ–ಬದುಕುತ್ತಾನೆಯೇ.

ಮೂಲಕಥೆಯು ಮುಕ್ತಾಯದಲ್ಲಿ ಉಪದೇಶಾತ್ಮಕ ವಿವರಣೆ ಯೆನ್ನುವಂತೆ ಈ ಕಥೆ ಕಾಣಿಸಿಕೊಳ್ಳುವುದು. ಮುಖ್ಯವಾಗಿ, ಮನುಷ್ಯ ಸರಿಯಾಗಿ ಕಾಣದೆ, ಅರಿಯದೆ, ಪರೀಕ್ಷಿಸದೆ ಏನನ್ನೂ ಮಾಡಲಾಗದು ಎಂಬುದನ್ನು ಹೇಳುವುದಕ್ಕಾಗಿ ಈ ಕಥೆ. ಪುರುಷರಿಗೆ ಸರ್ವಸಂಗ ಪರಿತ್ಯಾಗ ಮತ್ತು ಸಕಲೈಶ್ವರ್ಯವೆಂಬಿವು ಮಾತ್ರ ಸುಖ ತರುವಂಥವಾದ್ದರಿಂದ, ತಾನು ನೃಪನ ಸೇವೆ ಮಾಡಲು ಹೋಗುವೆನೆಂದು ಧನದತ್ತ ಅಂಬೋಣ. ದೇಶಾಂತರಕ್ಕೆ ಹೋಗಿ ಹೊನ್ನು ಪಡೆಯುವುದು ಸಂದೇಹವೆಂದು ತಂದೆಯ ಆಕ್ಷೇಪಣೆ. ಪುರುಷಪ್ರಯತ್ನವನ್ನು ಮಾಡೇತೀರುವೆ ನೆಂದು ನಿಶ್ಚಯಿಸಿದ ಧನದತ್ತ. ನಿದ್ದೆ ಹೋದವನ ನಿಶಾವ ಸಾನ ಸಮಯದಲ್ಲಿ ಮೊದಲು ಮಾಡಿದ ದಾನ ಧರ್ಮದ ಫಲ ಗಳೇ ಮೂರ್ತಿಮತ್ತಾಗಿ ಬರುವುವು. ಇಷ್ಟು ಕಾಲದವರೆಗೂ ಉದ್ಯೋಗ ಹೀನನಾಗಿದ್ದುದರಿಂದ ಸಹಾಯ ಮಾಡಲಾಗಲಿಲ್ಲ ವೆಂದೂ, ಈಗ ಈ ರೀತಿ ಯೋಚಿಸಿದ್ದರಿಂದ ದಿಗಂಬರ ರೂಪ ದಲ್ಲಿ ಬಂದು ನಿಧಿಗಳಾಗುತ್ತೇವೆಂದೂ ಅವುಗಳ ಆಶ್ವಾಸನೆ. ಕನಸಿನಿಂದ ಎಚ್ಚೆತ್ತ ಧನದತ್ತ, ಬಂದ ಸವಣರನ್ನು ಪೂಜಿಸಿದ ಮೇಲೆ ನಿಧಿಗಳಾಗಿ ಪರಿಣಮಿಸುವರು. ಇದನ್ನು ಕಂಡ ನೆರೆಯ ಪರದನಿಗೆ ರಹಸ್ಯ ರಕ್ಷಣೆಗಾಗಿ ಕಿರಿದೊಂದು ಹೊನ್ನಿತ್ತರೆ, ಅದನ್ನು ಅವನು ಬಿಸುಟು "ನಿನಗುಳ್ಳ [1]ಸವಣರೇಂ ಮತ್ತೆ ನನಗಿಲ್ಲವೆ" ಎಂದು ಹೋದನು. ಚರಿಗೆಗೆ ಬರುತ್ತಿದ್ದ ಮುನಿ ಗಳನ್ನು ಕರೆತಂದು ಪೂಜಿಸಿ ಹೊನ್ನಾಗದಿರಲು, ಅವರನ್ನು ದೊಣ್ಣೆಯಿಂದ ಬಡಿಯುವನು. ತಳಾರರು ಅವನನ್ನು ಧರ್ಮಾಧಿ ಕರಣರಿಗೆ ಒಪ್ಪಿಸುವರು.

---

[1] ಸವಣರ್‌-ಶ್ರಮಣರು-ಜೈನ ಸಂನ್ಯಾಸಿಗಳು.

ಇಡೀ ಕಥೆ ಜೈನಧರ್ಮೀಯ ವಾತಾವರಣದಿಂದ ಕೂಡಿರುವುದು ಗಮನಾರ್ಹ. ಇದು ಜನಪದ ಕಥೆಯ ನೇರ ಮಾದರಿಯಾಗುವುದು ಕಷ್ಟ. ಇದರಲ್ಲಿ ಈವರೆಗಿನ ಪ್ರಾಣಿಪಾತ್ರಗಳೂ ಕಾಣಬರದಿರುವುದೊಂದು ಮುಖ್ಯ ವಿಚಾರ. ಆದರೂ ಅಪರೀಕ್ಷಿತವಾಗಿ ಒಬ್ಬನಿಗೆ ಬಂದ ಐಶ್ವರ್ಯವನ್ನು ಕಂಡು ಕರುಬಿದ ಮತ್ತೊಬ್ಬ ಅದೇ ಬಗೆಯಲ್ಲಿ ಪಡೆಯ ಹೊರಟಾಗ ಹಾನಿಗೊಳಗಾಗುವ ಅಂಶ ಜನಪದ ಕಥೆಗಳಲ್ಲಿ ಕಾಣುವಂಥದೇ. ಆದರೆ ಕಥೆಯಲ್ಲಿ ಧರ್ಮದ ಅಭಿನಿವೇಶದಿಂದಾಗಿ ರಚನೆಯ ಸ್ವರೂಪವೇ ಶಿಷ್ಟಗೊಂಡಿರುವುದನ್ನು ಕಾಣುತ್ತೇವೆ. ಇದಕ್ಕೆ ದುರ್ಗಸಿಂಹ ಎಷ್ಟರ ಮಟ್ಟಿಗೆ ಕಾರಣ, ಅಥವಾ ಈ ಹಿಂದಿನ ಲೇಖಕರಲ್ಲಿ ಇದು ಹಾದು ಬಂದಿರುವುದು ಎಷ್ಟರಮಟ್ಟಿಗೆ ಕಾರಣ, ಎಂಬುದನ್ನು ಹೇಳುವುದು ಅಸಾಧ್ಯ. ಸಾಮಾನ್ಯವಾಗಿ ಒಳ್ಳೆಯದನ್ನೂ ಕೆಟ್ಟದ್ದನ್ನೂ, ಅದೃಷ್ಟವನ್ನೂ ಪ್ರಯತ್ನವನ್ನೂ ಹೋಲಿಸಿ ನೋಡುವ ಹವ್ಯಾಸ ಕಥೆಗಿದೆ. ಇದಕ್ಕಾಗಿಯೇ ನೆರೆಮನೆಯ ಪರದನ ಮೂಲಕ ನಾಟಕೀಯ ತಿರುವನ್ನು ಕೊಟ್ಟಿರುವುದು. ಸವಣರು ನಿಧಿಯಾಗಿ ಪರಿವರ್ತನೆಗೊಳ್ಳುವ ಹಿನ್ನೆಲೆಯಲ್ಲಿ ಪೂರ್ವಜನ್ಮದ ಪುಣ್ಯದ ಫಲವನ್ನು ಪ್ರತಿಪಾದಿಸುವ ರೀತಿ ಇದೆ. ಆದರೆ ಕಥೆಯ ತಂತ್ರ ಮಾತ್ರ ಮುಖ್ಯವಾಗಿ, ಯಾವುದನ್ನೂ ಪರೀಕ್ಷಿಸದೆ ಆಲೋಚಿಸದೆ ಮಾಡಕೂಡದೆಂಬುದನ್ನು ಹೇಳಲು ಬಂದುದು; ನೆರೆಮನೆಯ ಪರದನ ಪ್ರಸ್ತಾಪವನ್ನು ತಂದುದು ಇದಕ್ಕಾಗಿಯೇ.

ಇದಕ್ಕಿಂತ ಭಿನ್ನವಾದ, ಮತ್ತೊಂದು ದೃಷ್ಟಿಯಿಂದ ಮುಖ್ಯವಾದ ಕಥೆ 'ವಿಷ್ಣು ಶರ್ಮನ ಕಥೆ'. ಇದು 'ವಿಶ್ವಾಸ ಪ್ರಕರಣ'ದಲ್ಲಿ ಬಂದಿದ್ದು, 'ಕಪ್ಪೆಗಳನ್ನು ಬೆನ್ನೇರಿಸಿಕೊಂಡ ಸರ್ಪನ ಕಥೆ'

ಎಂಬ ಉಪಕಥೆಗೆ ಒಳಕಥೆಯಾಗಿ ಕೆಲಸ ಮಾಡಿರುವಂಥದು. ವಿಷ್ಣುಶರ್ಮನ ಹೆಂಡತಿ ಪರಪುರುಷನಲ್ಲಿ ಆಸಕ್ತಳಾಗಿದ್ದಳು. ಇದನ್ನು ಆಕೆಯ ಚೇಷ್ಟಾಭಾವದಿಂದ ಅರಿತನು. ಇದನ್ನು ನಿಶ್ಚಯಿಸಲು ಬೇರೆಯೂರಿಗೆ ಹೋಗುವವನಂತೆ ನಟಿಸಿ ಮನೆಯಲ್ಲಿಯೇ ಅಡಗಿ ಕೊಳ್ಳುವನು. ಆ ಸಮಯದಲ್ಲಿ ಅವಳು ತನ್ನ ಪ್ರಣಯಿಯನ್ನು ಬರಿಸುವಳು. ತಮ್ಮ ಸಂಬಂಧದ ನಡುವೆ ಇರುವ ಗಂಡನ ಕಣ್ಣೊಡೆಯುವ ಉಪಾಯವನ್ನು ಚಿಂತಿಸಲು ಹೇಳುವಳು. ಬೆನಕನಿಗೆ ಹರಕೆ ಹೊತ್ತರೆ ಸಾಧ್ಯವೆಂದ ಪ್ರಣಯಿ, ಅಂತೆ ಮಾಡುವೆನೆಂದಳು ದರ್ಮತಿ. ಇದನ್ನೆಲ್ಲ ಕೇಳಿಸಿಕೊಂಡ ವಿಷ್ಣುಶರ್ಮ ಉಪಾಯದಿಂದ ಬೆನಕನ ಹಿಂದೆ ಅಡಗಿ ಕೊಂಡಿದ್ದು, ಹೆಂಡತಿ ಹೇಳಿದ್ದಕ್ಕೆ ತಥಾಸ್ತು ಎಂದ. ಅವಳು ದೇವರೇ ವರ ಕೊಟ್ಟನೆಂದು ಭಾವಿಸಿದಳು. ಕೆಲವು ದಿವಸ ಕಳೆಯಲು ವಿಷ್ಣು ಶರ್ಮ ಕಣ್ಣು ಕಾಣದೆಂದು ನಟಿಸಿದ, ಬೆನಕನ ವರ ನಿಜವಾಗುತ್ತಿದೆಯೆಂದು ನಂಬಿದಳು ಹೆಂಡತಿ. ಒಂದು ದಿವಸ ಹೆಂಡತಿ ಪರಪುರುಷನೊಡನೆ ಮರೆದೊರಗಿರಲು, ವಿಷ್ಣುಶರ್ಮ ಹಗೆಯನ್ನು ಕೊಂದು ಸೇಡನ್ನು ತೀರಿಸಿಕೊಂಡನು.

ಪ್ರಸ್ತುತ ಕಥೆ ವಿಶ್ವಾಸ ತಂತ್ರದ ನಂಬಿಸಿ ಕಾರ್ಯ ಸಾಧಿಸುವ ಉದ್ದೇಶವನ್ನು ಹೊಂದಿದೆ, ಜೊತೆಗೆ ಕಾಲಕ್ಕಾಗಿ ಕಾಯುವ ಉಪಕಥೆಯ ಸಂದರ್ಭದ ಆಶಯವನ್ನೂ ಪೂರೈಸಿದೆ. ಇದು ಜನಪದ ಕಥೆಯೊಂದರ ಸಂಕ್ಷಿಪ್ತ ರೂಪವೆನ್ನುವುದು ಸ್ಪಷ್ಟವಿದೆ; ಹಿನ್ನೆಲೆಯಲ್ಲಿ ಅದರ ಪೂರ್ಣ ಮಾದರಿಯೇ ಕೆಲಸಮಾಡಿದೆ. ಇದೇ ವಸ್ತುವನ್ನು ಹೊಂದಿರುವ ಜನಪದ ಕಥೆಯ ಹಲವು ಪಾಠಗಳು ಕನ್ನಡದಲ್ಲಿ ದೊರೆತಿವೆ; 'ಪಾಪಕ್ಕೆ ಪ್ರಾಯಶ್ಚಿತ್ತ'

ಅಂಥದೊಂದು ಪಾಠವಾಗಿದೆ. ಇವುಗಳನ್ನು ಹೋಲಿಸಿ ನೋಡಿದರೆ ವ್ಯತ್ಯಾಸವೇನೂ ಇದ್ದಂತಿಲ್ಲ. ಪ್ರಾಣಿ ಕಥೆಗಳಲ್ಲಿ ನಾವು ನೋಡುವ ವಿಡಂಬನ ಮನೋಧರ್ಮವೇ ಉಪಾಯತಂತ್ರವೇ ಇಲ್ಲೂ ಬೇರೆ ಆಯಾಮದಲ್ಲಿ ಕೆಲಸಮಾಡಿದೆ. ಒಂದು ಸಾಮಾಜಿಕ ಸಮಸ್ಯೆಯನ್ನು ಲಘುವಾಗಿ ಹೇಳಿರುವ ರೀತಿ ಇದರದ್ದು. ಆದರೆ ಕಾವ್ಯದಲ್ಲಿ ಈ ಅಂಶವನ್ನು ದುಡಿಸಿಕೊಳುವುದಕ್ಕಿಂತ, ಕೇವಲ ಒಂದು ಯುಕ್ತಿಗಾಗಿ ಕೊಟ್ಟ ದೃಷ್ಟಾಂತ ಮಾತ್ರವಾಗಿ ಕಾಣುತ್ತದೆ.

ಈ ಕಥೆಯ ಇನ್ನೊಂದು ಮುಖ್ಯಾಂಶವೆಂದರೆ, ವಿಷ್ಣುಶರ್ಮನ ಹೆಂಡತಿಯ ಮತ್ತು ಆಕೆಯ ಪ್ರಣಯಿಯ ವರ್ತನೆ. ಈ ಪ್ರಸಂಗ ಸಹಜವಾಗಿಯೇ ಜನ್ನನ'ಯಶೋಧರ ಚರಿತೆ'ಯ ಅಮೃತಮತಿ ಪ್ರಸಂಗವನ್ನು ನೆನಪಿಗೆ ತರುತ್ತದೆ. ಇಲ್ಲಿಯ ದುರ್ಮತಿ ಅಲ್ಲಿಯ ಅಮೃತಮತಿಯಾಗಿದ್ದಾಳೆ. ದುರ್ಮತಿ ಕೆಲಕಾಲದ ಮೇಲೆ ತನ್ನ ಪ್ರಣಯಿಯನ್ನು ಬರಿಸಿದಾಗ, ಆವನು ಆಕೆಯನ್ನು ಬಾಯಿಗೆ ಬಂದಂತೆ ಬೈದು ಬಡಿಯುವನು. ಇದು ಅಮೃತಮತಿ ತಡವಾಗಿ ಬಂದುದಕ್ಕೆ ಅಷ್ಟಾವಂಕ ಬೈದು ಬಡಿದ ಪ್ರಸಂಗದಂತೆಯೇ ಇದೆ. ಆಗ ತಮ್ಮ ಪ್ರಣಯಿಗಳನ್ನು ಸಮಾಧಾನ ಪಡಿಸಲು ಹೇಳಿದ ಕಾರಣಗಳು ಕೂಡ ಒಂದೇ ಬಗೆಯವಾಗಿವೆ. ಈ ಸಂದರ್ಭದ ದುರ್ಮತಿಯ ಮಾತುಗಳು ದುರ್ಗಸಿಂಹನಲ್ಲಿ ಹೀಗೆ ಬಂದಿವೆ:

ಮುನಿಯದಿರುನಲ್ಲ ನೀನಿಂ
ತಿನಗೆಲೆ ಸಲೆ ಗಂಡನಪ್ಪ ಷಂಡಂ ನಿಚ್ಚಂ

[1]ಮನೆಸನಿಗೊಂಡಿರೆ ಬರಿಸ
ಲ್ಕೆನಗಿ[2]ಂಬಿಲ್ಲಾಗಿ ನಿನ್ನನಾಂ ನೆನೆದಿನಿಸುಂ

ಮಱುಗುತ್ತುಂ ಚಿಂತಿಸುತಂ
ಬೞಗಾದಂತಿರ್ದೆನಲ್ಲದಾನೋ[3]ಪಳೆ[4]ಮೆ
ಯ್ಗರೆದಿರ್ದೆನಲ್ಲೆನೆಂದಡಿ
ಗೆಱಗಿದಾರ್[5]ಪಾಣ್ಬೆ[6]ಪಾಣ್ಬನಂ ನಂಬಿಸಿದಳ್

ಇದಕ್ಕೆ ಹೋಲಿಕೆಯಾಗಿ 'ಯಶೋಧರ ಚರಿತೆ'ಯಲ್ಲಿ ಬರುವ ಅಮೃತಮತಿ ಹೇಳುವ ಈ ಪದ್ಯಗಳನ್ನು ಗಮನಿಸಬಹುದು :

ತಡವಾದುದುಂಟು ನಲ್ಲನೆ
ಬಡ[7]ಮುಳಿಯದಿರರಸನೆಂಬ ಪಾತಕನೆನ್ನಂ
ತೊಡೆಯೇಱಿಸಿ[8]ಕೇಳಿಕೆಯಾ
ದೊಡೆ ನೋಡುತ್ತಿರ್ದೆನು[9]ಂತೆ ನಿಲಲ[10]ಣ್ಮುವೆನೇ

ಕಿವಿ ಸವಿದನಿ ಕಣ್ಸವಿ ರೂ
ಪ[11]ವಧರಿಸೆಲೆ [12]ಗಜವೆಡಂಗ ನೀನುೞಿದೊಡೆ ಸಾ
ವವಳೆನಗೆ ಮಿಕ್ಕ ಗಂಡರ್
ಸವಸೋದರರೆಂದು ತಿಳಿಪಿದಳ್ ನಂಬುಗೆಯುಂ

---

1 ಮನೆಸನಿಗೊಂಡಿರೆ–ಮನೆಯು ಶನಿಯಂತೆ ಇರಲಾಗಿ, ಶನಿಯಂತೆ ಮನೆಯಲ್ಲಿ ಇರಲಾಗಿ; 2 ಇಂಬಿಲ್ಲಾಗಿ–ಅವಕಾಶವಾಗಲಿಲ್ಲವಾಗಿ;
3 ಓಪಳೆ–ಪ್ರಿಯಳೆ; 4 ಮೆಯ್ಗರೆದಿರ್ದೆನಲ್ಲೆನ್–ಮೈಮರೆತಿದ್ದವಳಲ್ಲ; 5 ಪಾಣ್ಬೆ–ಜಾರೆ; 6 ಪಾಣ್ಬ–ಜಾರ;
7 ಮುಳಿಯದಿರು–ಕೋಪಿಸಿಕೊಳ್ಳದಿರು; 8 ಕೇಳಿಕೆ–ವಿನೋದ;
9 ಉಂತೆ–ಸುಮ್ಮನೆ; 10 ಅಣ್ಮು–ಪ್ರಯತ್ನಮಾಡು;
11 ಅವಧರಿಸು–ಕೇಳು, ಗಮನಿಸು; 12 ಗಜವೆಡಂಗ–ಆನೆಯ ಸೊಬಗ.

ಈ ಎರಡೂ ಪ್ರಸಂಗಗಳು ಒಂದೇ ಬಗೆಯ ವರ್ತನೆಗಳನ್ನು ಹೇಳುತ್ತವೆ, ಒಂದೇ ಬಗೆಯ ಕ್ರಿಯೆಗಳನ್ನು ತಿಳಿಸುತ್ತವೆ. ಜನ್ನ ದುರ್ಗಸಿಂಹನಿಗಿಂತ ಈಚಿನವನಾದರೂ ಈ ವಿಷಯದಲ್ಲಿ ಅವನನ್ನು ಅನುಸರಿಸುವ ಆಗತ್ಯವಿಲ್ಲ. ಏಕೆಂದರೆ, ಅವನಿಗೆ ವಾದಿರಾಜನ ಸಂಸ್ಕೃತದ ಕಥೆಯಿದೆ. ಆದ್ದರಿಂದ ಈ ಬಗೆಯ ಕಥೆಗಳು ಗುಣಾಢ್ಯನ ಕಾಲದಿಂದಲೂ ದೊರೆಯುತ್ತ ಬಂದಿರ ಬೇಕೆನಿಸುತ್ತದೆ. ದುರ್ಗಸಿಂಹ ಮೇಲಿನ ಕಥೆಗೆ ಈ ವಿವರಣೆ ಯನ್ನು ತಾನೇ ಸ್ವತಂತ್ರನಾಗಿ ಸೇರಿಸಿರಬಹುದು, ಇಲ್ಲವೆ ಇದರ ಮೇಲೆ ಯಾವುದಾದರೂ ಕಥಾಪ್ರಸಂಗದ ಪ್ರಭಾವವಿರಬಹುದು; ಅಥವಾ ತಾನು ಅನುಸರಿಸಿರುವ ವಸುಭಾಗ ಭಟ್ಟನಲ್ಲಿಯೇ ಇಂಥ ವಿಶ್ಲೇಷಣೆಯೊಂದು ಇದ್ದಿರಬೇಕು.

ಮೂರನೆಯದಾಗಿ, ಒಂದೆರಡು ಹೆಚ್ಚಿನ ವಿಚಾರಗಳಿಗಾಗಿ, ವನದಲ್ಲಿ ಕಟ್ಟು ಬಿದ್ದಿದ್ದ ಆನೆಯನ್ನು ಇಲಿ ಬಿಡಿಸಿದ ಕಥೆ ಮುಖ್ಯ ವಾಗುತ್ತದೆ. ಕಥೆಯ ಜಾಯಮಾನ ಮತ್ತು ಅದನ್ನು ಬಳಸಿ ಕೊಳ್ಳುವ ರೀತಿಗೆ ಸಂಬಂಧಿಸಿದಂತೆ ಇದನ್ನು ನೋಡ ಬಹುದು. ಜಲಪ್ರವಾಹದಲ್ಲಿ ಸಿಕ್ಕಿಬಿದ್ದ ಇಲಿಗಳ ಸಮೂಹವನ್ನು ಆನೆ ಯೊಂದು ಬದುಕಿಸುವುದು. ಆನೆಗೇನಾದರೂ ತೊಂದರೆ ಯಾದಾಗ ನೆನೆಯುವಂತೆ ಮೂಷಿಕರಾಜ ಹೇಳುವುದು. ಮುಂದೊಂದು ದಿವಸ ಆನೆ ಕಟ್ಟಿಗೊಳಗಾದಾಗ ನೆನೆಯಲು ಮೂಷಿಕರಾಜ ಬಂದು ಪಾಶವನ್ನು ಕಡಿದು ಬಿಡಿಸುವುದು. ಆದರೆ ಆನೆಗೆ ಬಂಧನವೇಕಾಯಿತೆಂಬುದರ ವಿವರ ಕಥೆಯಲ್ಲಿಲ್ಲ. ಅಲ್ಲದೆ ಕಥೆ ಎಲ್ಲೋ ಮಧ್ಯದಿಂದ ಆರಂಭಗೊಂಡಂತೆ ಕೂಡ ತೋರುವುದು. ಆದ್ದರಿಂದ ಮೂಲಕಥೆ ಕೈತಪ್ಪಿ ಹೋಗಿ, ಅದರ ಸಂಕ್ಷಿಪ್ತರೂಪವೂ ಆಶಯವೂ ಉಳಿದಂತೆ ತೋರುವುದು.

ಕೃತಜ್ಞತೆಯ ಕೆಲಸವಮಾಡಿದರೆ ಅದಕ್ಕೆ ಪ್ರತಿಯಾಗಿ ತನ್ನ ಕಷ್ಟ ಕಾಲದಲ್ಲಿ ನೆರವಿಗೆ ಬರುತ್ತದೆಂಬುದು ಇದರ ಆಶಯ. ಇದು ಜನಪದ ಕಥೆಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ಅಂಶ. ಆದರೆ ಬಹಳ ಸಾರಿ ಇದು ದೀರ್ಘ ಕಥೆಗಳ ಒಂದು ಭಾಗವಾಗಿ ಕೆಲಸಮಾಡುವಂತೆ ತೋರುವುದು. ಇದು 'ಮಿತ್ರಕಾರ್ಯ ಪ್ರಕರಣ'ದಲ್ಲಿ ಬಂದಿದ್ದು, ಹಾಗೆ ಇಲ್ಲಿಗೆ ಹೇಳುವಂತೆ ಚಿತ್ರಿತ ವಾಗಿದೆ.

ಮೇಲಿನ ಪರಿಶೀಲನೆಯಿಂದ ಉಪಕಥೆಗಳ ಸ್ವರೂಪವನ್ನು ಗ್ರಹಿಸಬಹುದು. ಇವುಗಳಲ್ಲಿ ಬಹುತೇಕ ಪ್ರಾಣಿಗಳೇ ಪಾತ್ರ ವಹಿಸುತ್ತವೆ, ಆದ್ದರಿಂದ ಇವು ಪ್ರಾಣಿಕಥೆಗಳು; ನೀತಿಯನ್ನು ಹೇಳುವುದರಿಂದ ಇವು ನೀತಿಕಥೆಗಳೂ ಹೌದು. ಸಾಮಾನ್ಯ ವಾಗಿ ತನಗಿಂತಲೂ ಶಕ್ತವಾದ ಪ್ರಾಣಿಯೊಂದನ್ನು ಶಕ್ತವಲ್ಲದ ಪ್ರಾಣಿ ಎದುರಿಸಿ ಜಯಗಳಿಸುವುದನ್ನು ನೋಡುತ್ತೇವೆ. ಅದ ಕ್ಕಾಗಿ ಅನಿರೀಕ್ಷಿತ ಹೊಳಹು, ಉಪಾಯ, ತಂತ್ರಗಳು ಬರುತ್ತವೆ. ತಂತ್ರಕ್ಕೆ ಪ್ರತಿತಂತ್ರ, ಉಪಾಯಕ್ಕೆ ಪ್ರತಿ ಉಪಾಯ—ಇದು ಕಥೆಯ ರೀತಿ. ಒಂದು ಕಡೆ ಕಪಟ, ಮೋಸ, ವಂಚನೆಗಳಿದ್ದರೆ, ಇನ್ನೊಂದು ಕಡೆ ಅವನ್ನು ಉಪಾಯದಿಂದ ಗೆಲ್ಲುವ ಪ್ರಯತ್ನಗಳಿರುತ್ತವೆ. ಹೀಗಾಗಿ ಶಕ್ತಿಗಿಂತ ಯುಕ್ತಿಯೇ ಮೇಲೆನ್ನುವುದು, ರಾಜ ನೀತಿಯಲ್ಲಿ ಇದರ ಅಳವಡಿಕೆ ಅತ್ಯಂತ ಮುಖ್ಯವೆನ್ನುವುದು ಇವುಗಳ ತಿರುಳು. ಅಂತಿಮವಾಗಿ, ಕೆಟ್ಟದ್ದು ಸತ್ತು ಒಳ್ಳೆಯದು ಉಳಿಯಬೇಕೆಂಬ ನಿಲುವಿನ ಆರೋಗ್ಯಕರ ಗೆಲುವಿಗೆ ಈ ಕಥೆಗಳು ಸಾಂಕೇತಿಕ ವಾಗಿ ಉತ್ತರಿಸುವಂತೆ ತೋರುತ್ತವೆ.

೫. ನೀತಿ

ಸರಿಯಾಗಿ ಹೇಳುವುದಾದರೆ 'ಪಂಚತಂತ್ರ' ನೀತಿಕಥೆಗಳ ಗುಚ್ಛ. ಆದರೆ ಸಾಹಿತ್ಯದ ನಿರಂತರ ಸ್ಪರ್ಶದಿಂದಾಗಿ, ರಾಜಕುಮಾರರ ರಾಜನೀತಿಕಲಿಕೆಯ ಏಕ ಸೂತ್ರದ ಸಾಮರಸ್ಯದಿಂದಾಗಿ ಇದೊಂದು ಕಾವ್ಯ. ಪ್ರತಿಯೊಂದು ಕಥೆಯ ಒಡಲಿನಲ್ಲಿಯೂ ನೀತಿಯ ಬೆಳವಣಿಗೆ ಇದೆ. ನೀತಿಯ ವಿವರಣೆಯಾಗಿಯೊ ದೃಷ್ಟಾಂತವಾಗಿಯೊ ಈ ಕಥೆಗಳಿವೆ. ಆದ್ದರಿಂದ ಈ ಕೃತಿಯಲ್ಲಿ ನೀತಿ ಒಂದು ಭಾಗವಾದರೆ, ಕಥೆಗಳದು ಇನ್ನೊಂದು ಭಾಗ. ನೀತಿಗಾಗಿ ಕಥೆಯೇ ಹೊರತು, ಕಥೆಗಾಗಿ ನೀತಿಯಲ್ಲ. ಇದರಿಂದ ಸಹಜವಾಗಿಯೇ ಕಾವ್ಯದಲ್ಲಿ ನೀತಿ ಪ್ರಮುಖ ಸ್ಥಾನ ಪಡೆಯುತ್ತದೆ. ಇದಕ್ಕಾಗಿಯೇ ಶ್ಲೋಕಗಳನ್ನೂ ಗಾಹೆಗಳನ್ನೂ ಬಳಸಿಕೊಳ್ಳಲಾಗಿದೆ. ಇವೆಲ್ಲ ನೀತಿರೂಪದ ವಾಕ್ಯಗಳೆ; ಇವುಗಳ ಭಾಷ್ಯಗಳೆನ್ನುವಂತೆ ಕಥೆಗಳಿವೆ. ಇವುಗಳನ್ನು ದುರ್ಗಸಿಂಹ ತಾನು ಸ್ವೀಕರಿಸಿರುವ ಆಕರದಿಂದಲೆ ತೆಗೆದುಕೊಂಡಿರಬಹುದು; ಇಲ್ಲವೆ ಅನ್ಯ ಮೂಲಗಳಿಂದಲೂ ಪಡೆದಿರಬಹುದು. ಇಂಥ ೨೩೦ ಸಂಸ್ಕೃತ ಶ್ಲೋಕಗಳು ಕೃತಿಯಲ್ಲಿ ಉಲ್ಲೇಖಗೊಂಡಿವೆ; ಸುಮಾರು ಒಟ್ಟು ಪದ್ಯರಚನೆಯ ಅರ್ಧದಷ್ಟು. ಈ ೨೩೦ ರಲ್ಲಿ ೧೦೦ ಇತರ ಪಂಚತಂತ್ರಗಳಲ್ಲಿ ಲಬ್ಧವಿವೆ ಎಂಬುದು ಎ. ವೆಂಕಟ ಸುಬ್ಬಯ್ಯನವರ ಅಭಿಪ್ರಾಯ. ಹಾಗಾದರೆ ಉಳಿದವು ವಸುಭಾಗ ಭಟ್ಟನಿಂದ ತೆಗೆದು ಕೊಂಡವುಗಳೆಂದು ಭಾವಿಸಬಹುದೆ? ಪ್ರಾಚೀನ ನೀತಿಶಾಸ್ತ್ರ ಕೃತಿಗಳಿಂದಲೂ ಸುಭಾಷಿತ ಗ್ರಂಥಗಳಿಂದಲೂ ಆಯ್ದು ಕೊಂಡವುಗಳೂ ಇರಬಹುದು. ಶ್ಲೋಕಗಳಲ್ಲಿ ಬಹುತೇಕ ಭಾಗ ನೀತಿ

ವಿಷಯಿಕವಾದ ಸುಭಾಷಿತಗಳಾಗಿವೆ. ಆದರೆ ಕೆಲವು ಕಥಾ ಸಂದರ್ಭವನ್ನು ಹೊತ್ತವು. ಇವಂತು ಇವನಿಗೆ ಆಕರವಾಗಿರ ಬಹುದಾದ ಅಥವಾ ಆದಕ್ಕೆ ಸಮಾನವಾದ ಪಂಚತಂತ್ರಗಳಿಂದ ತೆಗೆದು ಕೊಂಡಿರ ಬೇಕೆನಿಸುತ್ತದೆ. ಈ ನೀತಿ ಶ್ಲೋಕಗಳಿಗೆ ಕವಿಯೇ ಕನ್ನಡದಲ್ಲಿ ಟೀಕೆಗಳನ್ನು ಬರೆದು ವಿವರಿಸಿದ್ದಾನೆ. ಇವಲ್ಲದೆ ಕವಿಯೇ ಸ್ವತಃ ಅನುಭವದಿಂದಲೂ ಅಭ್ಯಾಸದಿಂದಲೂ ಬರೆದಿರುವ ಅನೇಕ ಪದ್ಯಗಳಿವೆ. ಇವೆಲ್ಲವೂ ನೀತಿಯನ್ನು ತುಂಬ ಆಪ್ತವಾಗಿ ತಿಳಿಸುತ್ತವೆ. ಇಲ್ಲಿ ನೀತಿ ಎಂದರೆ ಬಹುತೇಕ ವಾಗಿ ರಾಜ ನೀತಿಯೆಂದೇ ಅರ್ಥ; ಕೆಲವೊಮ್ಮೆ ಜೀವನಾನು ಭವದ ಸಹಜಾಭಿಪ್ರಾಯಗಳೂ ಆಗಿರುವುದಿದೆ. ಹೀಗೆ ನಯ ಶಾಸ್ತ್ರ ಕ್ರಮದಿಂದ ವಿರೋಧಿರಾಜರನ್ನು ಗೆಲ್ಲುವ ಅನೇಕ ಚತು ರೋಕ್ತಿಗಳು ಕಾವ್ಯದಲ್ಲಿವೆ. ಪ್ರಧಾನ ಕಥೆಯಲ್ಲಿ ಉಪಕಥೆಗಳಂತೆ ನೀತಿ ನಿರೂಪಣೆಯೂ ಮುಖ್ಯವಾಗಿರುವುದರಿಂದ ಈ ಕುರಿತು ಪ್ರತ್ಯೇಕವಾಗಿ ಪ್ರಸ್ತಾಪಿಸುವುದು ಉಪಯುಕ್ತವೆನಿಸುತ್ತದೆ.

ಈ ಕೃತಿಯ ಮೂಲ ಉದ್ದೇಶವೇ ರಾಜಕೀಯ ಶಾಸ್ತ್ರದ ಬೋಧನೆಯಾಗಿರುವುದರಿಂದ, ಇದಕ್ಕೆ ಸಂಬಂಧಿಸಿದ ನೀತಿ ಸಂಹಿತೆ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಪುಸ್ತಕ ರಾಜನೀತಿ ಶಾಸ್ತ್ರದ ಕೈಪಿಡಿ ಎನ್ನುವುದಕ್ಕೆ ಇದು ಮುಖ್ಯ ಕಾರಣ. ನೀತಿ ನಿರೂಪಣೆ ರಾಜಕೀಯಕ್ಕೆ ಉದ್ದಿಷ್ಟವಾದುದಾದರೂ, ಆ ಮೂಲಕ ಒಂದು ಸಾಮಾಜಿಕ ನಡವಳಿಕೆಯನ್ನೂ ರೂಪಿಸುತ್ತದೆ. ಉತ್ಕಟ ಪರಿಸ್ಥಿತಿಗಳಲ್ಲಿ ಇವುಗಳ ಅನುಸರಣೆಯ ಉಪಯೋಗ ಹೆಚ್ಚು. ಈ ನೀತಿ ಸಂಹಿತೆಯ ಒಂದು ಭಾಗವಾಗಿ ಯುದ್ಧ, ಮಂತ್ರಾಲೋಚನೆ, ಸಂಧಾನ, ಶರಣಾಗತಿಯಂತಹ ವಿಷಯ ಗಳು ಬರುತ್ತವೆ. ಇವನ್ನು ನೀತಿಶಾಸ್ತ್ರದ ಚೌಕಟ್ಟಿನಲ್ಲಿಯೇ

ನಿರೂಪಿಸಲಾಗಿದೆ. ಯುದ್ಧ ಯಾವಾಗಲೂ ಕೆಟ್ಟದ್ದೆಂದು ತೋರಿಸುವ ಪ್ರಯತ್ನವಿದೆ. ಯುದ್ಧವನ್ನು ಯಾರೊಡನೆ ಮಾಡಬೇಕು, ಯಾರೊಡನೆ ಮಾಡಬಾರದು, ಯಾವಾಗ ಮಾಡಬೇಕು, ಯಾವಾಗಮಾಡಬಾರದು–ಎಂಬೆಲ್ಲ ವಿಷಯಗಳು ಇದರಲ್ಲಿ ಅಂತರ್ಗತವಾಗಿವೆ. ಇವನ್ನು ವಿಚಾರ ಮಾಡುವ 'ವಿಶ್ವಾಸ ಪ್ರಕರಣದ'ದ ಎರಡು ಪದ್ಯಗಳನ್ನು ಗಮನಿಸಿ :

[1]ನಯವಿದನಲ್ಲಂ [2]ಶಕ್ತಿ
ತ್ರಯ ರಹಿತಂ ವ್ಯಸನಿ [3]ವಿಗ್ರಹಾಸಕ್ತನನಿ
ಶ್ಚಯ ಬುದ್ಧಿ ವಿರಕ್ತ ಪ್ರಕೃ
ತಿಯೆನಿಪ್ಪರಿ ನೃಪನೊಳಿಱಿವುದುೞಿವುದುನಯಮಂ

ಸಮಬಲನೊಳಧಿಕ ಬಲನೊಳ್
ಸಮರ ಕ್ರೀಡಾ ಕ್ರಿಯಾ ಸಮರ್ಥನೊಳಧಿಕೋ
ದ್ಯಮನೊಳ್ ಮಾೞ್ಪುದು ಸಂಧಿಯ
ನಮೋಘಮಾತ್ಮೀಯ ಬುದ್ಧಿಯಂ ಬಗೆವ ನೃಪಂ

ಮೊದಲನೆಯದು ಯಾರೊಡನೆ ಯುದ್ಧಮಾಡಬಹುದೆಂಬುದನ್ನೂ, ಎರಡನೆಯದು ಯಾರೊಡನೆ ಸಂಧಿಮಾಡಿ ಕೊಳ್ಳಬಹುದೆಂಬುದನ್ನೂ ತಿಳಿಸುವುದು. ನೀತಿಶಾಸ್ತ್ರಜ್ಞನಲ್ಲದ, ಶಕ್ತಿತ್ರಯವಿಲ್ಲದ, ಚಿಂತಾಪರನಾದ, ಯುದ್ಧಾಸಕ್ತನಾದ, ಅನಿಶ್ಚಿತ ಬುದ್ಧಿಯ, ವಿರಕ್ತಸ್ವಭಾವದ ನೃಪರಲ್ಲಿ ನೀತಿಯನ್ನು ಬಿಟ್ಟು ಇರಿಯುವುದೇ ಮೇಲೆಂದು ಹೇಳಲಾಗಿದೆ. ಆದರೆ ಇದು

1 ನಯವಿದ–ನೀತಿಶಾಸ್ತ್ರಜ್ಞ; 2 ಶಕ್ತಿತ್ರಯ–ಪ್ರಭುಶಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿ; 3 ವಿಗ್ರಹ ಯುದ್ಧ.

ಎಲ್ಲ ಕಡೆಯೂ ಸಮರ್ಪಕವೆನಿಸದು, ಸಂದರ್ಭದ ತಂತ್ರವಾಗಿ ತೆಗೆದುಕೊಳ್ಳಬಹುದಷ್ಟೆ. ಹಾಗೆಯೇ ಸಮಾನ ಬಲನೂ ಅಧಿಕ ಬಲನೂ ಯುದ್ಧವನ್ನು ಕ್ರೀಡೆಯಾಗಿ ತೆಗೆದುಕೊಂಡು ಅದರಲ್ಲಿಯೇ ನಿರತನಾದವನೂ ಆದ ರಾಜನೊಡನೆ ಸಂಧಿ ಮಾಡಿಕೊಳ್ಳುವುದೇ ಉತ್ತಮವೆಂದು ನೀತಿ. ಒಟ್ಟು ವಿಚಾರವೆಂದರೆ, ತನಗಿಂತ ಸಮರ್ಥರಲ್ಲದವರಲ್ಲಿ ಯುದ್ಧವನ್ನೂ, ಸಮರ್ಥರಾದವರಲ್ಲಿ ಸಂಧಾನವನ್ನೂ ಪಾಲಿಸಬೇಕೆಂಬುದು. ಇದನ್ನು ಒಂದು ರಾಜಕೀಯ ತಂತ್ರವಾಗಿ ತೆಗೆದುಕೊಳ್ಳಬೇಕೇ ಹೊರತು, ನೈತಿಕ ಪ್ರಶ್ನೆಯಾಗಿ ನೋಡಬಾರದು.

ರಾಜ್ಯಭಾರ ಮಾಡುವವನಿಗೆ ಮಂತ್ರಾಲೋಚನೆ ಮುಖ್ಯ ಶತ್ರುವಿನ ಮೇಲೆ ವಿಜಯ ಸಾರುವುದಕ್ಕೆ "ಚತುರಂಗ ಬಲಮೇವುದೊ ಸನ್ಮಂತ್ರಮೆ ಸಾಲ್ಗುಂ" ಎಂಬ ಮಾತಿದೆ. ಆದ್ದರಿಂದ ರಾಜನು ಮಂತ್ರ ಮುಖ್ಯನಾದಾಗ ವಿರೋಧಿಗಳನ್ನು ಸುಲಭವಾಗಿ ಸೋಲಿಸಬಹುದು. ರಾಜನಿಗೆ ಅಗತ್ಯವಾದ ಪ್ರಭುಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹಶಕ್ತಿ ಎಂಬ ಶಕ್ತಿತ್ರಯಗಳ ಸ್ವರೂಪವನ್ನು ವಿವರಿಸಿ, ಇವುಗಳಲ್ಲಿ ಮಂತ್ರಶಕ್ತಿಯೇ ಮಿಗಿಲೆಂದು ವಾದಿಸಲಾಗಿದೆ. ಆದ್ದರಿಂದ ರಾಜ ಎಷ್ಟೇ ಸಮರ್ಥನಾದರೂ, ಬುದ್ಧಿವಂತರೂ ಮಂತ್ರಿಗಳೂ ಆದವರಲ್ಲಿ ಆಲೋಚಿಸಿ ಅನಂತರ ಕಾರ್ಯಕ್ಕೈಕೊಳ್ಳಬೇಕೆಂದು ಪ್ರತಿಪಾದಿಸಲಾಗಿದೆ. ಅವಿವೇಕಿಯೂ ಕ್ಷುದ್ರನೂ ಅರಸನಾದರೆ ಅದರಿಂದ ಉಪದ್ರವವೇ ಹೆಚ್ಚು ಎಂಬುದು ಈ ಸಂದರ್ಭದ ನೀತಿ. ಶತ್ರು ಬಲವಂತನೂ ಮತಿವಂತನೂ

ಅಸಾಧ್ಯನೂ ಆದ ಸಂದರ್ಭದಲ್ಲಿ ಓಡಿ ಹೋಗುವುದೇ ಉಪಾಯ ವೆಂದು ನೀತಿಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರಂತೆ.

ಈ ಮೇಲಿನ ವಿಷಯಗಳಂತೆಯೇ 'ಶರಣಾಗತ ರಕ್ಷಣೆ' ಕೂಡ ರಾಜನೀತಿಯಲ್ಲಿ ಮುಖ್ಯವಾದುದು. ಯುದ್ಧದಲ್ಲಿ ಇದಿರಿಸಿದವರನ್ನು ಸಂಹರಿಸುವುದು ದೋಷವಲ್ಲ, ಆದರೆ ಶರಣಾಗತರಾದವರನ್ನು ರಕ್ಷಿಸುವುದು ಕರ್ತವ್ಯ. ಈ ಶರಣಾಗತರು ಯುದ್ಧ ಮಾಡಲು ಯೋಗ್ಯರಲ್ಲದವರಾಗಿರಬಹುದು ; ಇಲ್ಲವೇ, ರಾಜತಾಂತ್ರಿಕ ಕಾರಣಕ್ಕಾಗಿ ಮರೆಹೊಕ್ಕವರಾಗಿರಬಹುದು. ಕಾರಣವೇನೇ ಇರಲಿ, "ಶರಣಾಗತ ರಕ್ಷಣವೇ ನರಪಂಗೆ ವಿಶೇಷ ಲಕ್ಷಣಂ" ಎಂದಿದ್ದಾನೆ ಕವಿ. ವಿಷಯಕ್ಕೆ ಸಂಬಂಧಿಸಿದಂತೆ ಈ ಪದ್ಯವನ್ನು ನೋಡಬಹುದು :

ಪುತ್ತೇಱಿದನಂ [1]ಕೈದುವ
ನಿತ್ತನನೇ[2]ರ್ಪೆತ್ತನಂ ರಣಾಂಗಣದೊಳ್ ಬೆ
ನ್ನಿತ್ತನನಿಱಿಯುರವೋಘಂ
ಮತ್ತೆನಿಸದೆ ತುಱಿಲಸಂದ ಜನವುಂ ಜಗದೊಳ್

ಹುತ್ತವೇರಿದ, ಆಯುಧವಿಳುಹಿದ, ಗಾಯಗೊಂಡ, ಬೆನ್ನು ಕೊಟ್ಟ ಮುಂತಾದವರನ್ನು ಕೊಲ್ಲಕೂಡದೆಂದು ಯುದ್ಧ ನೀತಿ. ಇದರ ಜೊತೆಗೆ ಹುಲ್ಲು ಕಚ್ಚಿದವರೂ, ಮರೆಹೊಕ್ಕವರೂ, ಸ್ತ್ರೀಬಾಲವೃದ್ಧ ಜನರೂ ಸೇರಿಕೊಳ್ಳುವರು. ಹಿಂದೆ ರಾಜ ರಾದವರು ಯುದ್ಧಗಳಲ್ಲಿ ಈ ನೀತಿಗಳನ್ನು ಅನುಸರಿಸುತ್ತಿದ್ದರು.

---

1 ಕೈದು–ಆಯುಧ ; 2 ಏರ್ಪೆತ್ತ–ಗಾಯಗೊಂಡ.

ಇದು ಸಾಮಾಜಿಕವಾಗಿಯೂ ಮುಖ್ಯವೇ. ಸಮರಸಂಹಿತೆ ಯಂತೆಯೇ ಲೋಕ ನೀತಿಯೂ ಹೌದು.

ಪ್ರಸ್ತುತ ಸಂದರ್ಭದಲ್ಲಿ ರಾಜರ ವಿಷಯವಾಗಿ ಅನೇಕ ಟೀಕೆ ಗಳಿವೆ; ಅವರ ಗುಣಾವಗುಣಗಳನ್ನು ಕುರಿತಂತೆ ಈ ಮಾತು ಗಳಿವೆ. ರಾಜನು ಕಾಮಾಸಕ್ತನಾಗಿದ್ದು ತುದಿಯಲ್ಲಿ ಆಪತ್ತಾದರೆ ಅದನ್ನು ಅಮಾತ್ಯನ ಮೇಲೆ ಆರೋಪಿಸಿದರೆ, ಅವನೆಂದೂ ನಿಜಸ್ಥಿತಿಯನ್ನು ಅರಿಯಲಾರನೆಂಬುದು ಒಂದು ವಿಚಾರ. ಹೀಗೆ ರಾಜ–ಮಂತ್ರಿಯರ ನಡುವಿನ ನಡವಳಿಕೆಗಳ ಬಗ್ಗೆ ಅನೇಕ ಉಲ್ಲೇಖಗಳಿವೆ. ಅರಸನಾದವನು ಮಂತ್ರಿಗಳ ಮಾತನ್ನು ಕೇಳಬೇಕೆನ್ನುವುದು ನೀತಿ. ಹಾಗೆಯೇ ನೃಪನಿಗೂ ಪ್ರಜೆಗಳಿಗೂ ಹಿತವನ್ನುಂಟುಮಾಡುವ ಮಂತ್ರಿಯೂ ದುರ್ಲಭ. ರಾಜರು ಯಾವಾಗಲೂ ಒಂದೇ ರೀತಿ ಇರುತ್ತಾರೆನ್ನುವಂತಿಲ್ಲ. ಗುಣಗ್ರಾಹಿಗಳು ಯಾವತ್ತೂ ವಿರಳವೇ. ಈ ಸಂದರ್ಭದಲ್ಲಿ ಬರುವ “ಓರೊರ್ವರ ಗುಣಕ್ಕೆ ಮಚ್ಚರಿಸಿ ತೋಱುತ್ತಿರ್ಪರೀ ಕಾಲದರಸುಗಳ್” ಎಂಬ ಮಾತನ್ನು ಗಮನಿಸಬಹುದು. ರಾಜನು ಕೆಲವು ವೇಳೆ ಕಲಿಯನ್ನು ಹೇಡಿಯೆಂದೂ ಹೇಡಿಯನ್ನು ಕಲಿ ಯೆಂದೂ ಭಾವಿಸಿ ಸತ್ಯವಂತನಿಗೆ ಸ್ಥಾನ ದೊರೆಯದೆ ಹೋಗುವ ರೀತಿಯಲ್ಲಿ ನಡೆದುಕೊಳ್ಳುವುದನ್ನು ವಿಡಂಬಿಸಲಾಗಿದೆ. ಇಂಥ ರಾಜರಲ್ಲಿ “ಎಂತುಂ ಸೇವಾವೃತ್ತಿಯೇ ಕಷ್ಟಂ” ಎಂದಿದ್ದಾನೆ ಕವಿ. ಇದರೊಡನೆ ಪಂಪನ “ಓಲೈಸಿ ಬಾಳ್ವುದು ಕಷ್ಟಂ ಇಳಾಧಿನಾಥರಂ” ಎಂಬ ಹೇಳಿಕೆಯನ್ನು ನೆನೆಯಬಹುದು. ಕವಿ ಈ ಸಮಯದಲ್ಲಿ “ಅರಸುಮಾನೆಯುಂ ತಿರಿಪುವರಿಚ್ಛೆ” ಎಂಬ ಲೋಕ ಪ್ರಸಿದ್ಧ ಗಾದೆಯನು ಉಲ್ಲೇಖಿಸುವನ್ನು.

ಪಿಸುಣಿಗೆ ಸುಲಭವಾಗಿ ಕಿವಿಗೊಡುತ್ತಾನೆಂದೂ, ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯಿರುವುದಿಲ್ಲವೆಂದೂ ಇದರ ಅರ್ಥ.

ಮಾನವನ ಆ ಗು ಹೋ ಗು ಗ ಳ ಸಂದರ್ಭದಲ್ಲಿ 'ದೈವ ಪ್ರಯತ್ನ' ಮತ್ತು 'ಪುರುಷ ಪ್ರಯತ್ನ'ಗಳ ವಿಚಾರ ಆಗಾಗ್ಗೆ ಪ್ರಸ್ತಾಪಕ್ಕೆ ಬರುತ್ತದೆ. ಇದರಲ್ಲಿ ಕೆಲವರು ದೈವ ಪ್ರಯತ್ನಕ್ಕೂ, ಮತ್ತೆ ಕೆಲವರು ಪುರುಷ ಪ್ರಯತ್ನಕ್ಕೂ ಹೆಚ್ಚಿನ ಪ್ರಾಧಾನ್ಯ ಕೊಡುವುದನ್ನು ನೋಡುತ್ತೇವೆ. ದೈವ ಪ್ರಯತ್ನ ತನ್ನಿಂದ ತಾನಾಗುವುದಲ್ಲ; ಅ ಮೂ ರ್ತ ವಾ ದು ದು ಕೂ ಡ. ಇದು ಅದೃಷ್ಟದ ಸ್ವರೂಪದ್ದು, ಆಕಸ್ಮಿಕವಾದುದು. ಇದರಲ್ಲಿ ಸಂಪೂರ್ಣ ಹೊಣೆಯನ್ನು ತನ್ನ ಮೇಲೆ ತೆಗೆದುಕೊಳ್ಳುವುದಕ್ಕೆ ಬದಲಾಗಿ, ಅದರಿಂದ ಪಾರಾಗುವ ಪ್ರಯತ್ನವಿದೆ. ಆದರೆ ಪುರುಷ ಪ್ರಯತ್ನ ತನ್ನಿಂದಾಗಿಯೇ ನಡೆಯುವಂಥದು, ಮುಷ್ಟಿಗ್ರಾಹ್ಯ ವಾದುದು ; ಹೊಣೆಗಾರಿಕೆಯದು. ಅಂದ ಮಾತ್ರಕ್ಕೆ ಪುರುಷ ಪ್ರಯತ್ನ ದೈವ ವಿರೋಧಿಯಾದುದೇನೂ ಅಲ್ಲ. ದುರ್ಗಸಿಂಹ ಒಂದು ಕಡೆ ಇದಕ್ಕೆ ಬೆಂಬಲ ಸೂಚಿಸಿ ಹೀಗೆ ಬರೆಯುತ್ತಾನೆ:

ಪುರುಷಂ ದೈವಮೆ ಶರಣೆಂ
ದಿರಲಾಗದು ತನಗೆ ತಾನೆ ಮಾಡದು ದೈವಂ
ಪುರುಷಾರ್ಥಂಗೆಯ್ಯುತ್ತಿರೆ
ಪರಪೂರ್ಥಂ ದೈವಮುಂ ಕೃತಾರ್ಥಮುದಕ್ಕುಂ

ಇದು ಒಳ್ಳೆಯ ಸೂಚನೆ, ಮತ್ತು ಯೋಚನೆ ಕೂಡ. ಎಲ್ಲ ದಕ್ಕೂ ದೇವರಿಗೆ ಮೊರೆ ಹೋಗುವುದರಿಂದ ಏನೂ ಸಾಧ್ಯ ವಾಗುವುದಿಲ್ಲ. ಪು ರು ಷಾ ರ್ಥ ವ ನ್ನು ಮಾಡುತ್ತಿದ್ದರೆ ಪರಮಾರ್ಥವೂ ಒದಗಿ ಬರುತ್ತದೆಂಬುದು ಇಲ್ಲಿನ ಸಂದೇಶ.

ಕರ್ತವ್ಯವೇ ದೇವರು, ಕಾಯಕವೇ ಕೈಲಾಸ ಎಂಬ ವಿಚಾರವನ್ನೆ ಇದು ಹೇಳುತ್ತದೆ. ಕೆಲಸ ಮಾಡಿದವನಿಗೆ ಲಾಭವೂ ಕೀರ್ತಿಯೂ ದೊರೆಯುತ್ತವೆ, ಆದರೆ ಮಾಡದವನಿಗೆ ಅವೆರಡೂ ದೊರೆಯವು –ಇದು ಸಾರಾಂಶ. ಹೀಗಾಗಿ, ಪುರುಷನ ಕಾರ್ಯ ತತ್ಪರತೆ ಯನ್ನೂ, ದೈವದ ಆಶೀರ್ವಾದವನ್ನೂ ಈ ಪದ್ಯ ಅರ್ಥೈಸುತ್ತದೆ.

ಕೃತಿಯು ತುಂಬ ಧರ್ಮಾಧರ್ಮದ ವಿಷಯವಾಗಿ ಚರ್ಚೆ ಗಳಿವೆ. ಧರ್ಮವು ಜೀವಿತಕ್ಕೆ ಸಾರ ಸ್ವರೂಪದ್ದೂ, ಜೀವಿಗೆ ದೀಪ ರೂಪದ್ದೂ ಆಗಿದೆ ಎಂಬುದು ಅಭಿಪ್ರಾಯ. ಇದ ಕ್ಕಾಗಿಯೆ, "ಆರೈದು ನೋಡೆ ಧರ್ಮಮೆ ಸಾರಂ ಸಂಸಾರಿಗೆ" ಎಂಬ ಉಲ್ಲೇಖವಿದೆ. ವ್ಯಾಸಮುನಿಯು ಧರ್ಮಸಾರವನ್ನು ವಿವರಿಸುತ್ತ "ತನಗೆಂದುಂ ಕೇಡಿಲ್ಲದುದುನೆ ಬಯಸುವ ಮನುಜ ನಾವ ಜೀವನುಮಂ ತನ್ನನೆ ಬಗೆವ ತೆಱದೆ ಬಗೆವುದು" ಎಂದು ಸೂಚಿಸುತ್ತಾನೆ. ಸಾಮಾನ್ಯವಾಗಿ ಜೈನಧರ್ಮವನ್ನು ಕುರಿತು, ಇಲ್ಲವೆ ಸಂಬಂಧಿಸಿದಂತೆ ಹೇಳಿದ ಮಾತುಗಳೇ ಇವೆ. ಇದಕ್ಕೆ ಈ ಪದ್ಯ ಒಂದು ನಿದರ್ಶನ:

ಸಾವುಂಪುಟ್ಟುಮದಿಲ್ಲದ
ನಾವನವಂ ದೇವನಾತನೆಂದುದೆ ತತ್ತ್ವಂ
ಜೀವದಯೆ ಧರ್ಮಮಿಂದ್ರಿಯ
ಸೇವನೆಯುಂ ಬಿಟ್ಟೊಡದುವೆ ತಪಮುಪಶಮದಿಂ

ಹುಟ್ಟು ಸಾವುಗಳಿಲ್ಲದವನೇ ದೇವರು, ಅವನೆಂದುದೇ ತತ್ತ್ವ; ಜೀವದಯೆಯೇ ಧರ್ಮ, ಇಂದ್ರಿಯ ನಿಗ್ರಹವೇ ತಪಸ್ಸು. ಇಂತಹ ಹಲವಾರು ಚಿತ್ರಗಳು ಕಾವ್ಯದಲ್ಲಿ ಕಾಣಿಸಿಕೊಳ್ಳು ತ್ತವೆ. ಯಶಸ್ಸನ್ನೂ ಧರ್ಮವನ್ನೂ ಪಾಲಿಸಿಕೊಂಡು ಬರ

ಬೇಕೆಂದಿದ್ದರೆ, ತನ್ನನ್ನು ರಕ್ಷಿಸಿ ಕೊಳ್ಳಬೇಕೆಂದಿದ್ದರೆ ಸಮಸ್ತ ಕಾರ್ಯಸ್ಥಿತಿಯನ್ನೂ ಯೋಚಿಸಿ ಪರೀಕ್ಷಿಸಬೇಕೆಂಬುದು ಒಂದು ಸಾಮಾನ್ಯ ವಿಚಾರ. ಇಹದಲ್ಲಿ ಕೆಟ್ಟ ಹೆಸರನ್ನು ಪಡೆಯದಂತೆ, ಪರದಲ್ಲಿ ಪಾಪಕ್ಕೆ ಪಕ್ಕಾಗದಂತೆ, ಆತ್ಮಕ್ಕೆ ಗುಣವಾಗುವ ಹಾಗೆ ಇದನ್ನು ನಿರ್ವಹಿಸಬೇಕೆಂಬುದು ವಿವರಣೆ. ಆದ್ದರಿಂದ ಇಹಪರ ಗಳೆರಡನ್ನೂ ಕಾಯ್ದುಕೊಳ್ಳಬೇಕೆಂದಿದ್ದರೆ ಯಾವುದನ್ನೂ ಉಪೇಕ್ಷಿಸದೆ ದಕ್ಷತೆಯಿಂದ ನೋಡಿಕೊಳ್ಳಬೇಕೆಂದು ಕವಿ ಹೇಳಿದ್ದಾನೆ.

ಸ್ತ್ರೀಯ ವಿಷಯವಾಗಿ ಒಂದೆರಡು ಪ್ರಸ್ತಾಪವನ್ನು ಕಾಣು ತ್ತೇವೆ; ಆದರೆ ಈ ಬಗ್ಗೆ ಹೆಚ್ಚಿನ ವಿವರಗಳು ಇದ್ದಂತೆ ಕಾಣದು. ಇದಕ್ಕೆ ಸ್ತ್ರೀಪಾತ್ರಗಳು ತೀರ ಕಡಿಮೆ ಇರುವುದು ಕಾರಣ. ಬಹುತೇಕ ಪ್ರಾಣಿಗಳೇ ಪಾತ್ರವಹಿಸುವ ಕಥೆಗಳಲ್ಲಿ ಬಹಳ ಮಟ್ಟಿಗೆ ಸ್ತ್ರೀಪಾತ್ರಗಳ ಬೆಳವಣಿಗೆ ಕಾಣಿಸದು. ಉಳಿದ ಕಡೆಯಲ್ಲೂ ಈ ಪರಿಸ್ಥಿತಿ ಉತ್ತಮಗೊಂಡಂತೆ ತೋರುವುದಿಲ್ಲ. ಆದರೆ ಯಜ್ಞದತ್ತೆಯಂತಹ ಪಾತ್ರ ಕೆಲವೊಮ್ಮೆ ಮನಸೆಳೆಯ ಬಹುದು. ಈ ಕೊರತೆಗೆ ಇದು ಮುಖ್ಯವಾಗಿ ರಾಜಕೀಯ ಶಾಸ್ತ್ರವನ್ನು ಹೇಳುವುದಾಗಿದ್ದು, ಆದರಲ್ಲಿ ಹೆಣ್ಣಿನ ಪಾತ್ರವಿಲ್ಲ ದಿರುವುದೇ ಕಾರಣ. ಬರುವ ಒಂದೆರಡು ವಿಷಯಗಳು ಕೂಡ ಹೆಣ್ಣಿನಿಂದಾಗುವ ಕೇಡು ಅಥವಾ ಪರಿಣಾಮವನ್ನು ಚಿತ್ರಿಸು ವುದಕ್ಕೆ ಮೀಸಲಾಗಿವೆ. ಸ್ತ್ರೀಸಮೂಹಕ್ಕೆ ಸೋತರೆ ಜನಾಪ ವಾದವನ್ನೂ ಆಪ್ತಸಮೂಹವನ್ನೂ ಸಜ್ಜನ ಗುರುಜನರ ಮುನಿ ಸನ್ನೂ ಸ್ವಲ್ಪವೂ ಯೋಚಿಸುವುದಿಲ್ಲವೆಂಬುದು ಇವುಗಳಲ್ಲಿ ಒಂದು. ಕಾಮಾತುರನಾದವನ ಚಿತ್ರವಿದು, ಹೆಣ್ಣಿನ ಆಕರ್ಷಣೆ ಯಿಂದ ಗಂಡಿನಲ್ಲಾಗುವ ಪರಿವರ್ತನೆಯನ್ನು ಕುರಿತದ್ದು. ಇನ್ನೊಂದು ಚಿತ್ರ ಹೀಗಿದೆ:

ಪೆಂಡಿರ ಮಾತಂ ಸಲೆ ಕೈ
ಕೊಂಡವರಭಿಮತದೆ ನಡೆವನಪ್ಪೊಡೆ ಗಂಡಂ
ಗಂಡನಣಮಾಗಲಱಿಯಂ
ಭಂಡಂ ಮೇಣ್ ಷಂಡನಕ್ಕುಮಾ ಚಂಡಾಲಂ

ಹೆಂಡತಿಯ ಅಭಿಪ್ರಾಯ ಸರಿಯಾದುದಾದರೂ ತಿರಸ್ಕರಿಸಬೇಕೆನ್ನುವ ಧೋರಣೆ ಇದರದು. ಹೆಣ್ಣಿನ ಅಧೀನತೆಯನ್ನು ಒಪ್ಪಿಕೊಳ್ಳದ ಪುರುಷಪ್ರತಿಷ್ಠೆಯ ಚಿತ್ರವಿದು. ಸ್ತ್ರೀಯ ವಿಷಯಿಕವಾಗಿ ವ್ಯಕ್ತಪಟ್ಟಿರುವ ಅಭಿಪ್ರಾಯಗಳು ಪುರುಷ ದೃಷ್ಟಿಯಿಂದ ನೋಡಿದವೂ ಸಾಮಯಿಕವೂ ಆದವುಗಳೆಂದು ಹೇಳಬೇಕಾಗುತ್ತದೆ.

ಹೀಗೆ ಇನ್ನೂ ಅನೇಕ ವಿಷಯಗಳಿಗೆ ಸಂಬಂಧಿಸಿ ನೀತಿ ವ್ಯಕ್ತವಾಗಿದೆ. ಅವೆಲ್ಲವನ್ನೂ ಇಲ್ಲಿ ಹೇಳುವುದು ಸಾಧ್ಯವಾಗದು. ಹಳೆಯವನಿಗಿಂತ ಹೊಸಬನೆ ಎಷ್ಟೋ ಸಾರಿ ಉತ್ತಮನೆಂದು ಯೋಚಿಸುತ್ತ, ಮನೆಯಲ್ಲಿ ಹುಟ್ಟಿಯೂ ಇಲಿಗಳು ಅಪಾಯಕಾರಿಯಾದುವು, ಹೊರಗಿನಿಂದ ತಂದೂ ಬೆಕ್ಕು ಹಿತವನ್ನೇ ಮಾಡುವುದು ಎಂಬ ನಿದರ್ಶನವನ್ನು ಕೊಡಲಾಗಿದೆ. ಸಂಸರ್ಗದಿಂದಾಗುವ ಗುಣದೋಷಗಳಿಗೆ, ಮುನಿ ಮತ್ತು ಬೇಡನಿಗೆ ಸೇರಿದ ಸೋದರ ಗಿಳಿಗಳು ಕ್ರಮವಾಗಿ ಆಯಾ ಪರಿಸರದ ವರ್ತನೆಗಳನ್ನು ಹೇಗೆ ಕಲಿತುಕೊಳ್ಳುತ್ತವೆ ಎಂಬುದರ ಉದಾಹರಣೆಗಳಿವೆ. ಕಲಹವನ್ನೂ ಕಲಹಪ್ರಿಯರನ್ನೂ ಚಿತ್ರಿಸುವ ಪದ್ಯವೊಂದು ಗಮನ ಸೆಳೆಯುತ್ತದೆ:

ಕಲಹ ಸ್ಥಾನಂಗಳೊಳಂ
ಕಲಹಪ್ರಿಯರಪ್ಪ ನರರ ಸಂವಾದದೊಳಂ

ನೆಲಸಿದ ಸಾಧು ಜನಾಳಿಗೆ
ಫಲತೆಱದಿನಪಾಯಮಕ್ಕುಮೆಂತುಂ ಕಡೆಯೊಳ್

ಕಲಹ ಜಾಗಗಳಲ್ಲಿ ಜಗಳಗಂಟಿಗಳ ಸಂವಾದಗಳಲ್ಲಿ ಭಾಗಿಯಾಗುವ ಸಾಧುಜನರು ಅಂತಿಮವಾಗಿ ಅಪಾಯವನ್ನು ಎದುರಿಸಬೇಕಾಗುತ್ತದೆಂಬುದು ಇಲ್ಲಿನ ಎಚ್ಚರಿಕೆ. ತುಂಬ ಸಂವೇದನಾಶೀಲರಾದವರು ಇಂತಹ ವಿಷಯಗಳಲ್ಲಿ ದೂರ ವಿರುವುದೇ ಲೇಸು ಎಂಬುದು ಇದರ ಹಿತವಾದ. ಹೀಗೆ ಕೆಲವೊಮ್ಮೆ ನೀತಿಗಳಾಗಿ, ಮತ್ತೆ ಕೆಲವೊಮ್ಮೆ ಅನುಭವದ ನೇರ ಪರಿಶೀಲನೆಗಳಾಗಿ ಇಂತಹ ಮಾತುಗಳು ನಿಲ್ಲುತ್ತವೆ.

'ಪಂಚತಂತ್ರ'ದಲ್ಲಿ ನೀತಿ ಹೇಗೆ ನಿರೂಪಿತವಾಗಿದೆ ಎಂಬುದಕ್ಕೆ ಮೇಲಿನವು ಕೆಲವು ಉದಾಹರಣೆಗಳಷ್ಟೆ. ಆಯಾ ಪಾತ್ರಗಳೇ ಇವನ್ನು ಆಡಿ ತೋರಿಸುತ್ತವೆ. ಇವು ಕಥೆಗಳ ಒಡಲಿನಿಂದಲೇ ರೂಪುಗೊಳ್ಳುವಂಥವುಗಳಲ್ಲ, ಸಂದರ್ಭಕ್ಕೆ ಅನುಗುಣವಾಗಿ ಹೊರಗಿನಿಂದ ಉದ್ಧೃತವಾದವುಗಳು. ಕೃತಿಯ ಒಟ್ಟು ರಚನೆಯಿಂದ ಇವನ್ನು ಬೇರ್ಪಡಿಸುವುದು ಕಷ್ಟ, ಹಾಸು ಹೊಕ್ಕಾದುದೆಂದೇ ಅರ್ಥ. ರಾಜನೀತಿಶಾಸ್ತ್ರ ನಿಪುಣರು ಯಾರನ್ನೂ ನಂಬಲಾಗದು, ಹಾಗೇನಾದರೂ ನಂಬಿ ಸಿಕ್ಕಿಕೊಂಡರೆ ದೃಢ ಮನಸ್ಸಿನಿಂದ ಚತುರತೆಯಿಂದ ತಪ್ಪಿಸಿಕೊಳ್ಳಬೇಕು; ಕೃತಿಯಲ್ಲಿ ಅಭಿವ್ಯಕ್ತವಾಗಿರುವ ನೀತಿಯ ಒಟ್ಟು ಧೋರಣೆಯೇ ಇದು. ಹಾಗಾಗಿ 'ಪಂಚತಂತ್ರ' ಕಾವ್ಯದಂತೆ ಶಾಸ್ತ್ರವೂ ಆಗಿ ಪರಿಣಮಿಸಿದೆ. ರಾಜಕುಮಾರರಿಗೆ ಕಥೆಗಳ ನೆಪದಲ್ಲಿ ಈ ನೀತಿ ಶಾಸ್ತ್ರದ ಪಾಠ ಹೇಳುವುದೇ ಕೃತಿಯ ಮುಖ್ಯ ಉದ್ದೇಶ.

೬. ವಸ್ತುವಿಮರ್ಶೆ

ರಾಜಕೀಯವೂ ಅರ್ಥಶಾಸ್ತ್ರೀಯವೂ ಆದ ಪಂಚತಂತ್ರಗಳನ್ನು ಕಥೋಪಕಥೆಗಳ ಮೂಲಕ ವಿವರಿಸಿ ತಿಳಿಯಹೇಳುವುದೇ ಕೃತಿಯ ಉದ್ದೇಶವೆಂಬುದನ್ನು ನೋಡಿದ್ದೇವೆ. ಇಲ್ಲಿ 'ತಂತ್ರ' ಎಂಬುದು ಕೇವಲ 'ಪರಿಚ್ಛೇದ'ಎಂಬುದನ್ನಷ್ಟೆ ತಿಳಿಸುತ್ತದೆಯೊ ಅಥವಾ ತಂತ್ರವಿಧಾನ, ಚಾರಿತ್ರ್ಯ, ಶಿಕ್ಷಣ ಮುಂತಾದ ಅರ್ಥಗಳನ್ನೂ ಹೇಳುತ್ತದೆಯೊ ನಿರ್ಧರಿಸುವುದು ಕಷ್ಟವಾಗಿದೆ. 'ಪಂಚತಂತ್ರ' ಎಂಬುದು ಮೂಲತಃ ಐದು ಮುಖ್ಯ ಉಪಾಯಗಳನ್ನು ಪ್ರತಿಪಾದಿಸಲು ಬಂದಿರಬೇಕೆಂದು ಇಟ್ಟುಕೊಳ್ಳಬಹುದು. "ಈ ಐದು ತಂತ್ರಗಳೂ ಪಿಂಗಳಕನೆಂಬ ಸಿಂಹಕ್ಕೂ ಸಂಜೀವಕನೆಂಬ ಎತ್ತಿಗೂ ನಡೆದ ವ್ಯವಹಾರದಲ್ಲಿ ಆಚರಣೆಗೆ ಬಂದಿವೆ" ಎಂಬ ಹೇಳಿಕೆಯೊಂದಿದೆ. ಆದರೆ ಇದು ತಪ್ಪು ಗ್ರಹಿಕೆಯಿಂದ ಉಂಟಾದುದೆಂದು ತೋರುತ್ತದೆ. ವಾಸ್ತವವಾಗಿ ಪಿಂಗಳಕ ಮತ್ತು ಸಂಜೀವಕ ಪಾತ್ರಗಳು ಪ್ರಥಮತಂತ್ರವನ್ನು ನಡೆಸುವುದಕ್ಕೆ ಮಾತ್ರ ಕಾರಣವಾಗುತ್ತವೆಯೇ ಹೊರತು, ಇಡೀ ಐದು ತಂತ್ರಗಳನ್ನಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ಅನೇಕ ಕಾರಣಗಳಿಂದ ಮೊದಲನೆಯ ಭೇದ ಪ್ರಕರಣ ಅತ್ಯಂತ ಮುಖ್ಯವಾದುದಾಗಿದೆ. ಇದರ ಉದ್ದೇಶವನ್ನು ವಿವರಿಸುತ್ತ ದುರ್ಗಸಿಂಹ, "ಕಾದಿ ಗೆಲ್ಲಲು ಅಸಾಧ್ಯರಾದ ಭೀಷ್ಮ ದ್ರೋಣರನ್ನು ಧರ್ಮರಾಯ ಭೇದಿಸಿ ಗೆದ್ದ ರೀತಿಯದು" ಎಂದಿದ್ದಾನೆ. ಅಷ್ಟಲ್ಲದೆ, "ಸಾಮಾದಿ ನಯಂಗಳೊಳ್ ಸುನಯ ಸಾಧನಮಪ್ಪುದು ಭೇದಂ" ಎಂದು ಸೂಚಿಸಿದ್ದಾನೆ; ಅಂದರೆ, ಉಪಾಯಗಳಲ್ಲಿ ಭೇದೋಪಾಯವೇ ಅತ್ಯುತ್ತಮವೆನ್ನುವುದು

ಅವನ ಅಭಿಪ್ರಾಯ. ಇಂಥ ತಂತ್ರಾರ್ಥದ ಕಲಾತ್ಮಕ ನಿರೂಪಣೆ ಕೃತಿಯಲ್ಲಿದೆ. ಕಥೋಪಕಥೆಗಳಿಂದ, ತಾತ್ತ್ವಿಕ ಚಿಂತನೆಗಳಿಂದ ನಿಬಿಡವಾಗಿದೆ ಈ ಪ್ರಕರಣ. ಸಂಜೀವಕ, ಪಿಂಗಳಕ ಮತ್ತು ದಮನಕಗಳೇ ಇಲ್ಲಿನ ಮುಖ್ಯ ಪಾತ್ರಗಳು. ಕರಟಕನೆಂಬ ನರಿಯ ಪಾತ್ರ ಏನಿದ್ದರೂ ಹಿನ್ನೆಲೆಯಲ್ಲಿಯೇ ಉಳಿದು, ದಮನಕದ ಕುಟಿಲೋಪಾಯಗಳನ್ನು ವಿಮರ್ಶಿಸುವ ಪ್ರತಿನಿಧಿಯಾಗುವಂತೆ ತೋರುತ್ತದೆ. ದಮನಕನ ಸಂಧಾನ ಮತ್ತು ಭೇದೋಪಾಯಗಳು ರಮ್ಯವಾಗಿದ್ದು, ಕಥೆಯನ್ನು ಕ್ರಿಯಾಶೀಲವಾಗುವಂತೆ ಮಾಡಿವೆ. ಮಾನವ ಸ್ವಭಾವಗಳೂ ಪ್ರವೃತ್ತಿಗಳೂ ಪ್ರಾಣಿಗಳ ಮೂಲಕ ಹೆಪ್ಪುಗಟ್ಟುತ್ತನೆ. ಸಂಜೀವಕ ಪಿಂಗಳಕಗಳು ಮಾನವನ ಮುಗ್ಧ ಸ್ವಭಾವಗಳಿಗೆ ಸಂಕೇತವಾದರೆ, ದಮನಕ ಕ್ರೌರ್ಯಕ್ಕೂ ದಮನ ಪ್ರವೃತ್ತಿಗೂ ಸಂಕೇತವಾಗುವುದು. ಕಥನ ಕ್ರಿಯೆ ಸಾಗಿದಂತೆಲ್ಲ ಗಂಭೀರವೂ ದಟ್ಟವೂ ಆಗುವುದಲ್ಲದೆ, ಮುಕ್ತಾಯದ ದುರಂತವು ಜೀವನ ಮೌಲ್ಯಗಳನ್ನು ಶೋಧನೆಗೆ ಒಳಪಡಿಸುತ್ತದೆ. ಇಲ್ಲಿನ ಒಳತೋಟಿ ಭಾವ ಸಂಘರ್ಷಗಳು ಜೀವನದ ಜಟಿಲತೆಯನ್ನು ತೋರಿಸಿದರೆ, ತಂತ್ರೋಪಾಯಗಳು ಒಡೆದು ಆಳುವ ನೀತಿಯನ್ನು ಘೋಷಿಸುತ್ತವೆ.

ಎರಡನೆಯದಾದ ಪರೀಕ್ಷಾ ಪ್ರಕರಣದ ರೀತಿಯೇ ಬೇರೆ. ಶ್ರೀಗೂ ಕೀರ್ತಿಶ್ರೀಗೂ ನೆಲೆಯಾಗುವೆನೆಂದು ಹೇಳುವ ರಾಜನು, ರಭಸೋದ್ಯೋಗವನ್ನು ಬಿಟ್ಟು ಸಮಸ್ತ ಕಾರ್ಯಗಳಲ್ಲಿಯೂ ಪರಿಕ್ಷಕನಾಗಬೇಕೆಂಬುದೇ ಇದರ ಆಶಯವೆಂದು ಕವಿ ವಿವರಿಸಿದ್ದಾನೆ. ಬ್ರಾಹ್ಮಣ ಮುಂಗುಸಿಯನ್ನು ಅರಿಯದೆ ಕೊಲ್ಲುವ ಘಟನೆಯ ಮೂಲಕ ಈ ತತ್ವಕ್ಕೆ ಪ್ರತಿ

ಪಾದನೆ ನೀಡಿದ್ದಾನೆ. ಈ ಕಥೆಯ ಚೌಕಟ್ಟಿನಲ್ಲಿ ನಾಲ್ಕು ಉಪಕಥೆಗಳು ಮಾತ್ರ ಬರುತ್ತವೆ. ಹಿಂದಿನ ಭೇದ ಪ್ರಕರಣ ದಲ್ಲಿ ಕಂಡು ಬಂದ ವಿಚಾರ ವೈಪುಲ್ಯ, ತತ್ತ್ವ ಸೂಕ್ಷ್ಮತೆ ಮತ್ತು ರಾಜಕೀಯ ಜಟಿಲತೆಗಳು ಇಲ್ಲಿ ಕಂಡುಬರುವುದಿಲ್ಲ. ಇಲ್ಲಿ ತತ್ತ್ವದ ಎಳೆ ಒಂದೇ ಇರುವುದರಿಂದ ಇಲ್ಲಿನ ಕಥೆಗಳೆಲ್ಲ ಒಂದೇ ಮಾದರಿಯವು ಎನಿಸುತ್ತದೆ. ಕಥೆಗಳೆಲ್ಲ ನೇರವಾಗಿ ನಡೆಯುವುದರಿಂದ ವೈವಿಧ್ಯಕ್ಕಿಂತ ಸರಳತೆ ಆಳುತ್ತದೆ. ಹಿಂದಿನ ಪ್ರಕರಣದಲ್ಲಿ ಕಾಣಿಸಿದ ರಾಜಕೀಯ ಹೊಯ್ದಾಟ ತುಮುಲಗಳಿಗೆ ಬದಲಾಗಿ, ಇಲ್ಲಿ ದೈನಂದಿನ ಜೀವನದ ಅನುಭವವೇ ಪ್ರಧಾನವಾಗುವುದು. ಈ ದೃಷ್ಟಿಯಿಂದ ದೇವಶರ್ಮನ ಆತುರ ವಿಷಾದಗಳೂ, ಯಜ್ಞದತ್ತೆಯ ಲೋಕಾನುಭವ ಬೋಧನಾಂಶಗಳೂ ಗಮನಿಸುವಂಥವಾಗಿವೆ.

ಯಾವುದೇ ಕಾರಣದಿಂದ ಒಮ್ಮೆ ದ್ವೇಷ ಆರಂಭವಾಯಿತೆಂದರೆ ಅದು ಹೇಗೆ ಕೊನೆಗೊಳ್ಳುತ್ತದೆಂಬುದನ್ನು ಹೇಳಲು ಬರುವುದಿಲ್ಲ ಎಂಬುದರ ದಟ್ಟ ಚಿತ್ರಣ ವಿಶ್ವಾಸ ಪ್ರಕರಣದಲ್ಲಿದೆ. ಲೋಕಾನುಭವದ ತೀವ್ರಾಭಿವ್ಯಕ್ತಿಯೇ ಇಲ್ಲಿದೆ. ಈ ಪ್ರಕರಣದ ಆರಂಭದ ಪದ್ಯದಲ್ಲಿಯೇ ವಿಶ್ವಾಸತಂತ್ರದ ಸ್ವರೂಪವನ್ನು ಕವಿ ಹೇಳಿದ್ದಾನೆ. ಲಕ್ಷ್ಮಿಗೂ ಭೂಲಕ್ಷ್ಮಿಗೂ ಒಡೆಯನಾಗಬೇಕೆಂಬ ಮನಸ್ಸಿದ್ದರೆ, ರಾಜನಾದವನು ಆಹಿತಜನರನ್ನು ಅನುನಯದಿಂದ ವಿಶ್ವಾಸ ಮೂಡಿಸಿ ಗೆಲ್ಲಬೇಕೆಂದು ವಿವರಿಸಿದ್ದಾನೆ. ಇಲ್ಲಿನ ಕಥನ ಕ್ರಿಯೆಯಲ್ಲಿ "ಇರುಳು ಕಾಗೆಗೆ ಕಣ್ಣು ಕಾಣುವುದಿಲ್ಲ, ಹಗಲು ಗೂಗೆಗೆ ಕಣ್ಣು ಕಾಣುವುದಿಲ್ಲ" ಎಂಬುದರ ಮೇಲೆ ನಿಂತಿರುವಂತಿದೆ; ಏಕೆಂದರೆ, ಇವೆರಡು ಸಮೂಹಗಳೂ

ಪರಸ್ಪರ ಪರಾಭವಕ್ಕೆ ಒಳಗಾಗುವುದು ಈ ಕಾಲದಲ್ಲಿಯೇ. ಕಥನಕ್ರಿಯೆ ನಾಲ್ಕು ಮುಖ್ಯ ಘಟ್ಟಗಳಲ್ಲಿ ಸಾಗುವುದು : ಕಾರ್ಯ ಸಾಧನೆಗೆ ಚಿರಂಜೀವಿಯನ್ನು ನೇಮಿಸುವುದು; ಶರಣಾಗತ ಚಿರಂಜೀವಿಗೆ ರಕ್ಷಣೆ ಕೊಡುವುದು; ಉಪಾಯದಿಂದ ಶತ್ರು ಸಂಹಾರವಾಗುವುದು; ಸನ್ಮಾನಿತ ಚಿರಂಜೀವಿ ತನ್ನ ಸಮೂಹಕ್ಕೆ ತಾನು ನಡೆಸಿದ ಸಾಹಸವನ್ನು ಹೇಳುವುದು. ಕಥೆಯ ಕ್ರಿಯಾ ಶೀಲತೆಗೆ ಇವು ಕಾರಣವಾಗಿರುವಂತೆಯೇ, ಈ ಸಂದರ್ಭಗಳಲ್ಲಿ ಬರುವ ತರ್ಕಶುದ್ಧ ವ್ಯಾಖ್ಯಾನ ವಿವರಣೆಗಳು ಕ್ರಿಯೆಯನ್ನು ತಡೆಯುತ್ತವೆ. ಈ ಮಧ್ಯದಲ್ಲಿ ಬರುವ ಕಾಗೆಯ ಅಪಸ್ವರದ ಕಥೆ, ಕ್ರಿಯೆಗೆ ಹಿನ್ನೋಟ ತಂತ್ರವನ್ನು ಒದಗಿಸುವುದರ ಮೂಲಕ ಕಥೆಗೆ ಸಮಗ್ರ ಶಿಲ್ಪವನ್ನು ತಂದುಕೊಡುತ್ತದೆ. ತಂತ್ರದ ಬಹುಭಾಗದಲ್ಲಿ ಮೂಲಕಥೆಯೇ ಇದ್ದು, ಉಪಕಥೆ ಗಳು ಎಲ್ಲೋ ಕೆಲವು ಮಾತ್ರ ಬರುತ್ತವೆ.

ತಂತ್ರಗಳಲ್ಲಿ 'ವಂಚನೆ'ಯೂ ಒಂದಾದರೂ, ಇದನ್ನು ನಿರೂ ಪಿಸುವಲ್ಲಿ ಕವಿ ಲಂಬಿಸದಿರುವುದನ್ನು ನೋಡಿದರೆ, ರಾಜನೀತಿ ಶಾಸ್ತ್ರದಲ್ಲಿ ಇದಕ್ಕೆ ಮಹತ್ವದ ಪಾತ್ರವೇನೂ ಇಲ್ಲವೆಂಬಂತೆ ಭಾಸವಾಗಬಹುದು. ಆದರೆ ವಿಶ್ವಾಸ ತಂತ್ರವನ್ನು ಬಿಟ್ಟರೆ ಉಳಿ ದೆಲ್ಲ ತಂತ್ರಗಳಲ್ಲಿಯೂ ಒಂದಲ್ಲ ಒಂದು ವಿಧದಲ್ಲಿ ವಂಚನೆ ಕೆಲಸ ಮಾಡಿದೆ. ಇಷ್ಟಾದರೂ, ವಂಚನಾತಂತ್ರವನ್ನು ಪ್ರತ್ಯೇಕ ವಾಗಿ ಹೇಳುವಾಗ ಕವಿ ಬೇಗ ಮುಗಿಸಿರುವುದು ಆಶ್ಚರ್ಯವಾಗು ತ್ತದೆ. ಇದಕ್ಕೆ ಆಕರವಾಗಿರುವ ಕೃತಿಯೂ ಕಾರಣವಾಗಿರ ಬಹುದು, ಎಂಬುದು ಸಂದೇಹ. ಸಂಪತ್ತನ್ನು ನಿರಂತರವಾಗಿ ಉಳಿಸಿಕೊಳ್ಳಬೇಕೆಂಬ ಇಚ್ಛೆಯಿದ್ದರೆ, ರಾಜನಾದವನು ಅನ್ಯ ರಿಂದಾಗುವ ವಿವಿಧ ರೀತಿಯ ಅಪಾಯಗಳಿಗೆ ಒಳಗಾಗದೆ

'ಮಾಯಾತ್ಮಕನಂತೆ' ನಿಪುಣತೆಯಿಂದ ವಂಚಿಸಬೇಕೆಂಬು ಕವಿ ಈ ತಂತ್ರಕ್ಕೆ ವಿವರಣೆ ನೀಡಿದ್ದಾನೆ. ಅಷ್ಟೇ ಅಲ್ಲ, ಇದು 'ನೃಪಹಿತ' ಎಂದು ಕೂಡ ಹೇಳುವನು. ಮೂಲಕಥೆಯು ಜೊತೆಗೆ ಒಂದೇ ಒಂದು ಉಪಕಥೆ ಮಾತ್ರ ಬರುತ್ತದೆ. ವ್ಯಾಖ್ಯಾನಗಳಾವುವೂ ಇಲ್ಲದಿರುವುದರಿಂದ ಕಥೆಯೇ ಪ್ರಧಾನ ವಾಗಿ ನಿಲ್ಲುವುದು. ಇಡೀ 'ಪಂಚತಂತ್ರ' ಕೃತಿಯಲ್ಲಿಯೇ ಇದು ಸರಳ ಪ್ರಕರಣ.

ಪ್ರಸ್ತುತ ಕೃತಿಯಲ್ಲಿಯೇ ಮಿತ್ರಕಾರ್ಯ ಪ್ರಕರಣ ಬೇರೆ ಆಯಾಮದ್ದಾಗಿದೆ. "ಸಮಸ್ತಾವನಿಯನ್ನು ಕಾಪಾಡುವವ ನಾದ ರಾಜನು ನಾನಾ ವಿಧವಾದ ನೀತಿ ಕ್ರಮದಿಂದ ಹಲವರನ್ನು ಮಿತ್ರರಾಗಿ ಮಾಡಬೇಕೆನ್ನುವುದು" ಕವಿಯ ವಿವರಣೆ. ಇದು ರಾಜನ ಮಿತ್ರಕಾರ್ಯ ತಂತ್ರಕ್ಕೆ ಸಂಬಂಧಿಸಿದುದು. ಈ ಪ್ರಕರಣವೂ ಉಳಿದವುಗಳಂತೆಯೇ ಇರುವುದಾದರೂ, ಪ್ರಾಣಿಪಕ್ಷಿಗಳ ನಡುವಿನ ಸ್ನೇಹ ಸಹೃದಯರ ಮನಸ್ಸೆಲ್ಲ ವನ್ನೂ ತುಂಬಿಕೊಳ್ಳುವುದು. ಈವರೆಗಿನ ಪ್ರಕರಣಗಳಲ್ಲಿ ಕಂಡು ಬಂದ ಅಸೂಯೆ, ಈರ್ಷ್ಯೆ, ಡಾಂಭಿಕತೆ, ವಂಚನೆ ಗಳು ಬದುಕಿನ ಒಂದು ಮುಖವನ್ನು ಹೇಳಿದರೆ, ಇಲ್ಲಿನ ಸ್ನೇಹ, ಸೌಹಾರ್ದ, ಸಾಮರಸ್ಯಗಳು ಬದುಕಿನ ಇನ್ನೊಂದು ಮುಖ ವನ್ನು ಚಿತ್ರಿಸುತ್ತವೆ. ಈ ಮೌಲ್ಯಗಳು ಹಿಂದಿನ ಪ್ರಕರಣ ಗಳಲ್ಲಿ ಕಂಡು ಬಂದಿದ್ದರೂ, ಇದರಲ್ಲಿ ಅವೇ ಪ್ರಮುಖವಾಗಿವೆ.

'ಪಂಚತಂತ್ರ'ದಲ್ಲಿ ಕಥಾಮುಖವೂ ಪ್ರಧಾನ ಕಥೆಗಳೂ ಸೇರಿ ಕೊಂಡಂತೆ ಒಟ್ಟು ೬೫ ಕಥೆಗಳಿವೆ ಎಂದು ಹೇಳಿದ ಎ. ವೆಂಕಟ ಸುಬ್ಬಯ್ಯನವರು ಅವುಗಳನ್ನು ಮೂರು ವರ್ಗಗಳಲ್ಲಿ ವಿಭಾಗಿಸಿ

ಕೊಳ್ಳುತ್ತಾರೆ: ದುರ್ಗಸಿಂಹನಲ್ಲಿ ಮಾತ್ರ ದೊರೆಯುವಂಥವು, ದುರ್ಗಸಿಂಹನ 'ಪಂಚತಂತ್ರ' ಮತ್ತು ವಿಷ್ಣುಶರ್ಮನ ಹೆಸರನ್ನು ಹೇಳುವ 'ಪಂಚತಂತ್ರ'ಗಳಲ್ಲಿ ದೊರೆಯುವ ಕಥೆಗಳು, ದುರ್ಗಸಿಂಹನ 'ಪಂಚತಂತ್ರ' ಮತ್ತು 'ತಂತ್ರಿ'ಯಲ್ಲಿ ದೊರೆಯುವ ಕಥೆಗಳು. ಒಟ್ಟು ೬೫ ಕಥೆಗಳಲ್ಲಿ ೧೧ ಮೊದಲ ವರ್ಗಕ್ಕೂ, ೪೬ ಎರಡನೆಯ ವರ್ಗಕ್ಕೂ, ಉಳಿದ ೮ ಮೂರನೆಯ ವರ್ಗಕ್ಕೂ ಸೇರುತ್ತವೆಂದು ಅವರ ಅಭಿಪ್ರಾಯ

ಒಂದು ಕಥೆಯ ಚೌಕಟ್ಟಿನಲ್ಲಿ ಅನೇಕ ಭಿನ್ನ ಕಥೆಗಳನ್ನು ತಂದು ಸೇರಿಸುವುದು 'ಪಂಚತಂತ್ರ'ದ ಕಥೆಗಳ ತಂತ್ರ. ಒಂದೊಂದು ಪ್ರಧಾನ ಕಥೆಯಲ್ಲೂ ಸಂದರ್ಭಾನುಸಾರವಾಗಿ ಹಲವಾರು ಉಪಕಥೆಗಳು ಬಿಚ್ಚಿಕೊಳ್ಳುತ್ತವೆ. ಪ್ರಧಾನ ಕಥೆಯ ಪಾತ್ರಗಳು ತಂತಮ್ಮ ನೀತಿಯನ್ನು ಕ್ರಮಗೊಳಿಸುವುದಕ್ಕಾಗಿ ಅಥವಾ ತಮ್ಮದೇ ಆದ ದೃಷ್ಟಿಕೋನಗಳನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ವಿವಿಧ ಉಪಕಥೆಗಳ ಅವಲಂಬನೆಯನ್ನು ಪಡೆದುಕೊಳ್ಳುತ್ತವೆ. ಉಪಕಥೆಯ ಪರಿಮಿತಿಯಲ್ಲಿಯೇ ಒಳ ಕಥೆಯೊಂದು ಅದೇ ರೀತಿ ಪ್ರವೇಶವಾಗಿ, ಮತ್ತೆ ಹಿಂದಿನ ಕಥೆ ಪುನರಾವರ್ತನೆಯಾಗುವುದೂ ಇವುಗಳ ತಂತ್ರದ ಒಂದು ಭಾಗವೇ. ಸಾಮಾನ್ಯವಾಗಿ ಕಥೆಗಳ ಕಡೆಯಲ್ಲಿ ಮತ್ತೊಂದು ಕಥೆ ಹೇಳುವ ಪ್ರಾರ್ಥನೆಯಿದ್ದು, ಕೇಳಿದವರ ಮತ್ತು ಹೇಳಿದವರ ಹೆಸರುಗಳ ಉಲ್ಲೇಖದೊಡನೆ ಕಥೆ ಹೇಳುವುದು ಮುಂದುವರಿಯುತ್ತದೆ.

'ಪಂಚತಂತ್ರ' ಮೂಲತಃ ರಾಜನ ಮಕ್ಕಳ ಶಿಕ್ಷಣಕ್ಕಾಗಿ ಪ್ರಯುಕ್ತವಾದ ಒಂದು ಮಾರ್ಗದರ್ಶಿಕೆ. ಇದು ರಾಜಕುಮಾರರ

ರಾಜಕೀಯ ಮತ್ತು ದೈನಂದಿನ ಜೀವನದ ಶಿಕ್ಷಣಕ್ಕಾಗಿ ಮಾತ್ರ ಬಂದಿರದೆ, ಒಂದು ಕಥಾ ಗ್ರಂಥವಾಗಿಯೂ ಇದೆ. ಇದರಲ್ಲಿ ರಾಜಕೀಯ ಚರ್ಚೆಗೆ ಸಾಕಷ್ಟು ನಿದರ್ಶನಗಳಿದ್ದರೂ, ಕಥಾ ಸ್ವಾರಸ್ಯವೂ ಜೊತೆಗೂಡಿದೆ. ಕಥೆಗಳ ಮುಸುಕನ್ನು ಸರಿಸಿ ನೋಡಿದರೆ ಇಲ್ಲಿರುವುದು ನೀತಿಶಾಸ್ತ್ರವೇ ; ಆದರೆ ಅದನ್ನು ನೇರವಾಗಿ ಹೇಳಿದ್ದರೆ ಬೇಸರಕ್ಕೆ ಎಡೆಯಾಗುವುದರಿಂದ, ರಮ್ಯ ಮಾರ್ಗವೊಂದನ್ನು ಇಲ್ಲಿ ಅನುಸರಿಸಲಾಗಿದೆ. ಇಲ್ಲಿಯ ಪ್ರಾಣಿ ಪಕ್ಷಿಗಳ ವರ್ತನೆ ಅವಕ್ಕೆ ತಕ್ಕುದೇ ಎಂಬುದು ಮುಖ್ಯವಲ್ಲ, ಅವನ್ನು ಮಾನವ ಪ್ರತಿರೂಪಗಳೆಂದೇ ತಿಳಿಯಬೇಕು. ಇಲ್ಲಿಯೇ 'ಪಂಚತಂತ್ರ'ದ ಸ್ವಾರಸ್ಯ ಅಡಗಿರುವುದು. ಪ್ರಾಣಿಗಳ ಚಟು ವಟಿಕೆಗಳಿಗೆ ಸಂಬಂಧಿಸಿದ ಈ ಕಥೆಗಳು ಮಾನವಜೀವನದ ಕೆಟ್ಟ ಮತ್ತು ಒಳ್ಳೆಯ ಮುಖಗಳನ್ನು ಪರಿಚಯಿಸುತ್ತವೆ. ಜೀವನದ ಕೆಟ್ಟ ಮುಖಗಳಾದ ಕುತಂತ್ರ, ವಂಚನೆ, ದುರ್ಲಾಭ, ದುರಾಶೆ ಮುಂತಾದವುಗಳನ್ನೂ, ಒಳ್ಳೆಯ ಮುಖಗಳಾದ ದೊಡ್ಡತನ, ದೀನತೆ, ನಂಬಿಕೆ, ಕರ್ತವ್ಯ ಶ್ರದ್ಧೆ, ಪ್ರೀತಿ ಮುಂತಾದುವು ಗಳನ್ನೂ ಹೇಳುವಂತೆ ಕಾಣುತ್ತದೆ. ಇವು ನೀತಿಕಥೆಗಳಾಗಿ ರಾಜಕೀಯ ಕ್ಷೇತ್ರದ ಮತ್ತು ದೈನಂದಿನ ಜೀವನದ ಮಾನವ ಚಟುವಟಿಕೆಗಳನ್ನು ವಿವರಿಸುತ್ತವೆ. ಈ ಕೃತಿ ಆಡಳಿತವರ್ಗದ ಜನರಿಗೆ, ಅವರು ಆಡಳಿತದಲ್ಲಿ ಯುಕ್ತರೀತಿಯಲ್ಲಿ ವರ್ತಿಸುವಂತೆ ಮಾಡಲು ಹೇಳಲಾಗಿದೆ ಎಂದು ಕಾಣುತ್ತದೆ.

ಈ ಕೃತಿ ವಿಲಕ್ಷಣ ರೀತಿಯ ಹಾಸ್ಯ ಮತ್ತು ವಿಡಂಬನೆಗಳಿಂದ ತುಂಬಿಕೊಂಡಿದ್ದು, ಮಾನವ ಕ್ರಿಯೆಗಳೆಲ್ಲವನ್ನೂ ತಪ್ಪದೆ ಅನು ಸರಿಸುವ ಪ್ರಾಣಿ ಪ್ರಪಂಚದಿಂದ ಕೂಡಿದೆ. ಪ್ರಾಣಿಗಳು ವೇದ

ಗಳ ಅಧ್ಯಯನ ಮತ್ತು ಧಾರ್ಮಿಕ ಆಚರಣೆಗಳ ಅನುಷ್ಠಾನ ಗಳಲ್ಲಿ ನಿರತವಾಗುತ್ತವೆ; ದೇವತೆಗಳು, ಋಷಿಗಳು ಮತ್ತು ವೀರರನ್ನು ಕುರಿತು ಉಪನ್ಯಾಸ ಮಾಡಲು ತೊಡಗುತ್ತವೆ; ನೀತಿಶಾಸ್ತ್ರದ ಅತ್ಯಂತ ಸೂಕ್ಷ್ಮನಿಯಮಗಳಿಗೆ ಸಂಬಂಧಿಸಿದಂತೆ ತಮ್ಮ ವಿಚಾರಗಳನ್ನು ಮಂಡಿಸಲು ಪ್ರಯತ್ನಿಸುತ್ತವೆ; ಆದರೆ ಸಂದರ್ಭ ಬಂದಾಗ ಅವುಗಳ ಪ್ರಾಣಿ ಸ್ವಭಾವ ತಲೆಯೆತ್ತುತ್ತದೆ. ವ್ಯಂಗ್ಯ ವಿಡಂಬನೆಗಳ ಜೊತೆಯಲ್ಲಿ ಮಾನವನ ವಿವಿಧ ದುರ್ಗುಣ ಗಳೂ ವ್ಯಕ್ತಗೊಂಡಿವೆ. ಒಟ್ಟಾರೆ ನೋಡಿದರೆ ಸತ್ವಪೂರ್ಣ ಮತ್ತು ಆರೋಗ್ಯಕರ ದೃಷ್ಟಿಯ ಜೀವನ ದೊರೆಯುತ್ತದೆಂದು ಹೇಳಬಹುದಾಗಿದೆ.

'ಪಂಚತಂತ್ರ'ವನ್ನು 'ನೀತಿಶಾಸ್ತ್ರ' ಅಥವಾ 'ನೀತಿಕಾವ್ಯ'ದ ಗುಂಪಿಗೆ ಒಟ್ಟಾರೆ ಸೇರಿಸಬಹುದು; ಇದೊಂದು ಕಾವ್ಯ ಮಾಧ್ಯಮದಲ್ಲಿ ಹೇಳಿದ ಶಾಸ್ತ್ರೀಯ ಕೃತಿ. ಒಂದರಲ್ಲಿ ಒಂದು ಕಥೆಯನ್ನು ಸೇರಿಸಿ ಹೇಳುವುದು, ಪದ್ಯಗಳ ನಡುವೆ ಗದ್ಯವನ್ನು ಸೇರಿಸುವುದು, ಶೀರ್ಷಿಕೆ ಅಥವಾ ಸೂತ್ರಪದ್ಯಗಳು ಆಯಾ ಕಥೆ ಯಲ್ಲಿ ವ್ಯಕ್ತವಾಗುವ ನೀತಿ ಮತ್ತು ಪಾತ್ರಗಳನ್ನು ಸೂಚಿಸು ವುದು–ಇವೆಲ್ಲವೂ 'ಪಂಚತಂತ್ರ'ದ ಕಥನ ಕಲೆಯನ್ನು ತಿಳಿಸುತ್ತವೆ.

ದುರ್ಗಸಿಂಹ ಒಳ್ಳೆಯ ಕಥೆಗಾರ ಎಂಬುದಕ್ಕೆ ಕೃತಿಯು ತುಂಬ ನಿದರ್ಶನಗಳು ದೊರೆಯುತ್ತವೆ. ಇದಕ್ಕೆ ಕಾಗೆ ಕೃಷ್ಣಸರ್ಪ ವನ್ನು ಕೊಂದ ಕಥೆಯ ತಂತ್ರವನ್ನೇ ಉದಾಹರಿಸಬಹುದು. ಬಕ ಮತ್ತು ಏಡಿಯ ಕಥೆಯಲ್ಲಿ ಬಕನ ಧ್ಯಾನ ಮತ್ತು ಅವರ ವಿಚಿತ್ರ ಸಂನ್ಯಾಸ ಚೆನ್ನಾಗಿದೆ. ಇದು ಸಾಮಾಜಿಕ ವಿಡಂಬ ನೆಯೂ ಆಗುತ್ತದೆ. ಬಕನನ್ನು ಬಕಾಸುರನಿಗೂ ಏಡಿಯನ್ನು

ಭೀಮನಿಗೂ ಹೋಲಿಸಿರುವುದು ಅರ್ಥಪೂರ್ಣವಾಗಿದೆ. ಹೀಗೆ ಪುರಾಣ ಪ್ರತಿಮೆಗಳನ್ನು ಅಲ್ಲಲ್ಲಿ ಬಳಸಿಕೊಂಡಿರುವುದು ಕಥೆಗಳ ಸ್ವಾರಸ್ಯವನ್ನು ಮತ್ತಷ್ಟು ಹೆಚ್ಚಿಸಿದಂತಾಗಿದೆ. ಮಹಾಭಾರತ ರಾಮಾಯಣಗಳ ಹೋಲಿಕೆಗಳು ಕವಿಯ ಸ್ವಂತಿಕೆಯನ್ನು ತೋರಿಸುತ್ತವೆ. ಮೊಲ ಸಿಂಹವನ್ನು ಕೊಂದ ಕಥೆಯಲ್ಲಿ ಬರುವ ಸರದಿಯ ಪ್ರಕಾರ ಆಹಾರ ಒದಗಿಸುವ ವಿಚಾರ ಒಂದು ಜನಪದ ಆಶಯವಾಗಿದೆ. ಇದನ್ನು ಯೂರೋಪಿನಲ್ಲಿ ಪ್ರಸಿದ್ಧವಿರುವ 'ಇಬ್ಬರು ಸೋದರರ ಕಥೆ'ಗೆ ಮತ್ತು ಮಹಾಭಾರತದ ಬಕಾಸುರನ ಕಥೆಗೆ ಹೋಲಿಸಬಹುದಾಗಿದೆ. ಉಪಕಥೆಗಳಲ್ಲಿ 'ಶಿವಭೂತಿಯ ಕಥೆ' ರಮ್ಯವಾದುದು. ಮನುಷ್ಯನಿಗಿಂತ ಪ್ರಾಣಿಗಳೇ ಉತ್ತಮ ಎಂಬ ನೀತಿಯನ್ನು ಇದು ಪ್ರತಿಪಾದಿಸುತ್ತದೆ. ಬಾವಿಗೆ ಬಿದ್ದ ವ್ಯಾಧನನ್ನು ತೆಗೆಯಬೇಡವೆಂದು ಹುಲಿ ಹೇಳಿದಾಗ ಶಿವಭೂತಿಯಲ್ಲಿ ಉಂಟಾದ ಒಳತೋಟಿಯ ಚಿತ್ರವಿದು :

[1]ಪೊಲ್ಲ[2]ಗಡ ತೆಗೆಯಲಪ್ಪೊಡೆ
ಭಿಲ್ಲನನೆಂದೆನಗೆ [3]ಪುಂಡರೀಕಂ ಪೇೞ್ದಿ
ತ್ತಿಲ್ಲ ಭಯ ಪಕ್ಷಪಾತಮೆ
ಪೊಲ್ಲಮ ಪೊಲ್ಲದೆ ಪರೋಪಕಾರ ವ್ಯಸನಂ

ಈ ಸಮಯದಲ್ಲಿ ಶಿವಭೂತಿ ತಾಳುವ ಇಂಥ ನಿಲುವು ಮುಂದೆ ಅವನು ತೊಂದರೆಗೆ ಸಿಕ್ಕಿಕೊಳ್ಳುವಂತಾದರೂ, ತುದಿಯಲ್ಲಿ ನ್ಯಾಯ ದೊರಕಿಸಿಕೊಳ್ಳುತ್ತಾನೆ. ಪ್ರಾಯಃ ಇಂಥ ಕಥೆಗಳಲ್ಲೆಲ್ಲ

---

[1] ಪೊಲ್ಲ–ಕೆಟ್ಟದ್ದು, ಹೀನವಾದುದು; [2] ಗಡ–ಅಲ್ಲವೆ;
[3] ಪುಂಡರೀಕ–ಹುಲಿ.

ಎಡರುಗಳು ಎಷ್ಟೇ ಬಂದರೂ ಕಡೆಗೆ ಸತ್ಯ ಸದಿಚ್ಛೆಗಳು ಗೆಲ್ಲುತ್ತ ವೆಂದು ಹೇಳುವುದೇ ಉದ್ದೇಶವಾಗಿರುವಂತೆ ತೋರುತ್ತದೆ. "ಹಣ್ಣು ತಿಂದವ ನುಣುಚಿಕೊಂಡ, ಸಿಪ್ಪೆ ತಿಂದವ ಸಿಕ್ಕಿಕೊಂಡ" ಎಂಬ ಗಾದೆಯ ಸ್ವಾರಸ್ಯ ತಿಗಣೆ ಮತ್ತು ಕೂರೆಯ ಕಥೆಯಲ್ಲಿದೆ. ನಾಲ್ವರು ಧೂರ್ತರು ಬ್ರಾಹ್ಮಣನೊಬ್ಬನನ್ನು ವಂಚಿಸಿದ ಕಥೆ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತದೆ. ಯಜ್ಞಕ್ಕಾಗಿ ಆಡೊಂದನ್ನು ತೆಗೆದುಕೊಂಡು ಹೋಗುತ್ತಿದ್ದ ಬ್ರಾಹ್ಮಣ ನಿಗೆ ತಾನು ನಾಯನ್ನು ಹೊತ್ತುಕೊಂಡು ಹೋಗುತ್ತಿದ್ದೇನೆಂಬ ಭ್ರಮೆಯನ್ನು ತರುವುದರ ಮೂಲಕ ನಾಲ್ವರು ಧೂರ್ತರು ಆಡನ್ನು ಕಸಿದುಕೊಳ್ಳುವ ಇಲ್ಲಿನ ಚಿತ್ರ ರಂಜನೀಯವಾಗಿದೆ; ಅಂತರಾಳದಲ್ಲಿ ವಿಡಂಬನೆಯೂ ಇರುವಂತಿದೆ.

'ಪಂಚತಂತ್ರ'ದಲ್ಲಿ ಅನೇಕ ಸೂಕ್ತಿಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಧಾರ್ಮಿಕ ಮತ್ತು ತಾತ್ತ್ವಿಕ ಆಲೋಚನೆ ಗಳಿಗೆ ಮೀಸಲಾದರೆ, ಉಳಿದವೆಲ್ಲವೂ ಜೀವನದ ಸಾಮಾನ್ಯ ನಿಯಮಗಳನ್ನೂ ರಾಜಧರ್ಮವನ್ನೂ ಕುರಿತಿರುತ್ತವೆ. ಪರಿಣಾಮಕಾರಿಯಾದ ಸೂಕ್ತಿ ಪದ್ಯಗಳನ್ನು ಬರೆಯುವುದರಲ್ಲಿ ಕವಿಯ ಸಾಮರ್ಥ್ಯವನ್ನು ನೋಡಬಹುದು. ಆದರೆ ಈ ಪದ್ಯ ಗಳು ಎಷ್ಟರಮಟ್ಟಿಗೆ ದುರ್ಗಸಿಂಹನವು ಎಂದು ಹೇಳುವುದು ಕಷ್ಟ. ಇವು ಮೂಲಕೃತಿಯಲ್ಲಿ ಇದ್ದರೂ ಇರಬಹುದು. ದುರ್ಗ ಸಿಂಹ ವೀರ್ಯವತ್ತಾಗಿ ಬರೆಯಬಲ್ಲ ಎನ್ನುವುದಕ್ಕೆ,

ಪಿರಿದಾಳಾಪದೊಳೇಂ ಮೃಗ
[1]ಪರಿವೃಢ ನೀಂ ನಂಬು ನಂಬದಿರ್ ಕೈ ಕೊಳ್ ಮೇಣ್

[1] ಪರಿವೃಢ–ಶ್ರೇಷ್ಠ.

ಪರಿಹರಿಸು [1]ಗಂಧಸಿಂಧುರ
ವಿರೋಧಿ ನಿನ್ನಿಚ್ಚೆ ನಿನಗಮಂಜದೆ ನುಡಿವೆಂ

ಎಂಬಂತಹ ಪದ್ಯಗಳಲ್ಲಿಯು ಮಾತುಗಾರಿಕೆಯನ್ನು ಗಮನಿಸ ಬೇಕು.

ದುರ್ಗಸಿಂಹನ 'ಪಂಚತಂತ್ರ' ಬಹುಮಟ್ಟಿಗೆ ಅನುವಾದ ಗ್ರಂಥವಾಗಿರುವುದರಿಂದ ಇಲ್ಲಿ ಸಮಕಾಲೀನ ವಿಚಾರಗಳನ್ನು ಕಾಣುವುದು ಕಷ್ಟ. ಇಲ್ಲಿನ ಎಲ್ಲ ಕಥೆಗಳೂ ದೈನಂದಿನ ಜೀವನವನ್ನೇ ಕುರಿತು ಹೇಳುತ್ತವೆ. ಜೀವನದಲ್ಲಿ ಕಾಣುವ ವಂಚನೆ, ಮೋಸ, ದುರಾಶೆ, ಕೃತಘ್ನತೆ, ದಯಾ ಪರತೆ, ಪ್ರೀತಿ, ವಿಶ್ವಾಸ ಮುಂತಾದವುಗಳು ಇಲ್ಲಿ ಬರುವುದರಿಂದ ಜೀವನವೇ ನೇರವಾಗಿ ಪ್ರವೇಶಿಸಿದಂತಾಗುತ್ತದೆ. ಆದರೆ ಅವು ಗಳ ಅಭಿವ್ಯಕ್ತಿ ನೇರ, ಇಲ್ಲವೆ ವ್ಯಂಗ್ಯ ಮಾರ್ಗವನ್ನು ಹಿಡಿಯ ಬಹುದು. ಮಾನವನ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ ಗಳ ಮೇಲೆ ಬೆಳಕು ಚೆಲ್ಲುವ ಇಲ್ಲಿನ ವಿಷಯಗಳು ಯಾವ ಕಾಲ ವನ್ನು ಪ್ರತಿನಿಧಿಸುತ್ತವೆ ಎಂದು ಹೇಳುವುದು ಕಷ್ಟ. ಯಾವ ರಾಜರಿಗೂ ಮಾರ್ಗದರ್ಶಕವಾಗುವಂಥ ಲಕ್ಷಣಗಳನ್ನು ಇರಿಸಿ ಕೊಂಡು ಹೀಗೆ ಮಾಡಿರಬೇಕೆಂದು ತೋರುವುದು. ದುರ್ಗಸಿಂಹ ತನ್ನ ಆಶ್ರಯದಾತನ ವಿಚಾರವೊಂದನ್ನು ಬಿಟ್ಟರೆ, ಮತ್ತಾವುದೇ ಐತಿಹಾಸಿಕ ವಿಚಾರವನ್ನು ಕೃತಿಯಲ್ಲಿ ಹೇಳಿರುವಂತೆ ಕಂಡು ಬರುವುದಿಲ್ಲ. ಕಾವ್ಯದಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಸಾಂಸ್ಕೃತಿಕ ಉಲ್ಲೇಖ ಮತ್ತು ವಿಡಂಬನೆಗಳು ದುರ್ಗಸಿಂಹನ ಕಾಲದವೊ ಮೂಲ ಕರ್ತೃವಿನ ಕಾಲದವೊ ನಿಶ್ಚಯವಾಗಿ ಹೇಳು

[1] ಗಂಧಸಿಂಧುರ–ಮದಿಸಿದ ಆನೆ.

ವಂತಿಲ್ಲ. ದುರ್ಗಸಿಂಹನ ಸ್ವಂತಿಕೆ ಅಲ್ಲಲ್ಲಿ ಇರುವುದರಲ್ಲಿ ಅಸಂಭವವಾದದ್ದೇನೂ ಇಲ್ಲ.

'ಪಂಚತಂತ್ರ'ದಲ್ಲಿನ ಧಾರ್ಮಿಕ ಅಂಶಗಳ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳಬೇಕು. ಕೃತಿಯಲ್ಲಿ ಯಜ್ಞಯಾಗಾದಿಗಳು, ಬ್ರಾಹ್ಮಣ ವಿಧಿಶ್ರದ್ಧೆಗಳು, ಇವುಗಳನ್ನು ಕುರಿತ ವಿವರಗಳು ಬರುತ್ತವೆ. ಇವುಗಳಲ್ಲಿ ಕೆಲವೊಮ್ಮೆ ವ್ಯಂಗ್ಯವಿರುವಂತಿದೆ. ವೈದಿಕಸಂಪ್ರದಾಯದ ದುರ್ಗಸಿಂಹನ 'ಪಂಚತಂತ್ರ'ದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಅಂಶಗಳು ದೊರೆಯುವುದು ಸ್ವಾರಸ್ಯವಾಗಿದೆ. ಪಿಂಗಳಕನಿಗೆ ಸಂಜೀವಕ ಮಾಡಿದ ಅಹಿಂಸಾಧರ್ಮದ ಉಪದೇಶವನ್ನು ಇಲ್ಲಿ ನೆನೆಯಬಹುದು. ಹಾಗೆಯೇ ಜೈನ ಸಿದ್ಧಾಂತ ವಾದಿಗಳ ವಿಚಾರವೂ ಗಮನಾರ್ಹವಾದುದು. ಇದಲ್ಲದೆ, ಗ್ರಂಥದುದ್ದಕ್ಕೂ ಕೇವಲ ಜ್ಞಾನ, ಜನ್ಮಾಂತರ, ಆತ್ಮಧ್ಯಾನ, ಅಜಿತ, ದಿಗಂಬರ, ಸವಣ, ಚರಿಗೆ, ಪಂಚಾಶ್ಚರ್ಯ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಉಲ್ಲೇಖಗಳು ಬರುತ್ತವೆ. ಇದಕ್ಕೆ ಕಾರಣ ಹೇಳುವುದು ಕಷ್ಟ. ದುರ್ಗಸಿಂಹನ ಕಾಲದಲ್ಲಿ ಜೈನ ಧರ್ಮ ಕರ್ಣಾಟಕದಲ್ಲಿ ಇನ್ನೂ ಪ್ರಬಲವಾಗಿದ್ದುದರಿಂದ ಅವನ ಕೃತಿಯಲ್ಲಿ ಇಂಥ ಅಂಶಗಳು ನುಸುಳಿರಬಹುದು; ಅಥವಾ ವಸುಭಾಗಭಟ್ಟ ಗುಣಾಢ್ಯರ ಗ್ರಂಥಗಳಿಂದಲೇ ಅವು ಹರಿದು ಬಂದಿರಲೂಬಹುದು. ಈ ಬಗೆಯ ಕಥೆಗಳು ಬೇರೆ ಬೇರೆ ಧಾರ್ಮಿಕ ಸಂಪ್ರದಾಯಗಳಲ್ಲಿ ಹರಿಯುವಾಗ, ಆಯಾ ಧಾರ್ಮಿಕ ವಿಚಾರಗಳನ್ನು ಒಳಗೊಳ್ಳುವುದು ಯಾವಾಗಲೂ ಸಾಧ್ಯವಿರುತ್ತದೆ.

೭. ಭಾಷೆ, ಶೈಲಿ

ದುರ್ಗಸಿಂಹನ 'ಪಂಚತಂತ್ರ'ದ ಭಾಷೆ ಶೈಲಿಗಳು ಒಂದು ಸಂಕ್ರಮಣ ಸ್ಥಿತಿಯದು. ಮಾರ್ಗದಿಂದ ದೇಸಿಗೆ ಕ್ರಮಿಸುತ್ತಿರುವ ಸೂಚನೆಗಳು ದೊರೆಯುವುದು ಇದಕ್ಕೆ ಕಾರಣ. ದುರ್ಗಸಿಂಹನ ಶೈಲಿಯಲ್ಲಿ ಪಂಪ ರನ್ನಾದಿಗಳ ಪರಂಪರೆಯೇ ಮುಂದುವರಿದಂತೆ ಕಂಡರೂ, ವಸ್ತುವಿನ ಕಾರಣದಿಂದಲೊ ಏನೊ ಅದು ಸಡಿಲಗೊಳ್ಳುತ್ತಿರುವುದನ್ನು ಸುಲಭವಾಗಿ ಗುರುತಿಸಬಹುದು. ಕೆಲವು ಪದ್ಯ ಗದ್ಯಗಳಲ್ಲಿ ದೀರ್ಘ ಸಮಾಸಗಳನ್ನು ಅಲ್ಲಲ್ಲಿ ತಂದಿರುವುದನ್ನು ನೋಡಿದರೆ ಬೇಕೆಂದೇ ಶೈಲಿಯನ್ನು ಪ್ರೌಢವಾಗಿ ಮಾಡಿರುವಂತಿದೆ. ಆದರೆ ಕವಿ ತೀರ ಸರಳವಾಗಿ ಸುಲಭ ಶೈಲಿಯಲ್ಲಿಯೂ ಬರೆಯಬಲ್ಲ ಎಂಬುದಕ್ಕೆ ನಿದರ್ಶನಗಳು ದೊರೆಯುತ್ತವೆ:

> ಅಱಿದುವನಾ[1]ಳ್ದನೊಳ್ ಮುಳಿಸಿ ಮಾಣ್ದರಮೊಯ್ಯನೆ ಪೇೞದಾತನೇ
> ಕಱಹಿತನೆಯ್ದೆ[2] ಕೂರ್ಪವರ ಪೇೞ್ದುದನಿಂ[3]ಬೆನೆ ಕೇಳದಾತನೇ
> ಕಱವಿಭುಮಂತ್ರಿಯುಂ ನೃಪತಿಯುಂ ಬಗೆಗೊಂಡನುಕೂಲ ವೃತ್ತಿಯೊಳ್
> ನೆಱೆದಿರೆ ಕೂಡುಗುಂ ನಿಖಿಲ ರಾಜ್ಯ ವಿಭೂತಿಗಳಾವ ಕಾಲಮುಂ

ಸಾಮಾನ್ಯವಾಗಿ ವೃತ್ತಗಳಲ್ಲಿ ಪ್ರೌಢ ಸಂಸ್ಕೃತ ಬೆರೆತ ಭಾಷೆ ಕಂಡುಬಂದರೂ, ಮೇಲಿನದು ಅದಕ್ಕೆ ಅಪವಾದವೆನಿಸಿದೆ.

---

[1] ಆಳ್ದ–ಆಳುವವ, ಅರಸ; [2] ಕೂರ್ಪವರ್–ಪ್ರೀತಿಸುವವರು, ಹಿತಚಿಂತಕರು; [3] ಇಂಬೆನೆ–ಹಿತವಾದ ರೀತಿಯಲ್ಲಿ.

ಪ್ರಸಾದ ಗುಣದಿಂದ ಕೂಡಿರುವ ಈ ಪದ್ಯ ದುರ್ಗಸಿಂಹ ಮನಸ್ಸು ಮಾಡಿದರೆ ಸರಳವಾಗಿ ಬರೆಯಬಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಆದರೆ ಪಂಡಿತರನ್ನು ಮೆಚ್ಚಿಸಬೇಕೆಂಬ ಆಶಯ ಅವನಿಗೆ ಇರುವುದರಿಂದ ಪ್ರೌಢ ಮಾರ್ಗದಲ್ಲಿ ಬರೆಯುವುದೇ ಅವನ ವೈಶಿಷ್ಟ್ಯವಾಯಿತು. ಕಂದ ಪದ್ಯಗಳಲ್ಲಿ ಮತ್ತು ಗದ್ಯ ಭಾಗಗಳಲ್ಲಿ ಸ್ವಲ್ಪ ಮಟ್ಟಿನ ದೇಸಿ ಪ್ರಚುರವಾಗಿರುವುದನ್ನು ಗುರುತಿಸಬಹುದು.

ದುರ್ಗಸಿಂಹನ ಭಾಷೆಯಲ್ಲಿ ಮಾರ್ಗ ದೇಸಿಗಳ ಮಿಶ್ರಣ ಕಂಡು ಬಂದರೂ, ಅವನದು ಬಹುಮಟ್ಟಿಗೆ ಸಂಸ್ಕೃತಮಯವಾದ ಪ್ರೌಢ ಭಾಷಾ ಶೈಲಿಯೆಂದು ಹೇಳಬೇಕಾಗುತ್ತದೆ. ಅವನು ಬಳಸಿರುವ ಭಾಷೆ ಬಹುತೇಕವಾಗಿ ಅವನ ಕಾಲದ್ದಲ್ಲ ಎಂಬುದು ಸ್ಪಷ್ಟ. ಆದರೆ ಸಹಜವಾಗಿ ಕೆಲವೊಮ್ಮೆ ಅವನ ಕಾಲದ ಭಾಷೆ ಇಣುಕುವುದನ್ನು ಕಾಣುತ್ತೇವೆ. ಮುಖ್ಯವಾಗಿ ಇದು ಗೋಚರಿಸುವುದು ಅವನು ಬಳಸುವ ಗಾದೆಯ ಮಾತುಗಳಲ್ಲಿ. ಉದಾಹರಣೆಗೆ, "ತಾನುಳ್ಳಡೆ ಮೂರು ಲೋಕಮುಂಟು", "ಪಂದೆಯುಂ ಪಾವಡರ್ದಂತೆ", "ಮುಱಿದ ಬಿಲ್ಗೆ ಮೂವರಂಜಿದರ್", "ಹಿತ್ತಲಗಿಡು ಮದ್ದಲ್ಲ" ಮುಂತಾದವುಗಳನ್ನು ನೋಡಬಹುದು. ಇಂಥ ಮಾತುಗಳಿಂದ ಗ್ರಾಮೀಣ ಭಾಷೆ ಅವನ ಪ್ರೌಢ ಭಾಷೆಯ ನಡುವೆ ಒಡೆದು ಕಾಣುತ್ತದೆ. ಪಶುಪಕ್ಷಿಗಳಿಗೆ ಸಂಬಂಧಿಸಿದ ಸಂವಾದಗಳಲ್ಲಿ ಕೂಡ ಕೆಲವೊಮ್ಮೆ ಸರಳ ದೇಸಿ ಶೈಲಿ ಕಂಡು ಬರುವುದಿದೆ. ಕಾಗೆ ಮತ್ತು ನರಿಗಳ ನಡುವಿನ ಈ ಸಂವಾದವನ್ನು ಗಮನಿಸಿ: "ಎಲೆ ಭಾವ ಏಂ ಬಡವಾದಿರೆನೆ ಪಲವು ದಿವಸಮಾಹಾರಂಬಡೆಯದೆ ಬಡವಾಗಿ ನಿನ್ನಲ್ಲಿ ಆಸೆಪಟ್ಟು ಬಂದೆನ್". ಆದರೆ ಇದು ಹೆಚ್ಚು ಹೊತ್ತು ಮುಂದುವರಿಯು

ವುದಿಲ್ಲ. ಆದ್ದರಿಂದ ಸರಳ ಸುಲಭ ಜನಪ್ರಿಯ ಕಥೆಗಳನ್ನು ಆತ 'ಅನೋಘ'ವಾಗಿ ಹೇಳಿದ್ದಾನೆ ಎನಿಸುತ್ತದೆ. ಅದರಲ್ಲಿಯೇ ಅವನಿಗಿರುವ ಪದ ಸಾಮರ್ಥ್ಯ ಪಾಂಡಿತ್ಯಗಳು ಸ್ಪಷ್ಟವಾಗುತ್ತವೆ. ಕೆಲವೊಮ್ಮೆ ಕಥೆಯ ಭಾವಕ್ಕಿಂತ ಭಾಷೆ ಮುಂದಾಗಿ ಬಿಡುವುದು ಕ್ಲಿಷ್ಟತೆಗೆ ದಾರಿ ಮಾಡಿಕೊಡುತ್ತದೆ.

ಎಲ್ಲ ಪ್ರಾಚೀನ ಕವಿಗಳಂತೆ ದುರ್ಗಸಿಂಹನೂ ರೂಪಕ, ಉತ್ಪ್ರೇಕ್ಷೆ, ದೃಷ್ಟಾಂತ, ಅರ್ಥಾಂತರನ್ಯಾಸ ಮೊದಲಾದ ಅಲಂಕಾರಗಳನ್ನು ಬಳಸುತ್ತಾನೆ. ಆದರೆ ಕವಿಗೆ ಹೆಚ್ಚು ಒಲವಿರುವುದು ಉಪಮಾಲಂಕಾರದ ಕಡೆಗೆ. ಉದಾಹರಣೆಗೆ "[1]ಅಚ್ಚು ಮುರಿದಬಂಡಿಯಂತೆ", "ಕಳ್ಳರಂ ಕಂಡ [2]ಬೆಳ್ಳಾಳಂತೆ," "ಬಱಗಾಲದ ಕೆಱೆಯಂತೆ", "ರಾಮಂ ಕಾಕಾಸುರನಂ ಮುಳಿದಿಸುವಂತೆ"–ಇತ್ಯಾದಿಗಳನ್ನು ಗಮನಿಸಬಹುದು. ಇವು ಕಥಾಸಂದರ್ಭಗಳಿಗೆ ಪೂರಕವಾಗಿ ದುಡಿಯುವುದಲ್ಲದೆ, ಅವುಗಳ ಅರ್ಥವಂತಿಕೆಯನ್ನೂ ಹೆಚ್ಚಿಸುತ್ತವೆ. ಇಲ್ಲಿ ಬಳಕೆಗೊಂಡಿರುವ ಉಪಮೆಗಳೆಲ್ಲವೂ ಜೀವನಾನುಭವಕ್ಕೆ ನೇರವಾಗಿ ಸಂಬಂಧಪಡುವುದರಿಂದ ಗ್ರಂಥದ ಭಾಷಿಕ ಮೌಲ್ಯ ಅಧಿಕಗೊಳ್ಳಲು ಕಾರಣವಾಗಿವೆ. ನಯಸೇನನಂತೆ ದುರ್ಗಸಿಂಹನೂ ನಮಗೆ ಹತ್ತಿರವಾಗುವುದು ಇದಕ್ಕಾಗಿಯೇ.

ದುರ್ಗಸಿಂಹನ 'ಪಂಚತಂತ್ರ'ದ ಕಾವ್ಯ ರೂಪಕ್ಕೆ ಮೂರು ಮೆಟ್ಟಿಲುಗಳು: ಪದ್ಯ, ಶ್ಲೋಕ ಮತ್ತು ಶ್ಲೋಕದ ಟೀಕೆ. ಪದ್ಯಗಳೆಲ್ಲವನ್ನೂ ದುರ್ಗಸಿಂಹನ ಸ್ವಂತ ರಚನೆಗಳೆಂದು ಹೇಳಲು ಸಾಧ್ಯವಿದ್ದರೂ, ಶ್ಲೋಕಗಳನ್ನು ಹಾಗೆ ಹೇಳಲಾಗುವುದಿಲ್ಲ.

---

[1] ಅಚ್ಚು–ಕೀಲು; [2] ಬೆಳ್ಳಾಳ್–ಹೇಡಿ, ದಡ್ಡ.

ಕೆಲವನ್ನು ದುರ್ಗಸಿಂಹನೇ ಸ್ವತಃ ರಚಿಸಿರಲೂಬಹುದು. ಗದ್ಯದ ಪಾತ್ರವೂ ಹಿರಿದಾದುದೇ ; ಅದರ ವ್ಯಾಪ್ತಿ ಪದ್ಯಕ್ಕಿಂತ ಹೆಚ್ಚಿನ ದೆನ್ನಬೇಕು. ಪದ್ಯಗಳೂ ಗದ್ಯ ಭಾಗಗಳೂ ಮೂಲವನ್ನನು ಸರಿಸಿಯೂ ಕೆಲವು ಕಡೆ ಕವಿಯೇ ವಿಸ್ತರಿಸಿರಲೂಬಹುದು.

'ಪಂಚತಂತ್ರ' ಒಂದು ಚಂಪೂ ಕಾವ್ಯ ಎನ್ನಲಾಗಿದೆ. ಆದರೆ ಈ ಬಗೆಯ ಪದ್ಯ ಗದ್ಯ ಮಿಶ್ರಿತ ರೀತಿ ಮೂಲ 'ಪಂಚ ತಂತ್ರ'ದಲ್ಲಿಯೇ ಇತ್ತೆಂಬುದಕ್ಕೆ ಜನಪ್ರಿಯವಾಗಿರುವ ವಿಷ್ಣು ಶರ್ಮನ 'ಪಂಚತಂತ್ರ'ವೇ ಸಾಕ್ಷಿಯಾಗಿದೆ. ಆದ್ದರಿಂದ ದುರ್ಗಸಿಂಹನ 'ಪಂಚತಂತ್ರ' ಈ ದೃಷ್ಟಿಯಲ್ಲಿ ಹಿಂದಿನ ದಾರಿ ಯನ್ನು ಹಿಡಿದಿದೆ. ಕನ್ನಡದ ಸುಪರಿಚಿತ ಚಂಪೂ ರೀತಿ ಇದಕ್ಕಿಲ್ಲ. ಸ್ವತಂತ್ರವಾದ ಹಲವು ಕಥೆಗಳು ಕಥಾಶರೀರದಲ್ಲಿರುವುದು, ಶ್ಲೋಕಗಳೂ ಅವುಗಳ ಟೀಕೆಗಳೂ ನಡುನಡುವೆ ಕಾಣಿಸಿಕೊಳ್ಳು ವುದು, ಗದ್ಯಕ್ಕೆ ಪ್ರಾಶಸ್ತ್ಯ ಸಂದಿರುವುದು—ಇವುಗಳಿಂದ ಅದು ಗಮನಕ್ಕೆ ಬರುತ್ತದೆ. "ಗದ್ಯ ಪದ್ಯ ಮಿಶ್ರಿತವಾಗಿದ್ದು ಪಂಪಾದಿಗಳ ಪ್ರೌಢ ಚಂಪುವಿಗೆ ಹತ್ತಿರವಾಗಿದ್ದರೂ ಗದ್ಯದ ಹೆಚ್ಚಳ ಹಾಗೂ ಸರಳತೆಗಳಿಂದಲೂ ಅನೇಕ ಕಥೆಗಳನ್ನು ನೀತಿ ಶಾಸ್ತ್ರ ಪ್ರವಚನಕ್ಕಾಗಿ ವಿಶೇಷ ಕ್ರಮದಲ್ಲಿ ಪೋಣಿಸಿದ್ದರಿಂದಲೂ ಚಂಪುವಿಗಿಂತ ಅದು ಬೇರೆಯಾಗಿದೆ" ಎಂಬ ಮುಗಳಿಯವರ ಮಾತನ್ನು ಇಲ್ಲಿ ನೆನೆಯಬಹುದು.

ದುರ್ಗಸಿಂಹ ತನ್ನ ಗ್ರಂಥದಲ್ಲಿ ವಿವಿಧ ಛಂದೋರೂಪಗಳನ್ನು ಬಳಸಿದ್ದಾನೆ. ಶ್ಲೋಕಗಳು ಸಂಸ್ಕೃತದವು. ಕನ್ನಡಕ್ಕೆ ಸಂಬಂಧಿಸಿ ದಂತೆ ಹೇಳುವುದಾದರೆ, ಕಂದ ಪದ್ಯಗಳೇ ಹೆಚ್ಚು ; ಉಳಿದವು ಗಳಲ್ಲಿ ಖ್ಯಾತ ಕರ್ಣಾಟಕಗಳು ಮತ್ತು ಪೃಥ್ವಿ, ರಥೋದ್ಧತ, ಮಾಲಿನಿ, ಉಜ್ಜ್ವಲ, ಹರಿಣೀ, ಮದನನಾಯಕ, ದ್ರುತ

ವಿಲಂಬಿತ ಬರುತ್ತವೆ. ದೇಶೀಯ ವೃತ್ತಗಳಲ್ಲಿ ತ್ರಿಪದಿ, ಪಿರಿಯಕ್ಕರಗಳಿವೆ; ಷಟ್ಪದಿ ಪ್ರಾಕೃತದ ಪದ್ಧತಿಕೆಯ ಪ್ರತಿರೂಪ.

೮. ಮುಕ್ತಾಯ

ದುರ್ಗಸಿಂಹನ 'ಪಂಚತಂತ್ರ'ದ ನೆಲೆ ಬೆಲೆಗಳನ್ನು ಕುರಿತು ಒಂದೆರಡು ಮಾತು. 'ಪಂಚತಂತ್ರ' ನೀತಿ ಕಥೆಗಳ ಸಂಗ್ರಹವಾಗಿದ್ದು, ಪ್ರಾಯೋಗಿಕ ರಾಜಕೀಯ ಶಾಸ್ತ್ರದ ಅಂಗವಾಗಿ ಇಲ್ಲಿನ ಕಥೆಗಳೆಲ್ಲ ಬರುತ್ತವೆ. ಆದ್ದರಿಂದ ಇದು ನೀತಿ ಕಾವ್ಯವಾಗಿ ಪರಿಗಣಿತವಾಗುತ್ತವೆಯೇ ಹೊರತು, ಶುದ್ಧ ಕಾವ್ಯವಾಗಿ ನಿಲ್ಲುವುದಿಲ್ಲ. ಕಥೆಗಳಲ್ಲಿನ ನೀತಿಯನ್ನು ಸಮರ್ಥಿಸುವುದಕ್ಕಾಗಿಯೇ ಭಿನ್ನ ಮೂಲಗಳಿಂದ ರಾಜನೈತಿಕ ವ್ಯಾಖ್ಯೆಗಳು ಉದ್ಧೃತಗೊಳ್ಳುತ್ತವೆ. ಕೃತಿಯಲ್ಲಿ ಹಾಸ್ಯ ಕರುಣ ರಸಗಳಿಗೆ ಸಂಬಂಧಿಸಿದಂತೆ ಬರುವ ಕೆಲವೊಂದು ಪ್ರಸಂಗಗಳು ಮನಸ್ಸನ್ನು ಮಿಡಿಯುತ್ತವೆಯಾದರೂ, ಇಡೀ ಕಾವ್ಯದ ಕಾವ್ಯತ್ವಕ್ಕೆ ಅವು ನೆಲೆಗಟ್ಟಾಗುತ್ತವೆಂದು ತೋರುವುದಿಲ್ಲ. ಇವು ನೀತಿ ಪ್ರತಿಪಾದನೆಯ ಮನೋರಂಜಕ ಸಾಮಗ್ರಿಗಳೇ ಹೊರತು, ಕಲಾತ್ಮಕ ಚಟುವಟಿಕೆಯ ಫಲವಾಗಿ ಮೂಡಿದವಲ್ಲ.

ವಸುಭಾಗಭಟ್ಟನ 'ಪಂಚತಂತ್ರ' ದೊರಕಿಲ್ಲವಾದ ಕಾರಣ, ಪ್ರಸ್ತುತ ಕೃತಿಯ ಮೌಲ್ಯ ನಿರ್ಣಯ ಅನಿರ್ದಿಷ್ಟವಾಗುತ್ತದೆ. ದುರ್ಗಸಿಂಹ ಮೂಲ ಕೃತಿಕಾರನಿಗಿಂತ ಯಾವ ಅಂಶಗಳಲ್ಲಿ ಬೇರೆಯಾಗುತ್ತಾನೆಂಬುದರ ಮೇಲೆ ಅವನ ವಿಶಿಷ್ಟತೆಯಿದೆ. ಸದ್ಯದ ಸ್ಥಿತಿಯಲ್ಲಿ ಇದು ಸಾಧ್ಯವಾಗದು.

ಕಥೆಗಳನ್ನು ಮೂಲ ಕೃತಿಯಿಂದ ಅನುವಾದಿಸಿಕೊಂಡು ರಚಿಸುವಾಗ ಅವುಗಳ ರಚನಾ ಕೇಂದ್ರವನ್ನು ಬದಲಿಸುವುದಾಗಲಿ ಅಥವಾ ವಿಸ್ತರಿಸುವುದಾಗಲಿ ಸಾಧ್ಯವಿರುವುದಿಲ್ಲ. ಈ ಮಾತು ಜನಪದದಿಂದ ಕಥೆಗಳನ್ನು ಸ್ವೀಕರಿಸಿಕೊಂಡಿರಬಹುದಾದ ಮೂಲ ಕೃತಿಕಾರನಿಗೇ ಅನ್ವಯವಾಗುವುದರಿಂದ, ದುರ್ಗಸಿಂಹ ತನ್ನ ಕಲಾತ್ಮಕತೆಯಲ್ಲಿ ಹೇಗೆ ವೈಶಿಷ್ಟ್ಯ ಸಾಧಿಸಿದ್ದಾನೆಂಬುದರಲ್ಲಿ ಅನಿಶ್ಚಯತೆ ಇದೆ. ವಸುಭಾಗಭಟ್ಟನ 'ಪಂಚತಂತ್ರ'ದ ಜೊತೆಗೆ ಉಳಿದ ಬೇರೆ ಬೇರೆ ಮೂಲಗಳಿಂದ ಕಥಾಂಶಗಳನ್ನು ದುರ್ಗಸಿಂಹ ಸ್ವೀಕರಿಸಿರಬಹುದೆಂಬುದನ್ನು ಒಪ್ಪಿಕೊಂಡರೂ, ಆಗಲೂ ಅವುಗಳ ಕ್ರಮಬದ್ಧ ಜೋಡಣೆಯಷ್ಟೇ ಅವನ ಪಾಲಿಗಿರುತ್ತದೆ. ಸಾಹಿತ್ಯಿಕ ಪರಂಪರೆಯಲ್ಲಿ ಇಂಥ ಕಥೆಗಳು ಪಾಠಾಂತರ ಪಡೆಯುವುದು ಇದೇ ರೀತಿಯಲ್ಲಿಯೇ. ದುರ್ಗಸಿಂಹ ಕಥೆಗಳಿಗೆ ವಿವರಣೆ ಅಥವಾ ವರ್ಣನೆಗಳನ್ನು ಸೇರಿಸುವುದರ ಮೂಲಕ ತನ್ನತನವನ್ನು ತುಂಬಿರಬಹುದು.

'ಪಂಚತಂತ್ರ'ದ ಕಥೆಗಳಲ್ಲಿ ಹೆಸರುಗಳ ಉಲ್ಲೇಖವಿದ್ದು, ಈ ದೃಷ್ಟಿಯಲ್ಲಿ ಜನಪದ ಕಥೆಗಳೊಡನೆ ವೈದೃಶ್ಯವನ್ನು ಸ್ಥಾಪಿಸುತ್ತವೆ. ಆದರೆ ಹೆಸರುಗಳ ಉಲ್ಲೇಖದಿಂದ ಕಥೆಯ ಮೂಲ ಉದ್ದೇಶ ಆಶಯಗಳಲ್ಲಿ ಅಂಥ ಬದಲಾವಣೆಯೇನೂ ಆಗುವುದಿಲ್ಲ. ಇದು ಕಥೆಗಳಲ್ಲಿ ಸಾರ್ವತ್ರಿಕ ಪರಿಸರವನ್ನು ವೈಯಕ್ತಿಕ ಸಾಮೀಪ್ಯಕ್ಕೆ ತಂದುಕೊಳ್ಳುವ ತಂತ್ರ, ಅಷ್ಟೆ. ಪ್ರಾಣಿ ಪಕ್ಷಿಗಳ ಪಾತ್ರಗಳಿಗೆ ಮಾನವ ವರ್ತನೆಯನ್ನು ಇದು ಆರೋಪಿಸುತ್ತದೆ ಎಂದಿಟ್ಟುಕೊಂಡರೂ, ಇಂಥ ಲಕ್ಷಣ ಜನಪದ ಕಥೆಗಳಲ್ಲಿಯೇ ಇರುತ್ತವೆ; ಪಾತ್ರಗಳಿಗೆ ಹೆಸರು ಕೊಡುವುದಷ್ಟೇ ಇವುಗಳ ನಡುವಿನ ವ್ಯತ್ಯಾಸ. ಇಂಥ ಹೆಸರುಗಳನ್ನು ದುರ್ಗ

ಸಿಂಹ ಮೂಲ ಕೃತಿಯಿಂದಲೇ ಪಡೆದಿರಬಹುದು, ಕೆಲವೊಮ್ಮೆ ಪರ್ಯಾಯವಾಗಿ ಹೊಸ ಹೆಸರುಗಳನ್ನು ಸೇರಿಸಿರಲೂಬಹುದು. ದುರ್ಗಸಿಂಹ ಮೂಲದಿಂದ ಕಥೆಗಳನ್ನು ಸ್ವೀಕರಿಸಿದಾಗ ಬಹಳ ಸಾರಿ ಅವುಗಳನ್ನು ಇದ್ದಂತೆ ಇಟ್ಟಿರಬಹುದಾದರೂ, ಕೆಲವು ಸಾರಿ ಸಂಕ್ಷೇಪಗೊಳಿಸಿರುವಂತೆಯೂ ಕಂಡುಬರುತ್ತದೆ.

'ಪಂಚತಂತ್ರ'ದ ಕಥೆಗಳು ಜಗತ್ತಿನ ಹಲವಾರು ಭಾಷೆಗಳಲ್ಲಿ ಪ್ರಸಿದ್ಧವಾಗಿವೆ. ಈ ದೃಷ್ಟಿಯಿಂದ ಅವಕ್ಕೆ ವಿಶ್ವವ್ಯಾಪಕತೆಯೊಂದು ದೊರೆತಿದೆ. ಇಂಥ ಜಾಗತಿಕ ಮೌಲ್ಯ ದುರ್ಗಸಿಂಹನ 'ಪಂಚತಂತ್ರ'ಕ್ಕೆ ಸಲ್ಲುತ್ತದೆ ಎಂದಲ್ಲ, ಅದು ಅದರ ಹಿಂದಿನ ಕೃತಿಗಳಿಗೆ ಸಲ್ಲುತ್ತದೆ. ಹಾಗಾದರೆ ದುರ್ಗಸಿಂಹನ 'ಪಂಚತಂತ್ರ'ದ ಮಹತ್ವವಾದರೂ ಏನು? ಸಂಸ್ಕೃತದ 'ಪಂಚತಂತ್ರ'ವನ್ನು ಕನ್ನಡಕ್ಕೆ ಅನುವಾದಿಸಿ, ಆ ಮೂಲಕ ಕನ್ನಡದಲ್ಲಿ ಹೊಸ ಸಾಹಿತ್ಯಿಕ ಪ್ರವೃತ್ತಿಯೊಂದನ್ನು ಆತ ತಂದುಕೊಟ್ಟ. ಆತನ ಕೃತಿ ವಸುಭಾಗಭಟ್ಟನ ಕಥಾಸಂಪ್ರದಾಯವನ್ನು ಹಿಡಿದದ್ದೆಂದು ಆತನ ಹೇಳಿಕೆಯಿಂದಲೇ ತಿಳಿಯುವುದರಿಂದ, ಇಂದು ಅನುಪಲಬ್ಧವಾಗಿರುವ ಆ ಸಂಪ್ರದಾಯ ಮೂಲದಲ್ಲಿ ಯಾವ ಸ್ವರೂಪದಲ್ಲಿದ್ದಿರಬಹುದೆಂದು ತಿಳಿಯಲು ಸ್ವಲ್ಪ ಮಟ್ಟಿಗಾದರೂ ಇದರಿಂದ ಸಹಾಯ ದೊರೆತಂತಾಗಿದೆ. ಅಲ್ಲದೆ ಸರಸವಾದ ಹಾಸ್ಯ ವಿಡಂಬನೆಗಳು, ಹಳಗನ್ನಡ ದೇಸಿಯ ಸೌಂದರ್ಯ ವೈವಿಧ್ಯಗಳು ಕೃತಿಗೆ ಕೆಲಮಟ್ಟಿನ ವೈಶಿಷ್ಟ್ಯವನ್ನು ತಂದುಕೊಟ್ಟಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಇದಕ್ಕೆ ಬೆಲೆಯಿದೆ ಎನ್ನಬಹುದು. ಹಳಗನ್ನಡದ ಗದ್ಯದ ಇತಿಹಾಸದಲ್ಲಿಯೂ ಇದಕ್ಕೆ ಒಂದು ಸ್ಥಾನವಿದೆ ಎಂಬುದನ್ನು ಮರೆಯುವಂತಿಲ್ಲ.

ಗ್ರಂಥಋಣ

1. ಕರ್ಣಾಟಕ ಪಂಚತಂತ್ರಂ—ಸಂ. ಎನ್. ಅನಂತರಂಗಾಚಾರ್
2. ಕರ್ಣಾಟಕ ಕವಿಚರಿತೆ, ಸಂ. ೧—ಆರ್. ನರಸಿಂಹಾಚಾರ್ಯ
3. ಅಭಿನವಪಂಪ—ಕರ್ಣಾಟಕ ಸಂಘ, ಧಾರವಾಡ
4. ಅಭಿವಂದನೆ—ಮೈಸೂರು
5. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ—ತ. ಸು. ಶಾಮರಾಯ ಮತ್ತು ಮೇ. ರಾಜೇಶ್ವರಯ್ಯ
6. ಕನ್ನಡ ಸಾಹಿತ್ಯ ಚರಿತ್ರೆ—ರಂ. ಶ್ರೀ. ಮುಗಳಿ
7. The Early History of the Deccan, Parts I-VI-Ed. G. Yazdani
8. The Panchatantra—A. W. Ryder
9. A History of Sanskrit Literature —V. Varadachari
10. A History of Sanskrit Literature —A. B. Keith
11. History of Sanskrit Literature —A. A. Macdnonell

ಪತ್ರಿಕೆಗಳು

1. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೨೦
2. ಪ್ರಬುದ್ಧ ಕರ್ಣಾಟಕ, ಸಂ. 39–4; 43–3
3. Indian Historical quarterly, Vol–X, 1934

ಕೆ.ಸ. ೭೪೩೮೯—ಮೈ.ವಿ.ವಿ.ಮು.—೫,೦೦೦ ಪ್ರತಿಗಳು—೧೯-೫-೭೩

ಕೆಲವು ಸಾಹಿತ್ಯ ಕೃತಿಗಳು

ಬೆಲೆ: ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣ ಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ